
ನಮ್ಮ ಮಾನಸ

ಸಂಪುಟ : 5 ಜುಲೈ 2011 ಸಂಚಿಕೆ : 3



ಈಗ ನಾನು
ದೊಡ್ಡವಳಾಗಿದ್ದೇನೆ
ತಾರೆಯನ್ನು ಕಿತ್ತು
ಮಡಲಿಗೆ ಹಾಕಿಕೊಳ್ಳುವಷ್ಟು
ಎತ್ತರಕ್ಕೆ ಬೆಳೆದಿದ್ದೇನೆ

ಒಂಟಿಯಾಗಿ ಸುತ್ತುತ್ತಿರುವ
ಹದ್ದುಗಳೀಗ ನೋಡುತ್ತಿವೆ
ನನ್ನನ್ನು
ಸುಮ್ಮನೆ ನೋಡುತ್ತಿವೆ

ನಮ್ಮ ಮಾನಸ

ಜುಲೈ 2011
ಸಂಪುಟ : 5 ಸಂಚಿಕೆ : 3

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಚಂದಾ ವಿವರ

ಬಿಡಿಪ್ರತಿ	**8–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ
2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ),
ಅನಂತರ 'ಮಾನಸ',
ಈಗ 'ನಮ್ಮ ಮಾನಸ'

ಸಂಪಾದಕೀಯ

ಕ್ರೌರ್ಯದ ಪರಮಾವಧಿ; ಸಮಸ್ಯೆಗಳೂ... ಪ್ರಶ್ನೆಗಳೂ....

ನಮ್ಮ ಸಂಪ್ರದಾಯಗಳು, ಪದ್ಧತಿಗಳು, ರೂಢಿಗಳು, ನಂಬಿಕೆಗಳು ಮಹಿಳೆಯರ ಪರವಾಗಿವೆಯೇ? ಅವು ಶೋಷಣಾ ರಹಿತವಾಗಿಯೆ? ಆಕೆಯನ್ನು ಅವು ತುಳಿಯುತ್ತಿವೆಯೆ? ಆಕೆಯ ಉಸಿರುಗಟ್ಟಿಸುವಂತಿವೆಯೇ? ಹಾಗೆ ನೋಡಿದರೆ ಎಲ್ಲಾ ಧರ್ಮಗಳೂ ಸಂಸ್ಕೃತಿಯನ್ನು ರಕ್ಷಿಸುವ ಹೊಣೆಯನ್ನು ಮಹಿಳೆಯರ ಹೆಗಲಮೇಲೆ ಹೊರಿಸಿ ಧರ್ಮ, ಸಂಸ್ಕೃತಿಯ ವಕ್ತಾರರೆಲ್ಲರೂ ರಿಮೋಟ್ ಕಂಟ್ರೋಲ್‌ಗಳಂತೆ ಮಹಿಳೆಯರ ಬದುಕನ್ನು ನಿಯಂತ್ರಿಸುವುದು ಕಂಡುಬರುತ್ತದೆ. ಇದು ಎಲ್ಲ ಧರ್ಮ, ಸಂಸ್ಕೃತಿ, ಜಾತಿ, ಜನಾಂಗಗಳಿಗೂ ಅನ್ವಯವಾಗುತ್ತದೆ. ಸ್ವಾತಂತ್ರ್ಯ, ಸಮಾನತೆಯನ್ನು ಹಂಬಲಿಸುವ ಎಲ್ಲರಿಗೂ ಇದು ಐತಿಹಾಸಿಕವಾದ ಒಂದು ಮೂಲಭೂತ ಪ್ರಶ್ನೆಯಾಗಿದೆ.

ಪುರುಷ ಪ್ರಧಾನ ಪರಿಕಲ್ಪನೆ, ವರ್ಗ, ಜಾತಿವ್ಯವಸ್ಥೆ, ಅಧಿಕಾರಶಾಹಿ ಒಟ್ಟಿಗೆ ಸೇರಿ ಮಹಿಳೆಯರನ್ನು, ವಿಶೇಷವಾಗಿ ದುರ್ಬಲ ಹಾಗೂ ದಲಿತ ಮಹಿಳೆಯರನ್ನು ತುಳಿದ ನಿದರ್ಶನಗಳು ನಮ್ಮ ಕಣ್ಣುಮುಂದಿವೆ. ಅಂಕುಶ ಪ್ರಬಲವಾಗುತ್ತಾ ಹೋದ ಹಾಗೆ ಮಹಿಳೆಗೆ ನ್ಯಾಯ ಸಿಗುವುದು ಮರೀಚಿಕೆಯಾಗುತ್ತದೆ. ಪ್ರಸ್ತುತ ಸನ್ನಿವೇಶದಲ್ಲಿ ಕೆಲವರ ಹಿತಾಸಕ್ತಿಯನ್ನು ಕಾಪಾಡುವುದೇ ಮುಖ್ಯ ಉದ್ದೇಶವಾಗಿರುವುದರಿಂದ ದನಿಇಲ್ಲದ ಜನರನ್ನು ಮೂಲೆಗುಂಪಾಗಿಸಿ, ಬದುಕುವ ಹಕ್ಕನ್ನೇ ಕಿತ್ತುಕೊಳ್ಳಲಾಗುತ್ತಿದೆ.

ಪ್ರಸ್ತುತ ರಾಜಕೀಯ ಪಕ್ಷಗಳ ಹಿನ್ನೆಲೆಯಲ್ಲಿ ಧ್ರುವೀಕರಣಗೊಳ್ಳುತ್ತಿರುವ ಶ್ರೇಣೀಕೃತ ಜಾತಿ ವ್ಯವಸ್ಥೆಯಿಂದ ತುಳಿತಕ್ಕೊಳಗಾಗುತ್ತಿರುವವರು ದಲಿತರು, ಮಹಿಳೆಯರು ಹಾಗೂ ಅಲ್ಪಸಂಖ್ಯಾತರು. ಯಾವುದೇ ರಾಜಕೀಯ ಪಕ್ಷ ಅಧಿಕಾರದಲ್ಲಿದ್ದರೂ ದಲಿತರ–ವಿಶೇಷವಾಗಿ ದಲಿತ ಮಹಿಳೆಯರ ಸ್ಥಾನಮಾನ ಹಾಗೂ ಸ್ಥಿತಿಗತಿಗಳಿಗೂ ವಾಸ್ತವಾಂಶಕ್ಕೂ ಅಜಗಜಾಂತರ ವ್ಯತ್ಯಾಸವಿರುವುದು ಕಂಡುಬರುತ್ತದೆ. ಉತ್ತರ ಭಾರತದ ಗ್ರಾಮೀಣ ದಲಿತರ ಬದುಕು ದಾರುಣವಾಗಿದೆ. ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಶೋಷಣೆ ಮಾನವೀಯತೆಯನ್ನು ಮೀರಿದ ಕ್ರೌರ್ಯವನ್ನು ಗಮನಿಸಿದರೆ, ನಮ್ಮ ಪ್ರಜಾಪ್ರಭುತ್ವ ಎತ್ತಿಹಿಡಿಯುವ ಸಮಾನತೆ, ಸ್ವಾತಂತ್ರ್ಯ, ಹಕ್ಕುಗಳು ಮುಂತಾದ ಪರಿಕಲ್ಪನೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆಯೇ ಮೂಲಭೂತವಾದ ಪ್ರಶ್ನೆಗಳನ್ನು ಎತ್ತುತ್ತವೆ.

ಒರಿಸ್ಸಾದಲ್ಲಿ ನಡೆದ ಈ ಘಟನೆ ಸಾಂಪ್ರದಾಯಿಕ ಹಿಂದೂಮನಸ್ಸಿಗೆ ಹಿಡಿದ ಕನ್ನಡಿಯಾಗಿದೆ. ಒರಿಸ್ಸಾ ರಾಜ್ಯದ ರಣಪದ ಗ್ರಾಮದ ಮಹಿಳೆಯರು ಗ್ರಾಮದ ದೇವಸ್ಥಾನವನ್ನು ಪ್ರವೇಶಿಸಿ ದೇವರಿಗೆ ನಮಸ್ಕಾರ ಮಾಡಿದ್ದರು. ಈ ಪ್ರಕರಣದಿಂದ ಕೋಪಗೊಂಡಿದ್ದ ಮೇಲ್ಜಾತಿ ಜನಾಂಗದವರು ಗ್ರಾಮದಲ್ಲಿನ 83 ದಲಿತ ಕುಟುಂಬಗಳನ್ನು ಬಹಿಷ್ಕರಿಸಿದರು. ಗೇಣಿಗಾಗಿ ನೀಡಿದ್ದ ಜಮೀನನ್ನು ವಾಪಸ್ ಪಡೆಯಲಾಯಿತು. ಆಹಾರಕ್ಕಾಗಿ ಅದನ್ನೇ ಆಶ್ರಯಿಸಿದ್ದ ದಲಿತರಿಗೆ ಆಹಾರದ ಭದ್ರತೆಯೂ ಇಲ್ಲದಂತಾಯಿತು. ದೂರು ದಾಖಲಿಸಿದ್ದರೂ ನಾಮಕಾವಾಸ್ತೆಗೆ ಕೆಲವರನ್ನು ಬಂಧಿಸಲಾಯಿತು. ಪೊಲೀಸರ ಹಾಗೂ ಅಧಿಕಾರಶಾಹಿಯ ಪೂರ್ವಾಗ್ರಹ, ನಿರ್ಲಕ್ಷ್ಯದಿಂದಾಗಿ ಗ್ರಾಮದಸ್ಥಿತಿ ಸಂಪೂರ್ಣವಾಗಿ ಬಿಗಡಾಯಿಸಿತು. ದಲಿತರ ಬದುಕುವ ಹಕ್ಕನ್ನೇ ಕಿತ್ತುಕೊಂಡ ಜಾತಿವ್ಯವಸ್ಥೆಯೊಂದಿಗೆ ಅಧಿಕಾರಶಾಹಿಯು ಕೈ ಜೋಡಿಸಿರುವುದು ಈ ಘಟನೆಯಲ್ಲಿ ಸ್ಪಷ್ಟವಾಗಿತ್ತು.

ಒರಿಸ್ಸಾದ ಗ್ರಾಮವೊಂದರಲ್ಲಿ ಮಗನ ಹಾಗೂ ಗಂಡನ ಎದುರಿನಲ್ಲಿಯೇ ದಲಿತಮಹಿಳೆಯ ಮೇಲೆ ಅತ್ಯಾಚಾರವೆಸಗಿದ ಘಟನೆ ನಡೆದಿದೆ. ಜೇನುತುಪ್ಪ ಮಾರಾಟಮಾಡಿ ವಾಪಸ್ ಬರುತ್ತಿದ್ದಾಗ ದಾರಿಯಲ್ಲಿ ಕುಟುಂಬದ ಮೇಲೆ ಹಲ್ಲೆ ಮಾಡಿ ಹಣವನ್ನು ದೋಚಿ,

ಆಕೆಯ ಮೇಲೆ ಅತ್ಯಾಚಾರವೆಸಗಿ ಕೊಂದು ಹಾಕಲಾಗಿದೆ. ಉತ್ತರ ಪ್ರದೇಶದಲ್ಲಿ 72 ಗಂಟೆಗಳಲ್ಲಿ ಐದುಜನ ಮಹಿಳೆಯರಮೇಲೆ ಇಂತಹ ಹಲ್ಲೆ ನಡೆಸಲಾಗಿದೆ. ಹೊಲಿಗೆ ತರಬೇತಿ ಪಡೆಯಲು ಹೋದ ಬಾಲಕಿಯಮೇಲೆ ಅತ್ಯಾಚಾರವೆಸಗಲಾಗಿದೆ. ಇಟಾನಗರದಲ್ಲಿ ದಲಿತ ಮಹಿಳೆಯಮೇಲೆ ಸಾಮೂಹಿಕ ಅತ್ಯಾಚಾರವೆಸಗಿ ಸುಟ್ಟು ಹಾಕಲಾಗಿದೆ. ಕನೌಜ್ ಜಿಲ್ಲೆಯ ದಲಿತ ಬಾಲಕಿಯೊಬ್ಬಳು ತನ್ನ ಮೇಲಿನ ಅತ್ಯಾಚಾರ ಪ್ರಯತ್ನವನ್ನು ವಿರೋಧಿಸಿದ ಕಾರಣಕ್ಕೆ ಆಕೆಯ ಕಣ್ಣುಗಳನ್ನು ಚಾಕುವಿನಿಂದ ಇರಿಯಲಾಗಿದೆ. 14 ವರ್ಷದ ಬಾಲಕಿಯೊಬ್ಬಳು ಲಕೀಂಪುರ ಜಿಲ್ಲೆಯಲ್ಲಿ ಪೊಲೀಸ್ ಠಾಣೆಯ ಎದುರಿಗೆ ನೇಣು ಹಾಕಿಕೊಂಡಿದ್ದಾಳೆ.

ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳನ್ನು, ವಿಶೇಷವಾಗಿ ದಲಿತ ಮಹಿಳೆಯರಾಗಿದ್ದರೆ ಅಂಥ ಪ್ರಕರಣಗಳನ್ನು ಮುಚ್ಚಿ ಹಾಕಲು ಪ್ರಯತ್ನಿಸಲಾಗುತ್ತಿದೆ. ರಾಜಕೀಯ ಒತ್ತಡ, ಪ್ರಬಲ ಜಾತಿಯ ನಾಯಕರ ಒತ್ತಡದಿಂದಾಗಿ ದೂರುಗಳನ್ನು ದಾಖಲಿಸದೇ ಇರುವುದು ಅಥವಾ ವಿಳಂಬ ಮಾಡುವುದು, ದೂರು ದಾಖಲಿಸುವಾಗ ಸರಿಯಾದ ಕ್ರಮವನ್ನು ಅನುಸರಿಸದೇ ಇರುವುದು, ಆಕೆಯ ಚಾರಿತ್ರ್ಯವಧೆ ಮಾಡುವುದು ಮುಂತಾದವು ನಡೆಯುತ್ತವೆ. ಮಹಿಳೆಯೆಂದರೆ ಭೋಗದ ಸರಕು, ಭೋಗದ ವಸ್ತುವೆಂಬ ಪುರುಷನ ಮನೋಭಾವನೆಯಲ್ಲಿ ಇಂದಿಗೂ ಯಾವುದೇ ಬದಲಾವಣೆಯಾಗಿರುವುದಿಲ್ಲ. ಜಾತಿ ತಾರತಮ್ಯದ ಜೊತೆಗೆ ಜಾಗತೀಕರಣ ಹಾಗೂ ಭೋಗಸಂಸ್ಕೃತಿ ಮುಂತಾದ ಪ್ರಭಾವದಿಂದ ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆಯ ಪ್ರಮಾಣ ಹೆಚ್ಚುತ್ತಲೇ ಇದೆ. ಮಹಿಳೆಯರಿಗೆ ಮನೆಯೊಳಗೆ, ಮನೆಯ ಹೊರಗೆಯೂ ಸುರಕ್ಷತೆ ದೊರೆಯದಿದ್ದರೆ ಆಕೆ ರಕ್ಷಣೆಯನ್ನು ಪಡೆಯುವುದಾದರೂ ಎಲ್ಲಿ?

ಭಂಗೀ ಸಮುದಾಯದ ಪುರುಷರು ಹಾಗೂ ಮಹಿಳೆಯರು ಇಂದಿಗೂ ತಲೆಯ ಮೇಲೆ ಮಲಹೊರುತ್ತಾರೆ. ಶೌಚಾಲಯಗಳನ್ನು ಶುಚಿಗೊಳಿಸುತ್ತಾರೆ. ಇವರ ಸ್ಥಿತಿಗತಿಯು ನಾಚಿಕೆಯಿಂದ ತಲೆ ತಗ್ಗಿಸುವಂತಿದೆ. ಮನುಷ್ಯರ ಮಲವನ್ನು ಶುಚಿಗೊಳಿಸುವ ಇವರು ನೀರು ಕೇಳಿದರೆ ನಾಗರೀಕ ಸಮಾಜ ದೂರದಿಂದ ನೀರು ಕೊಡುತ್ತವೆ, ದೂರದಿಂದ ಊಟವನ್ನು ಎಸೆಯಲಾಗುತ್ತದೆ.

1993ರಲ್ಲಿ ಮಲಹೊರುವ ಪದ್ಧತಿಯನ್ನು ರದ್ದುಗೊಳಿಸಲಾಗಿದ್ದರೂ ಈ ಪದ್ಧತಿ ಉತ್ತರಪ್ರದೇಶ, ಒರಿಸ್ಸಾ ಬಿಹಾರಗಳಲ್ಲಿ ಇನ್ನೂ ಜೀವಂತವಾಗಿದೆ. ಒಂದು ಅಂದಾಜಿನ ಪ್ರಕಾರ ಸುಮಾರು ಒಂದು ಲಕ್ಷ ಜನರು ಈ ವೃತ್ತಿಯಲ್ಲಿ ಇದ್ದಾರೆ.

ಇತ್ತೀಚೆಗೆ ಉತ್ತರಪ್ರದೇಶದ ಪುಣ್ಯಸ್ಥಳವೆಂದು ಖ್ಯಾತಿಯಾದ ಕಾಶಿಯಲ್ಲಿ ಮಲಹೊರುವ ಭಂಗೀ ಸಮುದಾಯದ 203 ಜನ ಮಹಿಳೆಯರ ಗುಂಪು ಗಂಗಾನದಿಯಲ್ಲಿ ಮುಳುಗಿ ಹರಹರ ಮಹದೇವ ಎನ್ನುತ್ತಾ ದೇವಸ್ಥಾನಕ್ಕೆ ಬಂದ ನಂತರ, ಸಂಸ್ಕೃತ ಶ್ಲೋಕದೊಂದಿಗೆ ಬ್ರಾಹ್ಮಣರು ಭೂರಿ ಭೋಜನವನ್ನು ಬಡಿಸುತ್ತಾರೆ. ಜೀವನದಲ್ಲಿ ಎಂದೂ ಇಂತಹ ಅವಕಾಶ ಪಡೆಯದ ಈ ಮಹಿಳೆಯರು ಧನ್ಯತಾ ಭಾವದಿಂದ ಭಕ್ತಿಪರವಶರಾಗಿದ್ದಾರೆ. ಇದನ್ನು ಸಂಘಟಿಸಿದ್ದು ದೇಶಾದ್ಯಂತ ಶೌಚಾಲಯ ಕಟ್ಟಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿರುವ 'ಸುಲಭ್ ಶೌಚಾಲಯ ಇಂಟರ್‌ನ್ಯಾಷನಲ್' ಎಂಬ ಒಂದು ಸ್ವಯಂ ಸೇವಾಸಂಸ್ಥೆ. 'ಮಲಹೊರು'ವಂತಹ ಅಮಾನುಷ, ಅನಿಷ್ಠ ಪದ್ಧತಿಯನ್ನು ತೊಡೆದು ಹಾಕಬೇಕೆನ್ನುವ ಉದ್ದೇಶವನ್ನು ಸುಲಭ್ ಶೌಚಾಲಯ ಸಂಸ್ಥೆ ಹೊಂದಿದೆಯೇ ಅಥವಾ ಅವರನ್ನು ಶುದ್ಧಗೊಳಿಸುವ ಪ್ರಯತ್ನವೆ? ಇಂತಹ ಘಟನೆಗಳನ್ನು ವಿಶ್ಲೇಷಿಸುವುದು ಹೇಗೆ? ದಲಿತರು ಮೇಲ್ಜಾತಿಯವರನ್ನು ಅನುಸರಿಸಿ ಮುಕ್ತಿ ಪಡೆಯಬೇಕೆ? ಇಂತಹ ಕರುಣೆಯಿಂದ ಜಾತಿಪದ್ಧತಿಯನ್ನು ತೊಲಗಿಸಲು ಸಾಧ್ಯವೆ? ದಲಿತರ ಬಿಡುಗಡೆಯ ಹಾದಿ ಯಾವುದು? ದಲಿತ ಮಹಿಳೆಯರ ರಕ್ಷಣೆ ಎಲ್ಲಿದೆ? ಮನೆಯೊಳಗೆ? ಮನೆ ಹೊರಗಿನ ಸಮಾಜದಲ್ಲಿ? ಆಕೆ ಮನೆಯೊಳಗಿನ ಹಿಂಸೆಯೊಂದಿಗೆ ಹೋರಾಡಬೇಕೇ? ಮನೆಯ ಹೊರಗಿನ ಶ್ರೇಣೀಕೃತ ಸಮಾಜದೊಂದಿಗೊ? ಎಷ್ಟು ಹೊರೆಗಳು ಆಕೆಯ ಹೆಗಲಮೇಲೆ!

ಇಂತಹ ಪ್ರಶ್ನೆಗಳ ಬಗ್ಗೆ ಮಹಿಳಾಚಳವಳಿ ಮಾತ್ರವಲ್ಲ, ಇಡಿಯ ನಾಗರಿಕ ಸಮಾಜ ಯೋಚಿಸಬೇಕಾಗಿದೆ.

ತಿದ್ದುಪಡಿ:


2011 ಜೂನ್ ತಿಂಗಳ ಕನ್ನಡ ಸಾಹಿತ್ಯ ವಿಮರ್ಶೆ; ಮಹಿಳಾ ಅನುಸಂಧಾನ...." ಲೇಖನದ 2ನೇ ಪ್ಯಾರಾ (ಪುಟ 9)ದ 5ನೇ ಸಾಲಿನಲ್ಲಿ "ಅನುಪಮಾ ಅವರ ಈ ನಿಲುವು ಸ್ಪಷ್ಟವಾಗಿ ಕಾಣಿಸಬಲ್ಲದು. ಆದರೆ ಅನುಪಮಾ ಅವರ...." ಎಂದು ಸೇರಿಸಿ ಓದಿಕೊಳ್ಳಬೇಕಾಗಿ ವಿನಂತಿ.

–ಸಂ.

ಓದುಗರಲ್ಲಿ ಮನವಿ

ಜಾಗತೀಕರಣದ ಇಂದಿನ ಸಂದರ್ಭದಲ್ಲಿ 'ನಮ್ಮ ಮಾನಸ'ದಂತಹ ಸಣ್ಣ ಪತ್ರಿಕೆಗೆ ಓದುಗರೇ ಜೀವಾಳ. ಪತ್ರಿಕೆಗೆ ಚಂದಾದಾರರಾಗುವ ಮೂಲಕ ಹಾಗೂ ಈ ವರ್ಷದ ಚಂದಾ ನವೀಕರಿಸುವ ಮೂಲಕ ಪತ್ರಿಕೆಯ ಪ್ರಕಟಣೆಗೆ ಸಹಕಾರ ನೀಡಿ.

ಒಳಗಿನ ಪುಟಗಳಲ್ಲಿ....



ತೆರೆದ ಕಣ್ಣಿನ ತೆರೆದ ಮನದ ಅಪರೂಪದ ಕಥೆಗಾರ್ತಿ ಸುಶೀಲಾರಾವ್

■ ಡಾ. ಬಿ.ಎನ್. ಸುಮಿತ್ರಾಬಾಯಿ

ಕನ್ನಡ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ಇಂಥ ಲೇಖಕಿಯರು ಕಾಣಸಿಗುತ್ತಾರೆ. ಅವರು ತಮ್ಮಷ್ಟಕ್ಕೆ ತಾವು ಸಣ್ಣಕಥೆಗಳಲ್ಲೋ ಕಾದಂಬರಿಗಳಲ್ಲೋ ಅಭಿವ್ಯಕ್ತಿಯನ್ನು ಕಂಡುಕೊಂಡವರು. 'ಜಗದ ಪೊಗಳಿಕೆಗೆ ಬಾಯ್ಬಿಡದ' ವನಸುಮಗಳಂಥವರು. ಅವರನ್ನು ಬೆಂಬಲಿಸಿ ಎತ್ತಿ ಲೋಕದ ಬೆಳಕಲ್ಲಿ ಮೀಯಿಸುವ 'ದೇವಪಿತೃ'ಗಳು ಯಾರೂ ಇರುವುದಿಲ್ಲ. ಮುಖ್ಯ ಸಾಹಿತ್ಯವಿಮರ್ಶೆ ಅವರನ್ನು ಕಣ್ಣೆತ್ತಿಯೂ ನೋಡಿರುವುದಿಲ್ಲ. ಆದರೆ ವಾರಪತ್ರಿಕೆ, ಮಾಸಪತ್ರಿಕೆ, ಸಾಪ್ತಾಹಿಕ ಪುರವಣಿ, ವಿಶೇಷಾಂಕಗಳ ಒಳಗೆ ಸದಾ ಇಂಥವರ ರಚನೆಗಳಿಗೆ ಜಾಗವಿದ್ದೇ ಇರುತ್ತದೆ. ಸಾಮಾನ್ಯ ಜನಸಮುದಾಯ ಇವರ ಓದುಗರಾಗಿರುತ್ತಾರೆ. ತಾವು ಓದಿದ್ದರ ಬಗ್ಗೆ ಮೆಚ್ಚುಗೆ, ಟೀಕೆ, ಟಿಪ್ಪಣಿಗಳನ್ನು ಇಂಥ ಓದುಗರು ನೇರವಾಗಿ ಲೇಖಕಿಯರಿಗೆ ಮುಟ್ಟಿಸುತ್ತಿರುತ್ತಾರೆ. ಇಂಥ ಓದುಗರ ಅಭಿಮಾನ ಮತ್ತು ಪ್ರೀತಿಯ ಅಲೆಯನ್ನೇರಿ ಈ ಲೇಖಕಿಯರ ಬರಹದ ದೋಣಿ ಸಾಗುತ್ತಿರುತ್ತದೆ. ಇವರೇ ನಮ್ಮ 'ಜನಪ್ರಿಯ' ಲೇಖಕಿಯರು.

ಇಂಥ ಲೇಖಕಿಯರ ಸಾಲಿಗೆ ಸೇರುವ ಶ್ರೀಮತಿ ಜಿ.ಎಸ್. ಸುಶೀಲಾ ಆರ್.ರಾವ್ (ಇನ್ನು ಮುಂದೆ ಸುಶೀಲಾರಾವ್ ಎಂದಷ್ಟೇ ಕರೆಯುತ್ತೇನೆ) ತಮ್ಮ ಅಚ್ಚುಕಟ್ಟಾಗಿ ಕಥೆ ಹೇಳುವ ಗುಣದಿಂದಾಗಿ ಜನಮಾನ್ಯತೆ ಪಡೆದಿರುವವರು. ಅವರ ಒಂದೆರಡು ಕಥೆಗಳನ್ನು ಬಹಳ ಹಿಂದೆ ಪತ್ರಿಕೆಗಳಲ್ಲಿ ನಾನು ಓದಿದ್ದೆ. ಇತ್ತೀಚೆಗೆ ಲೇಖಕ, ಪತ್ರಕರ್ತ ಶ್ರೀ ಎನ್.ಎಸ್. ಶ್ರೀಧರಮೂರ್ತಿಯವರ ಕೋರಿಕೆಯಿಂದ ಈ ಲೇಖಕಿಯ ಸುಮಾರು 45 ಕಥೆಗಳನ್ನು ಒಟ್ಟಿಗೇ ಓದುವಂಥ ಸಂದರ್ಭ ನನಗೆ ದೊರೆತಿತ್ತು. ಹಾಗೆ ಓದಿದ್ದರ ನನ್ನ ಅನುಭವದ ಫಲವಾಗಿದೆ ಈ ಲೇಖನ. ಇಲ್ಲಿನ ನನ್ನ ಅಭಿಪ್ರಾಯಗಳು ಕೇವಲ ಈ ಲೇಖಕಿಗಷ್ಟೇ ಆಗಿರದೆ ಜನಪ್ರಿಯತೆಯೇ ಒತ್ತಾಸೆಯಾಗಿರುವ ಎಲ್ಲರಿಗೂ ಅನ್ವಯಿಸಬಹುದಾಗಿವೆ.

ಕಥೆಗಾರಿಕೆ ಸುಶೀಲಾರಾವ್ ಅವರಿಗೆ ಸಹಜವಾಗಿ ಒಲಿದುಬಂದಿರುವ ಕಲೆ. ಅವರ ಕಥೆಗಳಲ್ಲಿ ಹೆಣ್ಣು ಮತ್ತು ಹೆಣ್ಣಿನ ಅನುಭವಗಳು ಕೇಂದ್ರವಾಗಿರುವಾಗಲೂ ನೋಡುವ ದೃಷ್ಟಿ ಒಬ್ಬ ಮಾನವತಾವಾದಿಯದು. ಗಂಡಸರಿರಲಿ, ಹೆಂಗಸರಿರಲಿ ಎಲ್ಲರೂ ಇಲ್ಲಿ ಮೊದಲು ಮಾನವರಾಗಬೇಕು. ಆ ಮಾನವತೆ ಎಲ್ಲಿ ಮುಕ್ಕಾಗಿದೆ, ಅದಕ್ಕೇನು ಕೊರತೆಯಿದೆ, ಕೊರತೆಯ ಹಿನ್ನೆಲೆಯ ಕಾರಣಗಳೇನು, ಎಲ್ಲಿ ಅದು ಅಮಾನವೀಯ ಅನ್ಯಾಯ ಕ್ರೌರ್ಯಗಳಿಗೆ ಅವಕಾಶ ನೀಡಿದೆ, ಆ ಅನ್ಯಾಯವನ್ನು ಸರಿಪಡಿಸಿ ಲೋಕದ ಬದುಕನ್ನು ಮಾನವೀಯವಾಗಿ ಸಹನೀಯವಾಗಿಸುವ ಬಗೆ ಹೇಗೆ ಎಂಬ ಕಳಕಳಿ ಸುಶೀಲಾ ಅವರ ಕಥೆಗಳನ್ನು ಮುನ್ನಡೆಸುತ್ತದೆ. ಹೀಗೆ ಮನುಷ್ಯರೆಲ್ಲರ ಸಂಕಷ್ಟದ ಗಳಿಗೆಗಳು, ಪಾಡುಗಳು ಇವರ ಕಥೆಗಳಿಗೆ ಮುಖ್ಯವಾಗುತ್ತವೆ. ಆ ಮನುಷ್ಯರು ಹೆಂಗಸರೂ ಆಗಿರಬಹುದು, ಗಂಡಸರೂ ಆಗಿರಬಹುದು.

ಸುಶೀಲಾರಾವ್ ತೆರೆದ ಕಣ್ಣು, ತೆರೆದ ಮನಗಳಿಂದ ಬದುಕನ್ನು ವೀಕ್ಷಿಸುವಾಕೆ. ಆದ್ದರಿಂದ ಜೀವನದ ಅನಂತ ರೀತಿಯ ಅಪರೂಪದ ಅನುಭವಗಳನ್ನು ಎಲ್ಲೆಡೆಯಿಂದಲೂ ಹಿಡಿಯಬಲ್ಲ ಜಾದೂ ಅವರಿಗೆ ಸಾಧ್ಯ. ಹಳ್ಳಿಯ ಊಳಿಗಮಾನ್ಯ ಜಮೀನುದಾರರ ಮತ್ತು ಸಾಮಾನ್ಯ ರೈತರ ನಡುವಿನ ತಾಕಲಾಟವಿರಲಿ, ಪಟ್ಟಣದ ನಾಗರಿಕತೆಯ ಸೊಕ್ಕಿನಲ್ಲಿ ಗ್ರಾಮೀಣತೆಯನ್ನು ತಿರಸ್ಕಾರದಿಂದ ನೋಡುವ ಕಲಿತವರ ಅಹಮಿಕೆಯಿರಲಿ, ಮಾನಸಿಕ ವಿಕೃತಾವಸ್ಥೆಗಳಿರಲಿ, ರಾಜಕಾರಣಿಗಳ ವಂಚನೆ-ಸ್ವಾರ್ಥಗಳಿಂದ ಅಮಾಯಕರು ಶೋಷಣೆಗೆ ಬಲಿಯಾಗುವುದಿರಲಿ ತುಂಬ ಸಕಾಲಿಕ ವಸ್ತುಗಳನ್ನು ಹುಡುಕಿ ತೆಗೆದು ಶೋಧಿಸಿ, ಭಾವ-ವಿಚಾರಗಳಿಂದ ತೊಳೆದು ಕಥೆಯಾಗಿಸುತ್ತಾರೆ ಈ ಲೇಖಕಿ.

ಸುಶೀಲಾರಾವ್ ಅವರದು ಮುಖ್ಯವಾಗಿ ಮಾನವತಾವಾದಿ ನೆಲೆ ಎಂದೆನಲ್ಲವೆ? ಆದರೂ ಅವರು ಸಣ್ಣಕಥೆಗಳನ್ನು ಬರೆದು ಪ್ರಕಟಿಸಲು ಆರಂಭಿಸಿದ್ದು 1980ರ ದಶಕದಿಂದ ಎಂಬುದನ್ನು ಗಮನಿಸಬೇಕು. ಅದು ಕನ್ನಡ ಸಾಹಿತ್ಯದಲ್ಲಿ ಬಂಡಾಯದ ಕಹಳೆ ಮೊಳಗುತ್ತಿದ್ದ ಕಾಲ, ಸ್ತ್ರೀವಾದಿ ಚಿಂತನೆ ಬೇರೂರಲು ಆರಂಭಿಸಿದ್ದ ಕಾಲ. ಆದ್ದರಿಂದ ಸಾಹಿತ್ಯವಲಯದ ಆ ಹೊಸ ವೈಚಾರಿಕ, ತಾತ್ತ್ವಿಕ ಅಲೆಗಳು ಸುಶೀಲಾರಾವ್ ಅವರ ಬರಹದ ಮೇಲೂ ಪ್ರಭಾವ ಬೀರಿದ್ದರೆ ಅದು ಸಹಜ. ಈ ಪ್ರಭಾವ



ನನ್ನ ಚಿಕ್ಕಮ್ಮ

ನನ್ನ ಚಿಕ್ಕಮ್ಮ ಎಂದರೆ ಜಿ. ಎಸ್. ಸುಶೀಲಾ ದೇವಿ. ಆರ್. ರಾವ್ ಗಟ್ಟಿ ಕಥೆಗಳನ್ನು ಬರೆದೂ ಪ್ರಧಾನ ವಾಹಿನಿಯಲ್ಲಿ ಚರ್ಚೆಗೆ ಬಾರದೇ ಹೋದ ಕಥೆಗಾರ್ತಿ. ಈಗ ಅವರ ಸಮಗ್ರ ಕಥೆಗಳು ಪ್ರಕಟವಾಗುತ್ತಿರುವ ಹಿನ್ನೆಲೆಯಲ್ಲಿ ಕೆಲವು ಮಾತುಗಳು. ಚಿಕ್ಕಮ್ಮ ಬರೆದ ಕಥೆಗಳನ್ನು ಬಹುತೇಕ ಅಂದಂದೇ ಓದಿದ್ದೇನೆ. ಕೆಲವೊಮ್ಮೆ ಪ್ರಕಟವಾಗುವ ಮೊದಲೇ ಓದಿದ್ದೇನೆ. ಸಾಹಿತ್ಯ ಲೋಕಕ್ಕೆ ಕಾಲಿರಿಸಿದ ಆರಂಭದಲ್ಲಿ ಅವುಗಳನ್ನು ಜನಪ್ರಿಯ ಎಂಬ ಗುಮಾನಿಯಿಂದ ನೋಡಿದ್ದು ಉಂಟು. ಆ ಕಾರಣಕ್ಕೆ ಅವರ ಜೊತೆ ಜಗಳಾಡಿದ್ದೂ ಇದೆ. ಆದರೆ ಕ್ರಮೇಣ ಅದರ ಭಿನ್ನತೆ ಅರಿವಾಗಲಾರಂಭಿಸಿತು. ಅಕಾಡಮಿಕ್ ಅಳತೆಪಟ್ಟಿಗೆ ಅರ್ಥವೇ ಆಗಲಾರದ ಬದುಕಿನ ಸೂಕ್ಷ್ಮಗಳು ಆ ಕಥೆಗಳಲ್ಲಿದ್ದವು. ನನಗೆ ಚಿಕ್ಕಮ್ಮನ ಕಥೆಗಳಿಗಿಂತಲೂ ಅವರ ಬದುಕು ಸ್ಫೂರ್ತಿದಾಯಕ ಎಂದು ನಂತರದ ದಿನಗಳಲ್ಲಿ ಅನ್ನಿಸಲಾರಂಭಿಸಿತು. 1952ರಲ್ಲಿ ಚಿತ್ರದುರ್ಗ ಜಿಲ್ಲೆಯ ಪುಟ್ಟಹಳ್ಳಿ ಗುಂಜಿಗನೂರಿನಲ್ಲಿ ಶ್ಯಾನುಭೋಗ್ ಶ್ರೀನಿವಾಸಯ್ಯ ಮತ್ತು ಜಾನಕಮ್ಮ ದಂಪತಿಗಳ ಏಳು ಮಕ್ಕಳಲ್ಲಿ ಕೊನೆಯವರಾಗಿ ಜನಿಸಿದ ಅವರಿಗೆ ತಂದೆ ಓದುತ್ತಿದ್ದ ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳೇ ಆರಂಭಿಕ ಸಾಹಿತ್ಯ ಪ್ರೇರಣೆಗಳು. ಚಿಕ್ಕಂದಿನಲ್ಲೇ ಕಾಣಿಸಿಕೊಂಡ ಶ್ರವಣದೋಷ ಅವರ ಸಂವಹನಕ್ಕೆ ಸಮಸ್ಯೆಯನ್ನು ಉಂಟುಮಾಡಿತು. ಬಹಿರಂಗ ಲೋಕದ ಜೊತೆಗಿನ ಒಡನಾಟದ ಕೊರತೆ ಅಂತರಂಗದ ಲೋಕ ಸಮೃದ್ಧವಾಗಲು ಕಾರಣವಾಯಿತು. ನೋಟ್ ಬುಕ್ಕಿನ ಕೊನೆಯಲ್ಲಿ ಕಥೆಗಳು ಅರಳಲಾರಂಭಿಸಿದವು. ಪ್ರೌಢಶಾಲೆಗೆ ಬಂದಾಗ ಆಗಲೇ ಹೆಸರು ಮಾಡಿದ್ದ ಕಥೆಗಾರ ಎನ್.ಎಸ್.ಚಿದಂಬರ ರಾವ್ ಶಿಕ್ಷಕರಾಗಿ ಬಂದದ್ದು ಇಂಬನ್ನು ನೀಡಿತು. ಪತ್ರಿಕಗಳಿಗೆ ಕಥೆಗಳನ್ನು ಕಳುಹಿಸಲು ಅವರು ಪ್ರೇರಣೆ ನೀಡಿದರು. ಆಗ ಕನ್ನಡದಲ್ಲಿ ಕಥಾಸಾಹಿತ್ಯವನ್ನು ಆಧರಿಸಿದ್ದ ವಾರಪತ್ರಿಕೆ ಮತ್ತು ಮಾಸಪತ್ರಿಕೆಗಳು ದೊಡ್ಡ ಸಂಖ್ಯೆಯಲ್ಲಿ ಆರಂಭವಾಗುತ್ತಿದ್ದವು. ಸುಶೀಲಾ ದೇವಿ ಅವರ ಕಥೆಗಳಿಗೆ ಬಹುಬೇಗ ಸ್ವಾಗತ ದೊರಕಿತು. ನನಗೆ ಮುಖ್ಯವೆನ್ನಿಸುವ ಸಂಗತಿ ಎಂದರೆ ಹೀಗೆ ಪತ್ರಿಕೆಗಳಲ್ಲಿ ನಿರಂತರವಾಗಿ ಕಥೆಗಳು ಅಚ್ಚಾದರೂ ಅವರು ಪ್ರಚಾರದ ವ್ಯಾಮೋಹಕ್ಕೆ ಸಿಲುಕಲಿಲ್ಲ. ಅನುಭವ ಮಾಗುವವರೆಗೆ ಕಥೆಯಾಗಿಸಲು ಸಿದ್ಧರಾಗಲಿಲ್ಲ. ಇಂತಹ ಬದ್ಧತೆಯಿಂದಲೇ ಅವರು ನಾಲ್ಕು ದಶಕದ ಸಾಹಿತ್ಯ ಯಾತ್ರೆಯಲ್ಲಿ ಬರೆದದ್ದು ಕೇವಲ 74 ಕಥೆಗಳು. ಅವರಲ್ಲೇ ಒಬ್ಬ ಜಾಗೃತ ವಿಮರ್ಶಕಿ ಇದ್ದಳು. ಎಷ್ಟೋ ವಸ್ತುಗಳನ್ನು ಅವರು ಆರಿಸಿಕೊಂಡು ನಂತರ ಅದಕ್ಕೆ ನ್ಯಾಯ ಸಲ್ಲಿಸಲಾರೆ ಅನ್ನಿಸಿ ಕೈ ಬಿಟ್ಟಿದ್ದನ್ನು ನಾನೇ ಹತ್ತಿರದಿಂದ ಗಮನಿಸಿದ್ದೇನೆ. ನಿರಂತರವಾದ ಓದು ಮತ್ತು ಸವಾಲುಗಳ ನಡುವೆಯೂ ಇಟ್ಟುಕೊಂಡ 'ಜೀವನ ಪ್ರೀತಿ' ಅವರ ಕಥೆಗಳ ಶಕ್ತಿಯಾಗಿದೆ.

ಬಹು ಬೇಗ ವೈವಾಹಿಕ ಜೀವನದ ಬಂಧನಕ್ಕೆ ಸಿಲುಕಿದ ಅವರ ಕೈಹಿಡಿದ ಪತಿ ಕೆ.ಟಿ.ರಾಘವೇಂದ್ರ ರಾವ್ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಪದೇ ಪದೇ ವರ್ಗವಾಗುವ ಸರ್ಕಾರಿ ಕೆಲಸ, ಅದರಲ್ಲೂ ಬಿರು ಬಿಸಲಿನ ಬಳ್ಳಾರಿಜಿಲ್ಲೆಯಲ್ಲಿ. ಬಡತನದ ಬದುಕು, ಸತತವಾಗಿ ಕಾಡಿದ ದಾಂಪತ್ಯದ ಸಮಸ್ಯೆಗಳ ನಡುವೆಯೇ ಅವರ ಕಥೆಗಳು ಅರಳಿದವು. ಉತ್ಥಾನ ಮಾಸ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ 'ಸ್ವಾಭಿಮಾನಿ' ಅವರಿಗೆ ಹೆಸರು ತಂದುಕೊಟ್ಟ ಕಾದಂಬರಿ. 'ಬೆಂಕಿಯ ಒಡಲಲ್ಲಿ', 'ಸಂಬಂಧದ ಸಂಕೋಲೆಗಳು' ಮೊದಲಾದ ಕಾದಂಬರಿಗಳು ಈ ಹಂತದಲ್ಲೇ ಮೂಡಿ ಬಂದವು. 'ಕಿಟ್ಟು ಪುಟ್ಟಿ ಸಾಹಸಗಳು' ಮಕ್ಕಳ ಕಾದಂಬರಿ, 'ಷೋಕೇಸಿನ ಗೊಂಬೆ' ಕಥಾ ಸಂಕಲನಗಳೂ ಹೊರಬಂದು ಬರಹದ ಬದುಕು ಇನ್ನೇನು ಗಟ್ಟಿಯಾಯಿತು ಎಂದಾಗ ಎರಗಿದ್ದು ಪತಿಯ ಸಾವಿನ ಆಘಾತ. ಇನ್ನೂ ಬೆಳೆಯುತ್ತಿದ್ದ ಇಬ್ಬರು ಮಕ್ಕಳು, ಆರ್ಥಿಕ ಅಭದ್ರತೆ, ನೆರವಿಗೆ ಬಾರದ ಸಂಬಂಧಿಕರು ಹೀಗೆ ವಿಧಿ ಕಷ್ಟಗಳ ಬಿರುಮಳೆಗರೆದರೂ ಅಂಜದೆ ತಮ್ಮ ಸ್ವಾಭಿಮಾನದಲ್ಲೇ ಬದುಕನ್ನು ಎದುರಿಸಿ ಗೆದ್ದು ನಿಂತದ್ದು ಈಗ ಇತಿಹಾಸ. ಇದು ಅವರ ಬರವಣಿಗೆಗೆ ಹಿನ್ನಡೆ ತಂದರೂ ಬದುಕಿನಲ್ಲಿ ಅವರು ಇಂದು ಸಾಧಿಸಿದ್ದು ಎಲ್ಲರಿಗೂ ಮಾದರಿಯಾಗುವಂತಿದೆ. ಬರಹಕ್ಕಿಂತ ಬದುಕು ಮುಖ್ಯ ಎನ್ನಿಸುವುದೇ ಇಂತಹ ಹಂತಗಳಲ್ಲಿ. ಅವರ ಕಥೆಗಳು ಸ್ತ್ರೀವಾದಿ ಹೌದೋ ಅಲ್ಲವೋ ಗೊತ್ತಿಲ್ಲ, ಅದರೆ ಅವರು ಬದುಕಿದ ಛಲವೇ ಬರಹದಲ್ಲಿ ಮೈದಾಳಿದೆ. ಆ ಮಟ್ಟಿಗೆ ಅವರೇನು ಬರೆದಿದ್ದಾರೋ ಅದರಲ್ಲಿ ಜೀವನದಸಾರ ಸಹಜವೆಂಬಂತೆ ಮೈದಾಳಿದೆ. ತಮ್ಮ ಸಮಸ್ಯೆಗಳಿಂದ ಸಾಹಿತ್ಯ ವಲಯದಿಂದ ದೂರವೇ ಉಳಿದ ಅವರನ್ನು 'ಜನಪ್ರಿಯ ಲೇಖಕಿ' ಎಂಬ ಸೀಮಿತ ಚೌಕಟ್ಟಿನಾಚೆ ಚರ್ಚಿಸಿ ಅವರ ಕೃತಿಗಳಿಗೆ ಬೆಲೆ ಕಟ್ಟಲು ಇದು ಸಕಾಲವೆಂದೇ ನನ್ನ ಅನಿಸಿಕೆ.

–ಎನ್.ಎಸ್.ಶ್ರೀಧರ ಮೂರ್ತಿ

ನೇರವಾದದ್ದಾಗಿರದೆ ಪರೋಕ್ಷ ರೀತಿಯದಾಗಿರುವುದೂ ಸಾಧ್ಯ. ಜಾತಿ, ವರ್ಗ, ಲಿಂಗ ಭೇದಗಳಿಂದಾಗಿ ಜನರ ಬದುಕಿನಲ್ಲಿ ಹುಟ್ಟುವ ಸಮಸ್ಯೆಗಳು ಮನುಷ್ಯರೊಳಗಿನ ದಯೆ, ಅಂತಃಕರಣ, ಕ್ರೌರ್ಯ, ಸಂಕುಚಿತ ಬುದ್ಧಿ, ಔದಾರ್ಯ, ಸೇಡು, ಕ್ಷಮೆ, ದ್ವೇಷ, ಮರುಕಗಳಂಥ ಸಾರ್ವಕಾಲಿಕ ಸ್ವಭಾವಗಳನ್ನು ಹೊರಬರುವಂತೆ ಮಾಡಿರುತ್ತವೆ ಎಂಬುದನ್ನು ಸೂಕ್ಷ್ಮವಾಗಿ ಗುರುತಿಸಿ, ಬೆಳಕಿಗೆ ತರುವ ಯತ್ನ ಸುಶೀಲಾ ಅವರ ಕಥೆಗಳಲ್ಲಿ ಕಾಣಿಸುತ್ತದೆ.

ಸಿರಿತನ–ಬಡತನ, ನಾಗರಿಕತೆ–ಗ್ರಾಮೀಣತೆ, ಸುಶಿಕ್ಷಿತತೆ–ನಿರಕ್ಷರತೆ, ಅಧಿಕಾರಹೀನತೆ ಮುಂತಾದ ದ್ವಂದ್ವ ವೈರುಧ್ಯಗಳ ಅವಸ್ಥೆಗಳೊಳಗೆ ಬಲಿಷ್ಠವಾದದ್ದೇ ಮೇಲುಗೈ ಪಡೆಯುವುದು, ದುರ್ಬಲವಾದದ್ದು ಅಸಹಾಯಕವಾಗಿ ಅನ್ಯಾಯಕ್ಕೆ ಬಲಿಬೀಳುವುದನ್ನು ಕರುಣೆ, ಸಾತ್ವಿಕ ಕ್ರೋಧ ಹಾಗೂ ವಿಡಂಬನೆಗಳಿಂದ ಈ ಲೇಖಕಿ ನೋಡಲೆತ್ನಿಸುತ್ತಾರೆ. ಹೀಗಾಗಿ ಅವರದು ಸದಾ ನೊಂದವರ ಪರ, ಅನ್ಯಾಯದ ವಿರುದ್ಧವಾದ ಧ್ವನಿಯಾಗುತ್ತದೆ. ಎಲ್ಲ ಕಥೆಗಳನ್ನೂ ಒಟ್ಟಿಗೇ ಓದಿದಾಗ, ವಿಷಯಗಳು – ವಸ್ತುಗಳು ಮರುಕಳಿಸಿರುವಂತೆ ಅನ್ನಿಸಿದರೆ ಹಲವು ದಶಕಗಳ ನಿರಂತರ ಕತೆಗಾರಿಕೆಗೆ ಅದು ಸಹಜವೆನಿಸುತ್ತದೆ. ಎಷ್ಟೋ ಕಥೆಗಳು ವಸ್ತುವಿನ ಪ್ರಾಸ್ತಾಪವಷ್ಟೇ ಆಗುತ್ತವೆ, ಕೆಲವು ಕಥೆಗಳ ಶಕ್ತಿ ಸನ್ನಿವೇಶ ನಿರ್ಮಾಣದಲ್ಲೇ ವ್ಯಯವಾಗುತ್ತದೆ. ಹೀಗಾದಾಗ ಮುದ್ದಾಂ ಕಥಾವಸ್ತುವೇ ಎಲ್ಲೋ ಮಂಕಾದಂತೆ ಆಗಿಬಿಡುವುದುಂಟು. ಪತ್ರಿಕೆಗಳಿಗಾಗಿ ಕಥೆಗಳನ್ನು ಬರೆಯುವುದೇ ಸೃಜನಶೀಲತೆಗೆ ಕೆಲವು ನಿರ್ಬಂಧಗಳನ್ನೂ ಉಂಟುಮಾಡಬಲ್ಲದು. ಕಾಲಕ್ಕೆ ತಕ್ಕಂತೆ, ಓದುಗರ ನಿರೀಕ್ಷೆಗೆ ಮೆಚ್ಚುಗೆಯಾಗುವ ಹಾಗೆ ಹೊಸ ಹೊಸ ವಸ್ತುಗಳ ಹುಡುಕಾಟಕ್ಕೆ ಪತ್ರಿಕೆಗಳು ಪ್ರೇರಣೆ ಕೊಡುವ ಹೊತ್ತಿನಲ್ಲೇ ಪರಿಮಿತ ಕಾಲದೊಳಗೇ ಬರವಣಿಗೆಯನ್ನು ಮುಗಿಸಬೇಕಾದ ಒತ್ತಡವನ್ನೂ ಹೇರುತ್ತವೆ. ಈ ಎಲ್ಲ ಅಂಶಗಳೂ ಸುಶೀಲಾರಾವ್ ಕಥೆಗಳ ಸ್ವರೂಪದ ಮೇಲೆ ಪರಿಣಾಮ ಬೀರಿರುತ್ತವೆ. ಆದಾಗ್ಯೂ ವಸ್ತುವೈವಿಧ್ಯ ಮಾತ್ರವಲ್ಲ ತಮ್ಮ ಅನುಭವಕ್ಕೆ ಮೀರಿದ ಅಪರಿಚಿತ ಜೀವನಾನುಭವಗಳನ್ನೂ ಕಲ್ಪನೆಯ ಮೂಲಕ ಪ್ರವೇಶಿಸಲು ಅವರು ವಹಿಸುವ ಶ್ರಮ ಎದ್ದು ತೋರುವಂಥದು. ಮನೆತನಗಳ ನಡುವಿನ ದ್ವೇಷ ಮಾತ್ಸರ್ಯಗಳ ಮಾರ್ಮಿಕ ಚಿತ್ರಣವಿರುವ **'ತಂದೆಯೇ ಅವರನ್ನು ಕ್ಷಮಿಸು'**, ಸ್ವಾತಂತ್ರ್ಯ ಯೋಧರಿಗೆ ಕೊಡುವ ಸಹಾಯಧನವನ್ನು

ನುಂಗಲು ರಾಜಕಾರಣಿಗಳು ಹಳ್ಳಿಯ ಅಮಾಯಕ ನಿರಕ್ಷರಿಗಳನ್ನು ವಂಚಿಸುವುದನ್ನು ವಿಡಂಬಿಸುವ **'ಕೃತಜ್ಞತೆ,'** ಸಿರಿವಂತಿಕೆ-ಬಡತನಗಳಲ್ಲಿ ಜನರ ಬದಲಾಗುವ ಸ್ವಭಾವದ ಬಗ್ಗೆ ವ್ಯಂಗ್ಯವಾಡುವ **'ಗೆಳತಿಯರು'** ಕೋಮು ವೈಷಮ್ಯವಿರದ ಮಾನವೀಯತೆಯನ್ನು ಎತ್ತಿಹಿಡಿಯುವ **'ಇರುವುದೊಂದೇ ಭೂಮಿ'** ಮುಂತಾದ ಕಥೆಗಳು ಈ ಲೇಖಕಿಯು ಸೃಷ್ಟಿಸಿರುವ ವಸ್ತುವೈವಿಧ್ಯಕ್ಕೆ ಮಾದರಿಗಳಾಗಿವೆ.

ಈ ಹಿನ್ನೆಲೆಯಲ್ಲಿ ನನಗೆ ಆಕರ್ಷಕವೆನ್ನಿಸಿದ ಕೆಲವು ಕಥೆಗಳನ್ನು ಇಲ್ಲಿ ವಿವರವಾಗಿ ಪರಿಶೀಲಿಸಲು ಯತ್ನಿಸುತ್ತೇನೆ. **'ಗೌಡರ ಚೆನ್ನವ್ವ,' 'ದಾಕ್ಷಾಯಿಣಿ,' 'ಪೋಕೇಸಿನ ಗೊಂಬೆ'** ಇವು ಮೂರೂ ಸುಶೀಲಾರಾವ್ ಅವರ ಮೊದಲ ಕಥಾಸಂಕಲನದ ಕಥೆಗಳು. ಇವು ಮೂರರಲ್ಲೂ ವಿವಾಹ ವ್ಯವಸ್ಥೆಯ ಅನ್ಯಾಯಕ್ಕೆ ಒಳಗಾಗಿ ನೋಯುವ, ನೊಂದು ಸಿಡಿದೇಳುವ ಅದಕ್ಕಿಂತ ಭಿನ್ನವಾದ ಸ್ವತಂತ್ರವೂ ಸ್ವಂತವೂ ಆದ ದಾರಿಯನ್ನು ಆಯ್ದುಕೊಳ್ಳುವ ಮಹಿಳೆಯರ ಅಂತಃಸತ್ವ, ದೃಢನಿರ್ಧಾರಗಳ ಚಿತ್ರಗಳಿವೆ. ಮೊದಲ ಎರಡುಕಥೆಗಳ ಕೇಂದ್ರವ್ಯಕ್ತಿಗಳಾದ ಹೆಣ್ಣುಗಳು ಹಳ್ಳಿಗಳ ಊಳಿಗಮಾನ್ಯ ಪಿತೃಪ್ರಧಾನ ವ್ಯವಸ್ಥೆಯಿಂದ ಬಲಿಪಶುಗಳಾಗಬೇಕಾಗಿ ಬಂದವರು.

'ದಾಕ್ಷಾಯಿಣಿ' ಕಥೆಯಲ್ಲಿ ಊರ ಜಮೀನುದಾರ ವೀರಪ್ಪಗೌಡರ ದಬ್ಬಾಳಿಕೆ, ಪುರುಷಾಹಮಿಕೆ, ಪ್ರತಿಷ್ಠೆಗಳಿಗೆ ಮುಖಾಮುಖಿಯಾಗುವುದು ಅವರ ಬೀಗರಾದ ಶಿವರುದ್ರಗೌಡರ ಸಾತ್ತ್ವಿಕತೆ, ಸತ್ಯವಂತಿಕೆ. ಶಿವರುದ್ರಗೌಡರ ಮಗಳು ದಾಕ್ಷಾಯಿಣಿಯನ್ನು ಎಳೆ ವಯಸ್ಸಿನಲ್ಲೇ ವೀರಪ್ಪಗೌಡರ ಮಗ ಶಂಕರಗೌಡನಿಗೆ ಮದುವೆ ಮಾಡಿರುತ್ತಾರೆ. ಅವಳು 'ದೊಡ್ಡವಳಾಗುವವರೆಗೆ' ಎಂದು ತಂದೆಯ ಮನೆಯಲ್ಲಿಯೇ ಉಳಿದಿರುತ್ತಾಳೆ. ವೀರಪ್ಪಗೌಡರ ತಮ್ಮ ಗುರುಲಿಂಗೇಗೌಡ ಸಾಮಾನ್ಯ ರೈತ, ಶಿವನಂಜನ ಸೊಸೆ ಗೌರಮ್ಮನೊಂದಿಗೆ ಲೈಂಗಿಕ ದೌರ್ಜನ್ಯ ತೋರಿದಾಗ ಗೌರಮ್ಮನ ಗಂಡ ಕೊಟ್ರೇಶ ಆ ಗೌಡನ ಮೇಲೆ ತಿರುಗಿಬಿದ್ದು ಮಾತಿಗೆ ಮಾತು ಬೆಳೆದು ನಡೆದ ಕಲಹದ ಸಿಟ್ಟಿನಲ್ಲಿ ಕೊಟ್ರೇಶ ಚಪ್ಪಲಿ ಎತ್ತಿ ಗುರುಲಿಂಗಗೌಡನನ್ನು ಹೊಡೆಯುತ್ತಾನೆ. ಈ ಅಪಮಾನದಿಂದ ಕುದಿಯುವ ಇಬ್ಬರೂ ಗೌಡರು ಕೊಟ್ರೇಶನನ್ನು ಅರೆಸ್ಟ್ ಮಾಡಿಸಿ ಅವನ ಮೇಲೆ ಸಾಲದ ಹೊರೆಯ ಸುಳ್ಳು ಕೇಸು ಹಾಕಿಸಲು ಶಿವರುದ್ರಗೌಡರ ಸಾಕ್ಷಿ ಸಹಿಯನ್ನು ಬಯಸುತ್ತಾರೆ. ಬಲವಂತಕ್ಕೆ ಸಹಿ ಹಾಕಿದರೂ, ಶಿವರುದ್ರಗೌಡರು ಕೋರ್ಟಿನಲ್ಲಿ ಸುಳ್ಳು ಸಾಕ್ಷ್ಯ ನೀಡದೆ ನಿಜವನ್ನೇ ಹೇಳಿ ಕೊಟ್ರೇಶನ ಬಿಡುಗಡೆಗೆ ನೆರವಾಗುತ್ತಾರೆ. ಬೀಗರೆಂಬ ದಾಕ್ಷಿಣ್ಯ, ಮಗಳಬಾಳಿಗೆ ತೊಂದರೆ ಆದೀತೆಂಬ ಎಚ್ಚರವಿದ್ದರೂ ಶಿವರುದ್ರಗೌಡರು ನಿರಪರಾಧಿ ಕೊಟ್ರೇಶನ ಜೀವನವನ್ನು ಹಾಳುಮಾಡಬಯಸಲಾರರು. ಆದರೆ ತನಗೆ ನೆರವಾಗಲಿಲ್ಲವೆಂದು ಇವರ ಮೇಲೆ ಹಗೆಸಾಧಿಸಲು ವೀರಪ್ಪಗೌಡರು, ಶಿವರುದ್ರಗೌಡರ ಮಗಳು, ತಮ್ಮ ಸೊಸೆ ದಾಕ್ಷಾಯಿಣಿಯನ್ನು ಮನೆತುಂಬಿಸಿಕೊಳ್ಳದೆ ಮಗನಿಗೆ ಬೇರೊಂದು ಹೆಣ್ಣುತಂದು ಮದುವೆ ಮಾಡಿಬಿಡುತ್ತಾರೆ. ಈ ಹಂತದವರೆಗಿನ ಕಥೆಯನ್ನು ಲೇಖಕಿ ತುಂಬ ಜೀವಂತವಾಗಿ ಸಶಕ್ತವಾಗಿ ಚಿತ್ರಿಸುತ್ತಾರೆ. ಯಾರದೋ ಪ್ರತಿಷ್ಠೆಗೆ ಬಲಿಯಾಗಿ ಗಂಡನಿದ್ದೂ ಇಲ್ಲದಂತೆ ಬದುಕಬೇಕಾದ ಅಸಹಾಯಕತೆ, ನೋವು ಅವಮಾನದ ಹೊರೆಹೊತ್ತ ದಾಕ್ಷಾಯಿಣಿ ಜೀವನಾಸಕ್ತಿಯನ್ನೇ ಕಳೆದುಕೊಂಡು ಮೌನಿಯಾಗಿ ತೀರಾ ಗಂಭೀರಳಾಗುತ್ತಾಳೆ. ಗಂಡನಿಗೆ ಇನ್ನೊಂದು ಮದುವೆ ಆಗಲಿರುವಾಗ, ಆತ್ಮಾಭಿಮಾನವನ್ನು ಬದಿಗಿಟ್ಟು ತಾನೇ ಮಾವನಬಳಿಗೆ ಹೋಗಿ ಸವತಿಯ ಜೊತೆಗೇ ಆದರೂ ಸರಿ, ತನಗೂ ಪತಿಯ ಬದುಕಿನಲ್ಲಿ ಜಾಗ ಕೊಡುವಂತೆ ಯಾಚಿಸುತ್ತಾಳೆ. ತನ್ನಿಂದಾಗಿ ತಂದೆ ಹಾಗೂ ಸೋದರರು ಪಡುವ ವ್ಯಥೆ, ಸಂಕಟಗಳು ತಪ್ಪಲಿ ಎಂಬುದಕ್ಕಾಗಿ ಅವಳ ಈ ಯತ್ನವಿರುತ್ತದೆ. ಆದರೆ ಅವಳನ್ನು ಧಿಕ್ಕರಿಸಿ, ಗೌಡರು ಮಗನಿಗೆ ಎರಡನೆಯ ಮದುವೆ ಮಾಡಿರುತ್ತಾರೆ. ತನ್ನ ಅಸಹಾಯಕ ಬವಣೆಯಲ್ಲಿ ಶಿವಭಕ್ತಿ, ಶಿವಪೂಜೆ, ವೈರಾಗ್ಯದ ದಾರಿಯೊಂದೇ ದಾಕ್ಷಾಯಿಣಿಗೆ ಗತಿ. ಇದು ಕಥೆಯ ಎರಡನೆಯ ಹಂತದ ಬೆಳವಣಿಗೆ.

ಹದಿನೈದು ವರ್ಷಗಳ ಬಳಿಕ ಗಂಡ ಶಂಕರಗೌಡ ಮತ್ತೆ ದಾಕ್ಷಾಯಿಣಿಯ ಬಳಿ ಬಂದು ತನ್ನ ಮನೆಗೆ ಬರುವಂತೆ ಕರೆಯುತ್ತಾನೆ. ಇದಕ್ಕೆ ಅವನ ಬದುಕಿನಲ್ಲಾದ ಏರಿಳಿತಗಳು ಕಾರಣವಾಗಿರುತ್ತವೆ. ದಬ್ಬಾಳಿಕೆಯಿಂದಲೇ ಬದುಕಿದ ವೀರಪ್ಪಗೌಡ ಪಾರ್ಶ್ವವಾಯು ಪೀಡಿತನಾಗಿ ಹಾಸಿಗೆ ಹಿಡಿದಾಗ ಸೊಸೆ, ಮನೆ ಜನರ ತಿರಸ್ಕಾರ ಅಸಡ್ಡೆಗಳಿಂದಾಗಿ ಕೊರಗಿ ಕೊರಗಿ ಪ್ರಾಣಬಿಟ್ಟಿರುತ್ತಾನೆ. ಹಾಗೂ ಶಂಕರಗೌಡನಿಗೆ ಎರಡನೆಯ ಹೆಂಡತಿಯಾಗಿ ಬಂದ ಗಿರಿಜವ್ವ ಕ್ಷಯ ಪೀಡಿತಳೂ, ಸಂತಾನ ನೀಡಲು ಅಸಮರ್ಥಳೂ ಆಗಿರುತ್ತಾಳೆ. ಇಷ್ಟಕ್ಕೆಲ್ಲಾ ತಾನು ದಾಕ್ಷಾಯಿಣಿಗೆ ಮಾಡಿದ ಅನ್ಯಾಯವೇ ಕಾರಣವೆನ್ನಿಸಿ ಈಗಲಾದರೂ ಅವಳನ್ನು ಕರೆತಂದು ಮನೆಯನ್ನೂ, ಮನೆತನವನ್ನೂ ಬೆಳೆಯಿಸಬಹುದೆಂದು ಅವನ ಲೆಕ್ಕಾಚಾರವಿರುತ್ತದೆ. ಆದರೆ ದಾಕ್ಷಾಯಿಣಿ ಅವನ ಈ ಆಹ್ವಾನವನ್ನು ಖಡಾಖಂಡಿತ ಮಾತುಗಳಲ್ಲಿ ತಿರಸ್ಕರಿಸುತ್ತಾಳೆ.

> *"ನಾನೀಗ ಬರುವ ಸ್ಥಿತಿಯಲ್ಲಿಲ್ಲ. ಮಗಮಗಿಸಿ ಅರಳುತ್ತಿದ್ದ ನನ್ನ ಬಾಳಿನ ಹೂವಿಗೆ ನೀವು ಬೆಂಕಿಕೊಟ್ಟಿರಿ, ಅದು ಸುಟ್ಟು ಹೋಯಿತು. ಪುನಃ ಆ ಬೂದಿ ಹೂವಾಗಿ ಅರಳದು... ನನಗೀಗ ಗಂಡ, ಮಕ್ಕಳು, ಸಂಸಾರ, ಅಣ್ಣತಮ್ಮಂದಿರು, ಒಡವೆ, ವಸ್ತ್ರ ಯಾವುದೂ ಬೇಡ. ಎಲ್ಲಾ ಆಸೆಗಳನ್ನೂ ತೊರೆದು ವಿರಾಗಿಣಿಯಂತೆ ನಿಂತಿದೀನಿ. ಅಂದು ತಂದೆಯನ್ನು ಎದುರಿಸಲಾಗದೆ 'ನಿನ್ನನ್ನು ಬಿಟ್ಟೆ' ಅಂದಿರಿ. ತಂದೇನ ಎದುರಿಸಲಾಗದ, ಅನ್ಯಾಯವನ್ನು ಪ್ರತಿಭಟಿಸಲಾಗದ ನೀವು ಗಂಡಸಲ್ಲ... ಹೇಡಿ... ನಾನು ಇಂಥ ಹೇಡಿಯೊಡನೆ ಬಾಳುವೆ ಮಾಡಲಾರೆ..."*

ಮದುವೆ, ದ್ವಿಪತ್ನಿತ್ವ, ಮೊದಲ ಹೆಂಡತಿಗಾಗುವ ಅನ್ಯಾಯ, ಅದರಿಂದ ಅವಳಲ್ಲಿ ಬೆಳೆವ ಸ್ವಾಭಿಮಾನ, ತನ್ನತನದ ಅರಿವು, ಅಂತ್ಯದಲ್ಲಿ ಗಂಡನ ಜೊತೆ ಮತ್ತೆ ಬಾಳು ಹೂಡುವ ಸಾಧ್ಯತೆಯನ್ನು ಅವಳು ತಿರಸ್ಕರಿಸುವುದು – ಇಂಥ ವಸ್ತುವನ್ನು ಕುರಿತು ಸುಶೀಲಾರಾವ್ ಅವರಿಗಿಂತ ಮೊದಲು ತ್ರಿವೇಣಿ, ವೀಣಾಶಾಂತೇಶ್ವರರು ಬರೆದಿದ್ದಾರೆ. ಹಾಗಾಗಿ ಇದು ಹೊಚ್ಚಹೊಸತಲ್ಲ. ಅಲ್ಲದೆ ದಾಕ್ಷಾಯಿಣಿಯ ಅಂತರಂಗದೊಳಗಿನ ತಳಮಳಗಳ ಮೂಲಕ ಅವಳು ತಲುಪಿದ್ದ ವೈಚಾರಿಕ ನಿರ್ಧಾರ ಇದು ಎನ್ನುವ ಹಾಗೆ ಕಥೆಯ ಕೊನೆಯ ಹಂತದ ಬೆಳವಣಿಗೆಯೇನೂ ಇಲ್ಲ. ಜೊತೆಗೆ ಗಂಡನಿಂದ ನಿಷ್ಕಾರಣವಾಗಿ ಪರಿತ್ಯಕ್ತಳಾದ ದಾಕ್ಷಾಯಿಣಿ ಸಾಂಸಾರಿಕ ಜೀವನವನ್ನು ಬೇಡವೆಂದರೂ ಅವಳು ಕೊರಳಿನ ಮಾಂಗಲ್ಯ, ಮೂಗುಬಟ್ಟು, ಓಲೆ, ಬಳೆಗಳ 'ಮುತ್ತೈದೆ' ತನವನ್ನೂ ವಿಭೂತಿ ನಡುವೆ ಹಣೆಯಲ್ಲಿ ಕಾಸಗಲ ಕುಂಕುಮಬೊಟ್ಟನ್ನೂ ಉಳಿಸಿಕೊಂಡು 32ರ ತುಂಬು ಪ್ರಾಯದಲ್ಲಿ ಎಂಥ ಸಾತ್ತ್ವಿಕ ಸೌಂದರ್ಯ ಸೂಸುತ್ತಿದ್ದಳು ಎಂಬುದನ್ನು ವರ್ಣಿಸುವ ಆಸಕ್ತಿಯೂ ಲೇಖಕಿಗಿದೆ. ಇಡೀ ಕಥೆಯಲ್ಲಿ ಬೀರಪ್ಪಗೌಡರ ದರ್ಪ ದಬ್ಬಾಳಿಕೆಯ ಚಿತ್ರಣದಲ್ಲಿರುವ ಜೀವಂತಿಕೆ, ಸಹಜತೆ, ಭಾಷಿಕವಾದ

ಸತ್ವಪೂರ್ಣತೆ, ದಾಕ್ಷಾಯಿಣಿಯು ಕೊನೆಯ ಮಾತುಗಳನ್ನಾಡುವಾಗ ತೀರ ಯಾಂತ್ರಿಕವಾಗಿಬಿಡುವುದನ್ನು ಕಾಣುತ್ತೇವೆ. ಈ ಕಾರಣದಿಂದಲೇ ಸುಶೀಲಾರಾವ್ ಅವರ ಕಥೆ ತ್ರಿವೇಣಿ ಮತ್ತು ವೀಣಾಶಾಂತೇಶ್ವರರ ಯತ್ನದ ಅರ್ಥಪೂರ್ಣ ಮುನ್ನಡೆಯೆನ್ನಲು ಕಷ್ಟವಾಗುತ್ತದೆ. ಏಕೆಂದರೆ ಓದುಗರು ದಾಕ್ಷಾಯಿಣಿಯ ಕಥೆಗಿಂತ ಈ ಕಥೆಯ ಜಗಳಗಳ ಸನ್ನಿವೇಶಗಳಲ್ಲೇ ರಂಜನೆಯನ್ನು ಕಂಡರೆ ಅಚ್ಚರಿಯಿಲ್ಲ.

ಅನ್ಯಾಯದ ವಿರುದ್ಧವಾಗಿ ಒಬ್ಬ ಹಳ್ಳಿಯ ಹೆಣ್ಣುಮಗಳು ತನ್ನ ತಂದೆಯ ವಿರುದ್ಧವೇ ಪಂಚಾಯಿತಿ ಕಟ್ಟಿಸಿ ನ್ಯಾಯ ಪಡೆದ ದಿಟ್ಟತನವನ್ನು ಚಿತ್ರಿಸುವ ಕಥೆ **'ಗೌಡರ ಚೆನ್ನವ್ವ'**. ಕುಲದಿಂದ ಕೆಳಗಿನವಳನ್ನು ಮೋಹಿಸಿ ಎರಡನೆಯ ಪತ್ನಿಯಾಗಿ ಮನೆಗೆ ಕರೆತಂದು, ಅವಳಿಗೆ ಯಜಮಾನಿಕೆಯನ್ನು ಒಪ್ಪಿಸಿ, ತನ್ನ ಮೊದಲ ಹೆಂಡತಿ ಮಕ್ಕಳಿಗೆ ಆಸ್ತಿಯೂ ಸಿಗದಂತೆ ಬೀದಿಪಾಲು ಮಾಡಹೊರಟಾಗ, ಹಿರಿಮಗಳು ಚೆನ್ನಕ್ಕ ತನ್ನ ತಾಯಿ, ತಮ್ಮಂದಿರಿಗೆ ನ್ಯಾಯವನ್ನು ಕೊಡಿಸಲು ತಂದೆಯ ಅನ್ಯಾಯದ ವಿರುದ್ಧ ಪಂಚಾಯ್ತಿ ಕಟ್ಟಿಸುತ್ತಾಳೆ. ಕುಲಸ್ತಳಾದ ಮೊದಲ ಹೆಂಡತಿ ಮತ್ತು ಅವಳ ಮಕ್ಕಳಿಗೇ ಸಲ್ಲಬೇಕಾದ ನ್ಯಾಯವಾದ ಆಸ್ತಿಯನ್ನು ಅವಳಿಚ್ಛೆಯಿಲ್ಲದೆ ಕರೆತಂದ ಎರಡನೆಯ ಹೆಂಡತಿಗೆ ನೀಡುವುದರ ವಿರುದ್ಧ ವಾದಮಾಡಿ ಪಂಚಾಯ್ತರು ಒಪ್ಪುವಂತೆ ಮಾಡುತ್ತಾಳೆ. ಮದುವೆಗೆ ಬೆಳೆದುನಿಂತ ಈ ಮಗಳಿಗೆ ಸೂಕ್ತ ವರನನ್ನು ಹುಡುಕಿ, ಮದುವೆ ಮಾಡಲು ಮೊದಲ ಹೆಂಡತಿ ಮತ್ತು ಅವಳ ಮಕ್ಕಳಿಗೆ ನ್ಯಾಯವಾದ ಆಸ್ತಿಪಾಲನ್ನು ಕೊಡಲು ಪಂಚಾಯಿತರು ಚೆನ್ನಕ್ಕನ ತಂದೆ ಮುರಿಗೆಪ್ಪಗೌಡರಿಗೆ ತಾಕೀತು ಮಾಡುತ್ತಾರೆ. ಆದರೆ ತಂದೆಯ ವಿರುದ್ಧವಾಗಿಯೇ ತಿರುಗಿಬಿದ್ದ ಚೆನ್ನಕ್ಕ ಸಂಸಾರಗಿತ್ತಿಯಾಗಿ ಹೇಗೆ ಬಾಳಿಯಾಳೆಂದು ಯಾವ ಗಂಡುಗಳೂ ಅವಳ ಕೈಹಿಡಿಯಲು ಬರುವುದಿಲ್ಲ. ಹೀಗಾಗಿ ಚೆನ್ನಕ್ಕ ಬದುಕಿಡೀ ಅವಿವಾಹಿತೆಯಾಗಿಯೇ ಉಳಿಯುತ್ತಾಳೆ. ತಂದೆ ತೀರಿಕೊಂಡ ಮೇಲೆ ತಾಯಿ–ತಮ್ಮಂದಿರನ್ನು ಬೆಳೆಸಿ ಮನೆಯ ಎಲ್ಲಾ ಜವಾಬ್ದಾರಿ ಹೊತ್ತು 'ಚೆನ್ನವ್ವ'ನೆಂದು ಊರವರ ಗೌರವಕ್ಕೆ ಪಾತ್ರಳಾಗುತ್ತಾಳೆ. ಅವಳ ತಮ್ಮನ ವಂಶದವನೊಬ್ಬ ತಮ್ಮ ಮನೆತನವನ್ನು ಉಳಿಸಿ ಬೆಳೆಸಿದ 'ಮನೆದೇವತೆ' ಯೆಂದು ಈ ಚೆನ್ನವ್ವನ ಕಥೆಯನ್ನು ಲೇಖಕಿಗೆ ಹೇಳಿದಹಾಗೆ ಈ ಕಥೆಯ ನಿರೂಪಣೆಯಿದೆ. ಆದರೆ ದಾಕ್ಷಾಯಿಣಿ ಕಥೆಯಲ್ಲಿ ಅವಳ ಪಾತ್ರಕ್ಕಿಂತ ಇತರ ಪಾತ್ರಗಳು ಸನ್ನಿವೇಶಗಳೇ ಮೇಲುಗೈ ಪಡೆದಿದ್ದರೆ, ಈ ಕಥೆಯಲ್ಲಿ ಚೆನ್ನವ್ವನೊಬ್ಬಳೇ ಉಜ್ವಲವಾಗಿ ಹೊಳೆಯುತ್ತ ಉಳಿದ ಎಲ್ಲಾ ಪಾತ್ರಗಳೂ ನಿಸ್ತೇಜವಾಗಿ ಸೊರಗಿದಂತೆ ತೋರುತ್ತವೆ.

'ಷೋಕೇಸಿನ ಗೊಂಬೆ' ಬ್ಯಾಂಕ್ ಉದ್ಯೋಗಿಯಾದ ನಗರವಾಸಿ ಹೆಣ್ಣಿನ ಕಥೆ. ಇವಳ ವೈಚಾರಿಕ ಸೂಕ್ಷ್ಮತೆ, ಬುದ್ಧಿವಂತಿಕೆ, ಕಾರ್ಯದಕ್ಷತೆ ಗಳನ್ನು ಮೆಚ್ಚಿ ಮದುವೆಯಾಗುವ ಬ್ಯಾಂಕ್ ಮ್ಯಾನೇಜರ್, ವಾಸ್ತವದಲ್ಲಿ ಅತ್ಯಂತ Chauvinist ಆಗಿದ್ದು ಅವಳನ್ನು ನಿಂತಲ್ಲಿ, ಕೂತಲ್ಲಿ ನಿಯಂತ್ರಿಸುವ, ಪಾರ್ಟಿಗಳಲ್ಲಷ್ಟೇ ಅಲಂಕಾರಕ್ಕಾಗಿ ಮೆರೆಸುವ, ಅವಳಿಗೆ ಯಾವ ಸ್ವಾತಂತ್ರ್ಯವನ್ನೂ ಕೊಡದೆ ಅವಳ ಸ್ವಂತ ವ್ಯಕ್ತಿತ್ವವನ್ನೇ ನಿರಾಕರಿಸುವ ದಬ್ಬಾಳಿಕೆಯ ವ್ಯಕ್ತಿಯಾಗಿರುತ್ತಾನೆ. ತಾನು ಬೇರೆ ಹೆಣ್ಣಿನ ಸಂಬಂಧವಿಟ್ಟುಕೊಂಡು ಹೆಂಡತಿಯ ಶೀಲವನ್ನು ಶಂಕಿಸಿ ಕಾಡುತ್ತಾನೆ. ನಿಧಾನವಾಗಿ ಅವನೊಂದಿಗೆ ಬದುಕುವುದು ಅಸಾಧ್ಯವೆಂದು ಅರಿವಾಗಿ ಆ ಹೆಣ್ಣು ಅವನನ್ನು ಧಿಕ್ಕರಿಸಿ, ಅವನೊಂದಿಗಿನ ಸಂಬಂಧವನ್ನೂ ಧಿಕ್ಕರಿಸಿ ಹೊರಬರುತ್ತಾಳೆ. ಇದು ಬಹುತೇಕ ಇಬ್ಸನ್ನನ 'A dolls House'ಅನ್ನೇ ನೆನಪಿಗೆ ತರುವ ಕಥೆ. ಆದರೆ ಈ ಕಥೆ ನಾಯಕಿಯು ಹೇಳುವ ನಿರಾಕರಣೆಯ ನುಡಿಗಳಿಗೇ ಮುಗಿಯುವುದಿಲ್ಲ, ಆಕೆಗೆ ಗಂಡ ಕೊಡುವ ಭಂಡತನದ ಆದರೆ ಹತಾಶೆಯಿಂದ ಬಂದಿರ ಬಹುದಾದ ನುಡಿಗಳಿಂದ ಕಥೆಯನ್ನು ಲೇಖಕಿ ಅಂತ್ಯಗೊಳಿಸುವುದು ಒಂದು ರೀತಿ ಅಸಾಂಗತ್ಯದ ಭಾವವನ್ನು ಹುಟ್ಟಿಸುತ್ತದೆ.

ಗಂಡ ಸತೀಶ್ ಭಟ್, ಹೆಂಡತಿ ತನ್ನನ್ನು ತೊರೆದು ಹೋದಾಗ ಸೋಫಿಯಾ, ಮೀರಾ, ಶಾಂತಾ ಮುಂತಾದ ಹಲವು ಹೆಣ್ಣುಗಳೊಂದಿಗೆ ಬಾಳಲು ಯತ್ನಿಸಿ ವಿಫಲನಾದಾಗ ಹಳೆಹೆಂಡತಿಯ ಪಾದವೇ ಗತಿ ಎಂದು ವಿನುತಾಳ ಬಳಿಗೆ ಬರುತ್ತಾನೆ. ಆದರೆ ಅದಕ್ಕೂ ಮೊದಲು ಆಕೆಯ ಆಫೀಸಲ್ಲೇ ಕೆಲಸಮಾಡುತ್ತಿದ್ದ ತನ್ನ ಗೆಳೆಯ ರಮೇಶನ ಮೂಲಕ ಗುಪ್ತಚಾರಿಕೆ ನಡೆಸಿ, ಹೆಂಡತಿ ಯಾರೊಂದಿಗೂ ಚೆಲ್ಲುಬಡಿಯದೆ ಮಾನವಾಗಿ ಬದುಕುವವಳೆಂಬುದನ್ನು ಖಚಿತ ಮಾಡಿಕೊಂಡೇ ಬಂದಿರುತ್ತಾನೆ. ಅದನ್ನು ಹೆಮ್ಮೆಯಿಂದ ಅವಳೆದುರೇ ಹೇಳಿಕೊಳ್ಳುತ್ತಾನೆ. ಅವಳು ಪ್ರಶ್ನಿಸದಿರುವುದು ಅಸಾಧ್ಯವಾಗುತ್ತದೆ. ತನ್ನ ಶೀಲವನ್ನು ಪರೀಕ್ಷಿಸಲು ಹೊರಟವನ ಅಶುದ್ಧ ಬಾಳಿನ ವೈಖರಿಯನ್ನು ನಿರ್ದಾಕ್ಷಿಣ್ಯವಾಗಿ ಬಯಲಿಗೆ ತರುತ್ತಾಳೆ. ಗಂಡಾಗಿ ತಾನೇನು ಮಾಡಿದರೂ ಸರಿ ಎಂದು ಅವನು ಸಮರ್ಥಿಸಿಕೊಂಡಾಗ *"ವ್ಹಾ... ನೀವು ಗಂಡು... ಏನು ಬೇಕಾದರೂ ಮಾಡಲು ಸ್ವತಂತ್ರರಿದ್ದೀರಿ. ನೀತಿ, ನಡತೆಗಳ ಕಟ್ಟುಪಾಡೆಲ್ಲ ಹೆಣ್ಣಿಗೆ. ನೀವು ಹೆಣ್ಣಿನ ಮನಸ್ಸನ್ನು ಅರಿಯಲಿಲ್ಲ. ಅವಳೂ ಮನುಷ್ಯಳು. ಅವಳಿಗೂ ಆಸೆ, ಆಕಾಂಕ್ಷೆ, ತಾಯ್ತನ, ಸ್ವಂತವ್ಯಕ್ತಿತ್ವ, ಸ್ವಾತಂತ್ರ್ಯವಿದೆ ಎಂದು ನೀವು ಭಾವಿಸಲಿಲ್ಲ. ಹೆಣ್ಣೆಂದರೆ ಗಂಡ ಹೇಳಿದಂತೆ ಕೇಳುವ ಅವನಿಚ್ಛೆಯಂತೆ ಬಾಳುತ್ತಾ ಮನೆಯಲ್ಲಿ ಬಿದ್ದಿರುವ ಪ್ರಾಣಿ, ಷೋಕೇಸಿನಲ್ಲಿಟ್ಟ ಗೊಂಬೆ. ನಾನು ನಿಮ್ಮ ಷೋಕೇಸಿನಿಂದ ಹೊರಬಂದ ಮೇಲೆ ಅಲ್ಲಿ ಬೇರೆ ಮೂರುಗೊಂಬೆ ಇಡಲು ನೋಡಿದಿರಿ, ಸರಿ ಹೋಗದೆ ಪುನಃ ನನ್ನನ್ನೇ ಇಡಲು ಬಂದಿರುವಿರಿ. ನನಗೆ ಬೇಕಿದ್ದುದು ಪ್ರೀತಿ, ಸ್ವಾತಂತ್ರ್ಯ–ತಾಯ್ತನ ಮಿ. ಸತೀಶ್, ನಾನು ನಿಮ್ಮೊಡನೆ ಬರಲಾರೆ. ನೀವು ಹೇಳಿದಂತೆ ಕೇಳಬಲ್ಲ, ಆಡಿಸಿದಂತೆ ಆಡಬಲ್ಲ ಕೀಲುಗೊಂಬೆಯೊಂದನ್ನು ನಿಮ್ಮ ಷೋಕೇಸಿನಲ್ಲಿಡಿ. ವಿದ್ಯೆ ಕಲಿಯದ ಅನಾಗರಿಕ ಹೆಣ್ಣು ನಿಮಗೆ ತಕ್ಕವಳಾಗಿರಬಹುದು. ನಾನು ಬರಲಾರೆ ಹೋಗಿಬನ್ನಿ... ಗುಡ್‌ಬೈ..."*

"ನನ್ನಿಚ್ಛೆಗೆ ಬಗ್ಗುವ ಹೆಣ್ಣಿಗಷ್ಟೇ ನಾನು ಬೆಲೆಕೊಡುವುದು. ನಾನೇನು ಮಾಡಿದರೂ ಗಂಡೆಂದು ಸಮಾಜ ಬೆಲೆಕೊಡುತ್ತದೆ. ನೀನು ನನ್ನನ್ನು ಧಿಕ್ಕರಿಸಿದ ಮಾತ್ರಕ್ಕೇ ನಾನೇನೂ ಬಾಗಲಾರೆ..." ಸತೀಶ್ ಬಿರುಗಾಳಿ ಯಂತೆ ಹೊರನಡೆದ ಕ್ಷಣಹೊತ್ತು ಸುಮ್ಮನೆ ನಿಂತಿದ್ದ ವಿನುತಾ ಸರ್‍ರನೆ ಒಳಗೆ ಹೋದಳು ಎಂದು ಕಥೆ ಕೊನೆಗೊಳ್ಳುತ್ತದೆ. ಇಬ್ಸನ್ನನ ನಾಟಕದಲ್ಲಿ ಹೊರನಡೆವಾಕೆ ಹೆಂಡತಿಯಾದರೆ, ಇಲ್ಲಿ ಹೊರನಡೆವವನು ಗಂಡ!

'ಸಮೀರನೆಂಬ ಹುಡುಗನ ಕಥೆ'ಯಲ್ಲಿ sadist ಗಂಡನ ಕೈಯಲ್ಲಿ ನರಳಿ, ಕೊನೆಗೆ ಬಿಡುಗಡೆ ಪಡೆದು ಶಾಲಾಶಿಕ್ಷಕಿಯಾದ ಮಹಿಳೆ ಕ್ಷುದ್ರ ಪರಿಸರದಿಂದಾಗಿ ತನ್ನ ವಿದ್ಯಾರ್ಥಿಯೊಬ್ಬನಲ್ಲೂ ಅಂಥದೇ sadist ಪ್ರವೃತ್ತಿ ಬೆಳೆಯುತ್ತಿರುವುದನ್ನು ಕಂಡು, ಅವನಿಗೆ ಆರೋಗ್ಯಕರ ಜೀವನ ಪರಿಸರವನ್ನು ಒದಗಿಸುವ ಮೂಲಕ ಮತ್ತೊಬ್ಬ ವಿಕೃತ ಮನದ ವ್ಯಕ್ತಿ ಸೃಷ್ಟಿಯಾಗುವುದನ್ನು ತಡೆಗಟ್ಟುವ ಚಿತ್ರಣವಿದೆ.

ವೈವಿಧ್ಯಮಯ ವಸ್ತುಗಳನ್ನು ಆರಿಸಿಕೊಳ್ಳುವುದಷ್ಟೇ ಅಲ್ಲ, ಅನೂಹ್ಯ ಬದುಕಿನ ಮಾದರಿಗಳ ಮೇಲೆ ಬೆಳಕು ಬೀರುವ ಯತ್ನವೂ ಸುಶೀಲಾರಾವ್ ಕಥೆಗಳಲ್ಲಿದೆ. **'ಬದುಕ ಮನ್ನಿಸು ಪ್ರಭುವೆ'** ಕಥೆಯಲ್ಲಿ ಅತ್ಯಂತ ಮರ್ಯಾದಸ್ಥ ಸಿರಿವಂತ ಕುಟುಂಬದ ಗೃಹಿಣಿಗೆ 'ಸ್ವರ್ಗಕ್ಕೆ ಕಿಚ್ಚು ಹಚ್ಚು' ಎಂಬಂಥ ಅಚ್ಚುಕಟ್ಟಾದ ಕುಟುಂಬವಿದೆ. ಆದರೆ ಇದು ಲೋಕದ ಕಣ್ಣಿಗೆ ಕಾಣಿಸುವ ನೋಟ. ಒಳಗೆ ಹೃದಯ ವಿದ್ರಾವಕ

ಸಂಕಟಗಳಿಗೆ ಆ ಗೃಹಿಣಿ ತುತ್ತಾಗಿರುವುದನ್ನು ಕಥೆ ಹೇಳುತ್ತದೆ. ಬಡ, ರೋಗಿಷ್ಠ ತಂದೆಯನ್ನು ಆಸ್ಪತ್ರೆಗೆ ಸೇರಿಸಿ, ಚಿಕಿತ್ಸೆ ಕೊಡಿಸಿ, ತನ್ನ ಕೈಹಿಡಿದ ಭೀಮಸೇನಾಚಾರ್ಯ ಕೇವಲ ಸಿರಿವಂತನಷ್ಟೇ ಅಲ್ಲ, ಸಾಕ್ಷಾತ್ ದೇವರೆಂದೇ ರಿಂದಕ್ಕ ನಂಬಿದ್ದು ಅತ್ಯಲ್ಪ ಕಾಲದಲ್ಲೇ ಹುಸಿಯಾಗುತ್ತದೆ. ಹುಟ್ಟು ಷಂಢನಾದ ಆ ಆಚಾರ್ಯನಿಗೆ ತಾನೂ ಅಪ್ಪನೆನ್ನಿಸಿಕೊಳ್ಳುವ ತೀರದ ಆಸೆ. ಅದಕ್ಕಾಗಿ ಬಡ ಹುಡುಗಿಯ ಕೈಹಿಡಿದು ಅವಳ ಬಡತನವನ್ನೇ ಭಾವನಾತ್ಮಕ ಬ್ಲಾಕ್‌ಮೇಲ್‌ಗೆ ಸಾಧನವಾಗಿಸಿಕೊಂಡು, ತನ್ನ ಆಳಾಗಿದ್ದ ರಾಯಪ್ಪನನ್ನು ಅವಳು ಕೂಡುವಂತೆ ಆಗ್ರಹಿಸುತ್ತಾನೆ. ಇದಕ್ಕೆ ಮಹಾಭಾರತದ ಕುಂತಿಯ ಉದಾಹರಣೆಯನ್ನು ನೀಡುತ್ತಾನೆ. ರಾಯಪ್ಪನ ಮೂಲಕ ರಿಂದವ್ವನಿಗೆ ಹುಟ್ಟಿದ ಇಂದಿರೆ, ಅವಿನಾಶರ ಹುಟ್ಟಿನ ಸತ್ಯ ಲೋಕಕ್ಕೆ ತಿಳಿಯುವ ಪ್ರಮೇಯವೇ ಇರಲಿಲ್ಲ. ಆದರೆ ಹಸಿದಹುಲಿ ರಾಯಪ್ಪ ಇಂದಿರೆಯ ಮೇಲೆ ಅತ್ಯಾಚಾರವೆಸಗಿದಾಗ ರೋಸಿಹೋದ ರಿಂದವ್ವ ಅವನನ್ನು ಮಚ್ಚಿನಿಂದ ಕತ್ತರಿಸಿ ಹಾಕುತ್ತಾಳೆ. ಕೊಲೆಗೆ ಕಾರಣ ಪೊಲೀಸರು ಪ್ರಶ್ನಿಸುತ್ತಿದ್ದಾಗ ತನ್ನ ಅವನ ಸಂಬಂಧವಿತ್ತೆಂಬ ನಿಜವನ್ನು ಹೇಳಿದರೂ ಮಕ್ಕಳ ಬಗ್ಗೆ ಮಾತಾಡುವುದಿಲ್ಲ. ಕೊಲೆಗಾರಳೆನಿಸಿ, ಹಾದರಗಿತ್ತಿ ಎಂಬ ಕಳಂಕ ಹೊತ್ತ ರಿಂದವ್ವ ಆಜೀವ ಕಾರಾಗೃಹವಾಸದ ಶಿಕ್ಷೆಗೆ ಗುರಿಯಾದರೆ ಅವಳಿಂದ ಎಲ್ಲಾ ಪ್ರೀತಿ, ಸೇವೆ, ತ್ಯಾಗ, ಪ್ರತಿಷ್ಠೆಗಳನ್ನೂ ಪಡೆದ ಗಂಡ, ಮಕ್ಕಳು ಅವಳ ಬಗ್ಗೆ ದ್ವೇಷ ತಿರಸ್ಕಾರ ಮಾತ್ರ ತೋರುತ್ತಾರೆ. ಸೆರೆಯಲ್ಲಿರುವಾಗ ಆಗಲಿ, ಅವಳು ಬಿಡುಗಡೆ ಹೊಂದಿದಾಗ ಆಗಲಿ ಅವಳನ್ನು ಕಾಣಲು ಹೇಸಿ, ನಿರಾಕರಿಸಿದ್ದ ನಿರ್ದಯೆಯಿಂದ ವರ್ತಿಸಿದ್ದ ಮಗ ಅವಿನಾಶನಿಗೆ ರಿಂದವ್ವ ಮಾಡಿದ ತ್ಯಾಗ, ಅವಳು ಪಟ್ಟ ಬವಣೆಯ ಸತ್ಯ ಅರಿವಿಗೆ ಬರುವುದು ಇಡೀ ಜಗತ್ತಿನಲ್ಲಿ ರಿಂದವ್ವನನ್ನು ಕೊನೆಯವರೆಗೂ ಪ್ರೀತಿಯಿಂದಲೇ ಕಾಣುವ ಅವಳ ಬಾಲ್ಯದ ಜೀವಗೆಳತಿಯಾದ ಫಕೀರವ್ವನಿಂದ.

ಜೈಲಿನಿಂದ ಬಿಡುಗಡೆಯಾದ ರಿಂದವ್ವ ತನ್ನವರ ಬಳಿಗೆ ಬಂದು ಕಿಂಚಿತ್ತು ಪ್ರೀತಿಗಾಗಿ ಅರಸಿ ಬಳಲುವ ಸಂಕಟಮಯ ಚಿತ್ರ ದಾರುಣವಾಗಿ ಮನದಲ್ಲಿ ಉಳಿಯುವಂತೆ ಮಾಡುವ ಬಲಿಷ್ಠ ಚಿತ್ರಕ ಶಕ್ತಿ ಸುಶೀಲಾ ಅವರಲ್ಲಿದೆ, 'ತಾಯಿ ಸತ್ತು ಮಣ್ಣಾದ ಮೇಲೆ ಫಕೀರವ್ವನಿಂದ ಅವಳ ಬಗೆಗಿನ ನಿಜವರಿತ ಅವಿನಾಶನ ಮನದಲ್ಲಿ ಅದುವರೆಗೆ ತಂದೆಗೆ ಇದ್ದ ಜಾಗ ಈಗ ತಾಯಿಯದಾಯಿತು' ಎಂಬ ಲೇಖಕಿಯ ನಿರೂಪಣೆ ಈ ಕಥೆ ಹುಟ್ಟಿಸುವ ಭಾವತೀವ್ರತೆಗೆ ತಕ್ಕುದಾದ ಪರಿಣಾಮಕಾರಿ ಅಂತ್ಯವಲ್ಲವೇ ಅಲ್ಲ.

ಸುಶೀಲಾರಾವ್ ಉತ್ತಮ ಕಥನ ಪ್ರತಿಭೆಯುಳ್ಳ ಲೇಖಕಿ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಅವರು ಸಾಹಿತ್ಯವಲಯದಿಂದ ದೂರವಿದ್ದು ತಮ್ಮಷ್ಟಕ್ಕೆ ಅಂತಃಸ್ಫುರಣೆಯಿಂದಲೇ ಬರೆದುಕೊಳ್ಳುತ್ತಾ ಬಂದವರು. ಎದೆತುಂಬ ತುಂಬಿಕೊಂಡ ಅನುಭವಗಳನ್ನು ಕಥೆಯಾಗಿ ಮತ್ತೆ ಸೃಷ್ಟಿಸುವ ಹೊತ್ತಿನಲ್ಲಿಯೂ ಆದ್ಯತೆ, ಆಯ್ಕೆ, ನಿಯಂತ್ರಣಗಳ ಕಥನಕ್ರಿಯೆಯು ಅಪೇಕ್ಷಿಸುವ ಅಚ್ಚುಕಟ್ಟುತನ ಬಹುಶಃ ಕಾಲಕಾಲಕ್ಕೆ ವಿಮರ್ಶೆ ನಡೆದಿದ್ದರೆ ಲಾಭವಾಗುತ್ತಿತ್ತೋ ಏನೋ. ಆದರೆ ಸೂಕ್ತ ವಿಮರ್ಶಾತ್ಮಕ ಚರ್ಚೆಯ ಅಭಾವದ ನಡುವೆಯೇ ತೆರೆದ ಕಣ್ಣಿನ, ತೆರೆದ ಮನದ ಅಂತಃಕರಣದಿಂದ ಬದುಕನ್ನು ಕಂಡು ಕಾಣಿಸುವ ಅಪರೂಪದ ಲೇಖಕಿ ಸುಶೀಲಾರಾವ್. ●




ಪ್ರಜ್ಞಾಧ್ವನಿ

ಅಕ್ಷರಗಳೊಡನೆ ಆಟವಾಡುತ್ತ
ಸುದ್ದಿಗಳ ಮಾಯಾಲೋಕದಲ್ಲಿ
ಕಳೆದುಹೋಗದೆ
ಬೆಡಗು ಬಿನ್ನಾಣಗಳನ್ನು
ವಿಶ್ವರೂಪಗೊಳಿಸದೆ
ಬಾವಿಯೊಳಗಿನ ಕಪ್ಪೆಯಾಗದೆ
ಕಂಗಳ ತುಂಬ ಕನಸುಗಳು
ಎತ್ತ ನೋಡಿದರೂ ಕಾಮನಬಿಲ್ಲು
ಕಾಣುವ ವಯಸ್ಸಿನಿಂದಲೂ
ಎದೆ ಥವಗುಟ್ಟಿಸುವ
ಬೂಟುಗಾಲಿನ ಸದ್ದು
ಹಗಲು ರಾತ್ರಿಯೆನ್ನದೆ
ಕದಗಳ ಮೇಲಿನ ಕಟಕಟ
ದುಶ್ಶಾಸನರ ಅಟ್ಟಹಾಸದಲ್ಲಿ
ಕರಗಿಹೋಗುವ ಆಕ್ರಂದನ
ಬೀದಿ ಬದಿಯಲ್ಲಿನ
ದುಂದುಭಿಗಳ ಶಬ್ದದಬ್ಬರಕ್ಕೆ
ಹಮ್ಮುರಾಬಿಯನ್ನು ಆವಾಹಿಸದೆ
ಮಂದ್ರಸ್ಥಾಯಿಯ ಮಂಗಳ
ಹಾಡಲು ಹತ್ತು ವರ್ಷಗಳಿಂದ
ನಳಿಕೆಗಳ ಸಂಗಾತಿಯಾಗಿ
ಒಡಲು ಮುದುರಿದರೂ
ಪೂರ್ವಾಂಚಲದ ಪ್ರಜ್ಞೆಯ
ದನಿಯಾಗಿರುವ ನಿನಗೆ
ಸಾಥ್‌ದನಿಗಳು ಸಿಕ್ಕೇ ಸಿಗುತ್ತವೆ!

■ ಮ.ಶ್ರೀ ಮುರಳಿ ಕೃಷ್ಣ

ಅಡಿ ಟಿಪ್ಪಣಿ
ಇದು ಪತ್ರಕರ್ತೆ, ಕವಯಿತ್ರಿ ಮಣಿಪುರದ ಐರೋಮ್ ಶರ್ಮಿಳಾ ಚಾನು ಅವರು Armed Forces Special Powers Act (AFSPA) ವಿರುದ್ಧ ಕಳೆದ ಹತ್ತು ವರ್ಷಗಳಿಂದ ಉಪವಾಸ ಸತ್ಯಾಗ್ರಹದ ಮೂಲಕ ಮಾಡುತ್ತಿರುವ ಹೋರಾಟ, ಅಲ್ಲಿನ ಪ್ರಕ್ಷುಬ್ಧ ಪರಿಸ್ಥಿತಿ ಇತ್ಯಾದಿ ಕುರಿತು ಕೃತಜ್ಞತೆಯ ನುಡಿ.



ಬೆಂಗಳೂರಿನ ಗಾರ್ಮೆಂಟ್ಸ್ ಉದ್ಯಮದ ಮಹಿಳಾ ಕಾರ್ಮಿಕರ ಹೋರಾಟದ ಕೆಲವು ಚಿತ್ರಣಗಳು

■ ಆರ್. ಪ್ರತಿಭಾ

"ನಮಗೆ ಕೊಡೋದೇ ಕಡಿಮೆ ಸಂಬಳ, ಅದರಲ್ಲೂ ಒಬ್ಬೊಬ್ಬರಿಗೆ ಒಂದೊಂದು. ಅದೂ ಹೆಚ್ಚೂ ಅಂದ್ರೆ ತಿಂಗಳಿಗೆ 4500 ಅಷ್ಟೇ, ಅದಕ್ಕಿಂತ ಹೆಚ್ಚು ಮೇಲೆ ಹೋಗಲ್ಲ, ಸಿಗುತ್ತೆ. ಈ ಸಿಟಿಯಲ್ಲಿ ಜೀವನ ಮಾಡೋಕೆ ಇಷ್ಟು ಎಲ್ಲಿ ಸಾಲುತ್ತೆ? ಪ್ರತಿ ತಿಂಗಳೂ ಸಾಲಾನೇ ಆಗುತ್ತೆ. ಈ ವರ್ಷ ಇನ್‌ಕ್ರಿಮೆಂಟ್ ಎಷ್ಟು ಮಾಡ್ತಾರಪ್ಪಾ ಅಂತ ಜೀವ ಬಿಗಿ ಹಿಡ್ಕೊಂಡು ಪ್ರತೀ ವರ್ಷವೂ ಕಾಯ್ತಾ ಇರ್ತೀವಿ, ಆದ್ರೆ ಇವರು ಮಾಡೋದು ದಿನಕ್ಕೆ ರೂ. 2, 3 ಹೆಚ್ಚೂಂದ್ರೆ 10 ರೂಪಾಯಿ ಅಷ್ಟೇ. ಅದನ್ನೂ ಇವರು ಇನ್‌ಕ್ರಿಮೆಂಟ್ ಹೆಸರಲ್ಲಿ ಮಾಡ್ತಾ ಇದ್ದಿದ್ದು, ಸರ್ಕಾರ ಹೆಚ್ಚಿಸೋ ಡಿ.ಎ. ಅಂತ ನಮಗೆ ಗೊತ್ತೇ ಇರ್ಲಿಲ್ಲ, ಎಂಥಾ ವಂಚನೆ! ನಮ್ಮ ಸಂಘಟನೆಯಿಂದ ಇವೆಲ್ಲ ನಮಗೆ ಗೊತ್ತಾಯಿತು. ಇದು ಕಾನೂನು ಪ್ರಕಾರ ನಮಗೆ ಸಿಗಬೇಕಾದ ಹಣ ಅಂತಲೂ ಗೊತ್ತಾಯ್ತು. ಅದನ್ನೂ ಇವರು ಪೂರ್ತಿ ಕೊಡ್ತಾ ಇರ್ಲಿಲ್ಲ.

2011ರಲ್ಲಿ ಡಿಎ ತಿಂಗಳಿಗೆ 408 ರೂ. ಆಗಿದೆ, ಅಂದ್ರೆ ದಿನಕ್ಕೆ 15. ರೂ.ನಷ್ಟು ಆಗುತ್ತೆ. ಆದ್ರೆ ನಮ್ಮ ಫ್ಯಾಕ್ಟರಿಯಲ್ಲಿ ಟೈಲರ್‌ಗಳಿಗೆ ಡಿ.ಎ. ಜಾಸ್ತಿ ಮಾಡೇ ಇರ್ಲಿಲ್ಲ. ವರ್ಷಪೂರ್ತಿ ದುಡಿದು, ಮೇನಲ್ಲಿ ಸಂಬಳ ಹೆಚ್ಚಾಗುತ್ತೆ ಅಂತ ನಾವು ಕಾಯ್ತಾ ಇರ್ತೀವಿ, ಬೆಲೆ ಏನು ಏರದೇ ಇರುತ್ತಾ? ನಮಗೆ ಮಾತ್ರ ಇವರು ತಿಂಗಳಿಗೆ 50 ರೂ., 100 ರೂ. ಜಾಸ್ತಿ ಮಾಡಿದರೆ ಹೇಗೆ? ನಮಗೆ ಸರ್ಕಾರ ಹೆಚ್ಚಿಸಿರೋ ಡಿ.ಎ. ಬೇಕೇ ಬೇಕು ಅಂತ ನಾವೆಲ್ಲ ಪ್ರತಿಭಟನೆ ನಡೆಸಿದೆವು. ನಮ್ಮ ಹೋರಾಟ ಹೇಗೆ ಅಂದ್ರೆ ಕೆಲಸ ನಿಲ್ಲಿಸೋದಲ್ಲ, ಸಾಂಕೇತಿಕ ಪ್ರತಿಭಟನೆ. ಎಲ್ಲರೂ ಕೈಗೆ, ಹಣೆಗೆ, ಕುತ್ತಿಗೆಗೆ ಕಪ್ಪು ಪಟ್ಟಿ ಕಟ್ಕೊಂಡು ಕೆಲಸ ಮಾಡೋಕೆ ಶುರು ಮಾಡಿದ್ವಿ, ಒಂದು ವಾರ ಹೀಗೇ ನಡೀತು. ಕೊಡಲಿಲ್ಲ ಅಂದ್ರೆ ಉಪವಾಸ ಕೂತ್ಕೋತೀವಿ ಅಂತಲೂ ಹೇಳಿದ್ವಿ, ತಕ್ಷಣ ನಮಗೆಲ್ಲರಿಗೂ ವೇತನದಲ್ಲಿ 408 ರೂ. ಜಾರಿಯಾಯ್ತು. ಇದು ನಮ್ಮ ಹೋರಾಟಕ್ಕೆ ಸಿಕ್ಕ ಜಯ"

–ಕಾರ್ಮಿಕರು, ಬಾಂಬೆ ರೆಯಾನ್ ಫ್ಯಾಷನ್ಸ್ ಲಿ. ಮೈಸೂರು ರಸ್ತೆ

ತಮ್ಮ ಹಕ್ಕು ಪಡೆದುಕೊಳ್ಳಲು ಹೋರಾಟವೇ ಅಸ್ತ್ರ ಎಂಬ ನಿರ್ಧಾರ ಕಡೆಗೂ ಗಾರ್ಮೆಂಟ್ಸ್ ಕಾರ್ಮಿಕರಲ್ಲಿ ಮೂಡಿದೆ. ಸರ್ಕಾರ ಹೆಚ್ಚಿಸಿದ ಡಿ.ಎ.ಯನ್ನು ನೀಡದಿರುವುದರ ವಿರುದ್ಧ, ಮೇ 16, 2011ರಂದು ಕಾರ್ಖಾನೆಯ ಸುಮಾರು 560 ಮಹಿಳಾ ಕಾರ್ಮಿಕರು ಕಪ್ಪುವಸ್ತ್ರ ಧರಿಸಿ ಕೆಲಸ ಮಾಡುವುದರ ಮೂಲಕ ತಮ್ಮ ಪ್ರತಿಭಟನೆ ತೋರಿಸಿದರು. ಆಡಳಿತವರ್ಗದವರು ಏನೇ ತಂತ್ರ ಮಾಡಿದರೂ, ಕಾರ್ಮಿಕರ ಒಗ್ಗಟ್ಟು ಮುರಿಯಲಿಲ್ಲ. ಬದಲಾಗಿ ಒಂದು ವಾರದ ಒಳಗೆ ಕೊಡದಿದ್ದರೆ ಉಪವಾಸ ಕೂರುತ್ತೇವೆಂದು ಆಡಳಿತವರ್ಗಕ್ಕೆ ತಿಳಿಸಿದರು. ಕಡೆಗೆ ಇದಕ್ಕೆ ಮಣಿದು ದಿನಾಂಕ 20–05–2011ರಂದು ಕಾರ್ಮಿಕರೆಲ್ಲರಿಗೂ ಅವರಿಗೆ ಸಿಗಬೇಕಾದ ವೇತನ ದೊರೆಯಿತು. ಕಾರ್ಮಿಕರ ಸಂಘಟಿತ ಹೋರಾಟಕ್ಕೆ ಜಯ ಸಿಕ್ಕಿತು.

ಈ ಕಾರ್ಮಿಕರ ಹೋರಾಟವು ಅವರಿಗಷ್ಟೇ ಅಲ್ಲದೆ, ಈ ಮಾಲೀಕರಿಗೆ ಸೇರಿದ ಇತರ ಘಟಕಗಳ ಕಾರ್ಮಿಕರಿಗೂ ಡಿ.ಎ. ದೊರಕುವಂತೆ ಮಾಡಿದೆ. ಕಡೆಗೂ ಗಾರ್ಮೆಂಟ್ಸ್ ಕಾರ್ಮಿಕರು ತಮ್ಮ ಹೋರಾಟದಿಂದ ಮಾಲೀಕರನ್ನು ಮಣಿಸಿ, ತಮಗೆ ಸಿಗಬೇಕಾದ್ದನ್ನು ಪಡೆದುಕೊಂಡಿದ್ದು ಹೆಮ್ಮೆಯ ವಿಚಾರ. ಎಲ್ಲವೂ ದುಡ್ಡಿದ್ದವರಿಗೆ ಎಂಬ ಈ ಸಮಾಜದಲ್ಲಿ ಕಾರ್ಮಿಕ ವರ್ಗ ನ್ಯಾಯ ಒದಗಿಸಿಕೊಳ್ಳಲು 'ಸಂಘಟನೆ' ಮತ್ತು 'ಹೋರಾಟ'ಗಳೇ ಮಂತ್ರವೆಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ. ಇದರ ಹಿಂದೆ ಒಂಬತ್ತು ವರ್ಷಗಳ ಸಂಘಟನಾ ಪ್ರಯತ್ನದ ಶ್ರಮ ಇದೆ.

"ಅವತ್ತು ಫ್ಲೋರ್‌ಮನ್ ಇದ್ದಕ್ಕಿದ್ದಂತೆ ನನ್ನ ಹತ್ತಿರ ಬಂದು, ನೀನು ಪ್ರೊಡಕ್ಷನ್ ಸರಿಯಾಗಿ ಕೊಡ್ತಿಲ್ಲ, ನೀನು ಮನೆಗೆ ಹೋಗು, ಅಂತ ಬಾಬಿನ್ ಕೇಸ್ ಕಿತ್ಕೊಂಡ. ನಂಗೆ ಒಂದು ನಿಮಿಷ ಏನು ಮಾಡಬೇಕೂ ಅಂತಾನೇ ಗೊತ್ತಾಗಲಿಲ್ಲ, ಮುಂಚೆ ಆದರೆ ಅತ್ಕೊಂಡು ಬಂದುಬಿಡ್ತಿದ್ದೆ. ಈಗ ನಮ್ಮದೇ ಸಂಘಟನೆ ಇದೆಯಲ್ಲ, ಅದರಲ್ಲಿ ಹೀಗೆಲ್ಲ ಆದರೆ ಹೆದರಿಕೋಬಾರದು, ಕಾರ್ಖಾನೆಯಲ್ಲಿಯೇ ಮೇಲಿನವರ ಗಮನಕ್ಕೆ ತರಬೇಕು ಅಂತೆಲ್ಲ ನಮಗೆ ಹೇಳಿಕೊಟ್ಟಿದ್ರು, ನಾನು ಹೆದರ್ಲಿಲ್ಲ, ಪಿ.ಎಂ.(ಪ್ರೊಡಕ್ಷನ್ ಮ್ಯಾನೇಜರ್)ಗೆ ಹೇಳಿದೆ. ನಂದೇನೂ ತಪ್ಪಿಲ್ಲದಿದ್ದಾಗ, ಯಾಕೆ ಕಳಿಸ್ತೀರಿ? ನೀವೇನಾದ್ರೂ ಕಳಿಸಿದ್ರೆ ಯೂನಿಯನ್‌ಗೆ ದೂರು ಕೊಡ್ತೀನಿ ಅಂತನೂ ಹೇಳಿದೆ, ಪಿ.ಎಂ. ದನಿ ಎಷ್ಟು ಮೃದು ಆಯಿತು ಗೊತ್ತಾ? ಫ್ಲೋರ್‌ಗೆ ಕರೆಸಿ ವಿಚಾರಿಸಿ, ನನಗೆ ಕೆಲಸ ಮಾಡೋಕೆ ವಾಪಸ್ ಕಳಿಸಿದರು."

–ರಾಧಾ, ಗಾರ್ಮೆಂಟ್ಸ್ ಕಾರ್ಮಿಕರು, ಮೈಸೂರು ರಸ್ತೆ

"ಒಂದೇ ದಿನ ರಜಾ ಹಾಕಿ ತಾಯಿ ಮನೇಲಿ ಬಿಟ್ಟಿರೋ ನನ್ನ ಮಗೂನ ನೋಡೋಕೆ ಹೋಗಿದ್ದೆ, ಇಲ್ಲಿ ಅವನನ್ನ ನೋಡ್ಕೊಳೋಕೆ ಯಾರೂ ಇಲ್ವಲ್ಲಾ? ಮಾರನೇ ದಿನ ಬಂದ್ರೆ ಇನ್ನೂ ಹದಿನೈದು ದಿನ ಬಿಟ್ಕೊಂಡು ಬಾ ಅಂದ್ರು, ಒಳಗೇ ಬಿಡಲಿಲ್ಲ. ನಂಗೊತ್ತಿತ್ತು, ಹದಿನೈದು ದಿನ ಬಿಟ್ಟು ಬಂದ್ರೆ ನ್ಯೂ ಅಪಾಯಿಂಟ್‌ಮೆಂಟ್ ಮಾಡ್ಕೋತಾರೆ ಅಂತ. ಈಗ ನನಗೆ 4 ವರ್ಷ ಸರ್ವೀಸ್ ಆಗಿದೆ, ಇನ್ನು 7–8 ತಿಂಗಳು ಕೆಲಸ ಮಾಡಿದ್ರೆ ಸೆಟಲ್‌ಮೆಂಟ್* ಬರುತ್ತೆ,

* ಗಾರ್ಮೆಂಟ್ ಕೆಲಸಗಾರರು ಐದುವರ್ಷ ಪೂರ್ತಿ ಕೆಲಸ ಮಾಡಿದರೆ ವರ್ಷಕ್ಕೆ ಹದಿನೈದು ದಿನದಂತೆ ಲೆಕ್ಕಹಾಕಿ ಗ್ರ್ಯಾಚ್ಯುಯಿಟಿ ಕೊಡುವುದು ನಿಯಮ. ಐದುವರ್ಷ ಪೂರೈಸಲು ಅವಕಾಶ ಕೊಡದೆ ಇಲ್ಲ ಸಲ್ಲದ ನೆಪಮಾಡಿ ಕೆಲಸದಿಂದ ತೆಗೆದುಹಾಕಿ, ಪುನಃ ಫ್ರೆಶ್ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುತ್ತಾರೆ. ಅಂಥ ಹುನ್ನಾರಕ್ಕೆ ಬಲಿಯಾಗದ ಕಾರ್ಮಿಕರಿಗೆ ಸಣ್ಣಪುಟ್ಟ ಕಾರಣಗಳನ್ನು ಮುಂದಿಟ್ಟುಕೊಂಡು ವಿಪರೀತ ಕಿರುಕುಳ ಕೊಡುತ್ತಾರೆ.

ಅದಕ್ಕೂ ಕಲ್ಲು ಹಾಕ್ತಾನಲ್ಲಾ, ಏನು ಮಾಡೋದು ಅಂತ ಯೋಚಿಸಿದೆ. ತಕ್ಷಣ ನಂಗೆ ನಮ್ಮ ಸಂಘಟನೆ ನೆನಪಿಗೆ ಬಂತು, ಅಲ್ಲಿಗೆ ಹೋಗಿ ಇದನ್ನೆಲ್ಲ ಹೇಳಿ ಫ್ಯಾಕ್ಟರಿಗೆ ಒಂದು ಪತ್ರ ಬರೆದೆ, ಅವರು ಏನೂ ಉತ್ತರ ಕೊಡಲಿಲ್ಲ. ನಂತರ ನಮ್ಮ ಸಂಘಟನೆ ನೆರವಿನಿಂದ ಲೇಬರ್ ಕೋರ್ಟ್‌ನಲ್ಲಿ ಕೇಸ್ ಹಾಕಿದೆ, ಕೇಸ್ ನನ್ನ ಪರವಾಗಿ ಆಯಿತು. ನಾನು ಈಗ ಅದೇ ಫ್ಯಾಕ್ಟರಿಯಲ್ಲಿ ಕೆಲಸ ಮಾಡ್ತಾ ಇದ್ದೀನಿ, ಇನ್ನು ನಾನು ಯಾವುದಕ್ಕೂ ಹೆದರೋದಿಲ್ಲ. ಧೈರ್ಯವಾಗಿ ಎದುರಿಸ್ತೀನಿ ಅನ್ನೋ ನಂಬಿಕೆ ಬಂದಿದೆ."

*–**ಶೋಭಾ,** ಗಾರ್ಮೆಂಟ್ಸ್ ಕಾರ್ಮಿಕರು, ಮೈಸೂರು ರಸ್ತೆ*

ಬೆಂಗಳೂರು ಮಹಾನಗರದಲ್ಲಿ ಸುಮಾರು ಐದುಲಕ್ಷದಷ್ಟು ಇರುವ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಇಂದು ಪ್ರತಿದಿನ ತಮ್ಮ ಬೆವರು ಹರಿಸಿ, ದೇಶದ ವಿದೇಶೀ ವಿನಿಮಯಕ್ಕೆ ತಮ್ಮ ಗಣನೀಯ ಕೊಡುಗೆ ನೀಡುತ್ತಿದ್ದಾರೆ. ಆದರೆ ಅವರು ಕಾನೂನು ಪ್ರಕಾರ ತಾವು ಪಡೆದುಕೊಳ್ಳ ಬೇಕಾದ ಹಕ್ಕಿಗೂ ಹೋರಾಡಬೇಕಾಗಿದೆ ಎಂದು ಮೇಲಿನ ಉದಾಹರಣೆಗಳಿಂದ ತಿಳಿಯುತ್ತಿದೆ. ಎಷ್ಟೇ ವರ್ಷ ಸೇವೆ ಸಲ್ಲಿಸಿದ್ದರೂ, ಸೂಪರ್‌ವೈಸರ್, ಫ್ಲೋರ್ ಪ್ರೊಡಕ್ಷನ್ ಮ್ಯಾನೇಜರ್ ಎಂಬ ಪುರುಷ ಆಡಳಿತವರ್ಗವು ಒಂದು ಮಾತು ಹೇಳಿದರೆ ಮರುಮಾತಾಡದೇ ಅಲ್ಲಿಂದ ಕೆಲಸಬಿಟ್ಟು ಎದ್ದು ಬರಲೇಬೇಕಾದ ಪರಿಸ್ಥಿತಿ. ಇದಕ್ಕೆ ಕಾರಣ, ಕಾನೂನಿನ ಅರಿವಿಲ್ಲದೆ ಇರುವುದು, ಪಿತೃಪ್ರಧಾನ ವ್ಯವಸ್ಥೆ ಮತ್ತು ಸಂಘಟನೆಯ ಕೊರತೆ.

ಸರ್ಕಾರದ 2008ರ ಅಂಕಿ ಅಂಶಗಳ ಪ್ರಕಾರ ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ಕಾರ್ಮಿಕರ ಸಂಖ್ಯೆ 3.52 ಲಕ್ಷ, ಸುಮಾರು 750 ರಿಂದ 800 ಕಾರ್ಖಾನೆಗಳು. ಆದರೆ ನಿಜಾಂಶ ಬೇರೆ ಇದ್ದು, ಪ್ರತ್ಯಕ್ಷವಾಗಿಯೇ ಬೆಂಗಳೂರಿನಲ್ಲಿ ಸುಮಾರು 5 ಲಕ್ಷ ಕಾರ್ಮಿಕರು ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದಾರೆ. ಇವರಲ್ಲಿ ಶೇ. 90 ಭಾಗ ಮಹಿಳೆಯರೇ ಆಗಿದ್ದಾರೆ.

ಪ್ರಪಂಚದ ಮುಂದುವರೆದ ರಾಷ್ಟ್ರಗಳಿಗೆ ಉಡುಪು ಪೂರೈಸುವ ಹೆಸರಾಂತ ಬ್ರಾಂಡ್‌ಗಳು ಭಾರತ, ಚೈನಾ, ಬಾಂಗ್ಲಾ, ಶ್ರೀಲಂಕಾ ಮುಂತಾದ ಏಷ್ಯಾದ ರಾಷ್ಟ್ರಗಳಿಗೆ ಈ ಉಡುಪುಗಳನ್ನು ತಯಾರಿಸುವ ಜವಾಬ್ದಾರಿ ವಹಿಸುತ್ತವೆ. ಭಾರತದಲ್ಲಿ ದೆಹಲಿ, ಮುಂಬೈ, ತಿರುಪ್ಪೂರು, ಚೆನ್ನೈ ಹಾಗೂ ಬೆಂಗಳೂರು ಬಹಳ ಪ್ರಮುಖ ಉಡುಪು ತಯಾರಿಸುವ ನಗರಗಳು. ಬೆಂಗಳೂರು ಸದ್ಯಕ್ಕೆ ಎರಡನೇ ಸ್ಥಾನದಲ್ಲಿದೆ.

ಕಳೆದ 40 ವರ್ಷಗಳಿಂದ ಬೆಂಗಳೂರಿನಲ್ಲಿ ಈ ಉದ್ಯಮ ನೆಲೆಗೊಂಡಿದ್ದರೂ, 2000ದ ದಶಕದಲ್ಲಿ ಇದು ಪ್ರಾಮುಖ್ಯ ಪಡೆದುಕೊಂಡಿತು. ಉದ್ಯಮ ವಿಸ್ತಾರವಾಯಿತು, ಬಂಡವಾಳ ಹೂಡಿಕೆ ಹೆಚ್ಚಾಯಿತು. ಕಾರ್ಮಿಕರಿಗೆ ಕೆಲಸದ ಅವಕಾಶ ಹೆಚ್ಚಾಯಿತು, ಜೊತೆಗೆ ಕಾರ್ಮಿಕರ ಶೋಷಣೆಯೂ ಸಹ ದುಪ್ಪಟ್ಟಾಗಿದೆ.

ಈ ಉದ್ಯಮದ ಒಂದು ಲಕ್ಷಣವೆಂದರೆ, ಇದೊಂದು ಯಂತ್ರ ಮತ್ತು ಕಾರ್ಮಿಕರನ್ನು ಯಥೇಚ್ಛವಾಗಿ ಹೊಂದಿದೆ. ಇಲ್ಲಿ ಕಾರ್ಮಿಕರು ಯಂತ್ರಗಳನ್ನು ಚಾಲನೆ ಮಾಡುವುದಿಲ್ಲ, ಬದಲಾಗಿ ಮಹಿಳಾ ಕಾರ್ಮಿಕರು ಯಂತ್ರಗಳೊಂದಿಗೆ ಯಂತ್ರಗಳಾಗಿ ಕೆಲಸ ಮಾಡುತ್ತಾರೆ. ಒಂದೇ ನಿಮಿಷದ ಬಿಡುವು ಅವರಿಗಿರುವುದಿಲ್ಲ. ಪ್ರತಿಯೊಂದು ಸೆಕೆಂಡೂ ಸಹ ಪ್ರೊಡಕ್ಷನ್ ಎಂಬ ಭೂತದ ಹಿಂದೆ ಓಡುತ್ತದೆ. ಏನೇ ಹೊಸ ತಂತ್ರಜ್ಞಾನ ಬಂದರೂ ಅದರಿಂದ ಕಾರ್ಮಿಕರ ಕೆಲಸ ಹಗುರಾಗುವ ಬದಲು ಹೊರೆಯಾಗುತ್ತಿದೆ. ಇಲ್ಲಿನ ಕಾರ್ಮಿಕರಿಗೆ ವಿಶೇಷ ತಾಂತ್ರಿಕಜ್ಞಾನ ಬೇಕಾಗಿಲ್ಲ. ಹೊಲಿಗೆ ಯಂತ್ರ ನಡೆಸುವುದು ಗೊತ್ತಿದ್ದರೆ ಸಾಕು. ಹೀಗಾಗಿ ಇಲ್ಲಿನ ಕಾರ್ಮಿಕರು ವಿಶೇಷವಾಗಿ ವಿದ್ಯಾವಂತರಾಗಿರುವುದಿಲ್ಲ. ಜೊತೆಗೆ ಬೆಂಗಳೂರು ಮಹಾನಗರ ಎಲ್ಲರ ಆಕರ್ಷಣೆಯಾಗಿರುವುದರಿಂದ, ಹಳ್ಳಿಗಳಲ್ಲಿ ಉದ್ಯೋಗದ ಅವಕಾಶಗಳೇ ಇಲ್ಲದಿರುವುದರಿಂದ, ಭೂರಹಿತ ವರ್ಗವು ಉದ್ಯೋಗ ಅರಸಿ ಬೆಂಗಳೂರಿಗೆ ವಲಸೆ ಬಂದಾಗ, ಹೆಣ್ಣುಮಕ್ಕಳು ಮೊದಲು ಆಯ್ಕೆ ಮಾಡಿಕೊಳ್ಳುವುದು ಗಾರ್ಮೆಂಟ್ಸ್ ಉದ್ಯೋಗವನ್ನು. ತಮಗಿರುವ



ಯಾವೊಂದು ಹಕ್ಕಿನ ಬಗೆಗೂ ತಿಳಿಯದ, ಕಾನೂನು ಅರಿವಿಲ್ಲದೆ ಕೇವಲ 'ದುಡಿಯಲು' ಬರುವ ಈ ಮಹಿಳೆಯರನ್ನು ಆಡಳಿತವರ್ಗವು ಚೆನ್ನಾಗಿಯೇ ಶೋಷಿಸುತ್ತಿದೆ. ಅತಿಯಾದ ಪ್ರೊಡಕ್ಷನ್ ಒತ್ತಡ, ಕಡಿಮೆ ಸಂಬಳ, 8 ಗಂಟೆಗಿಂತಲೂ ಹೆಚ್ಚು ದುಡಿತ, ಕೆಲಸದ ಸ್ಥಳದಲ್ಲಿ ಪುರುಷಾಧಿಕಾರಿಗಳಿಂದ ಶೋಷಣೆ, ಸಾಮಾಜಿಕವಾಗಿಯೂ ಕೆಳದರ್ಜೆಯ ಸ್ಥಾನಮಾನ–ಹೀಗೇ ಈ ಮಹಿಳಾ ಕಾರ್ಮಿಕರು ಅನುಭವಿಸುತ್ತಿರುವ ತೊಂದರೆಗಳು ಹಲವಾರು.

ಜಾಗತಿಕ ಪೈಪೋಟಿಯ ಸಂದರ್ಭದಲ್ಲಿ ಮಾಲೀಕರು ಎಲ್ಲಿಯೂ ರಾಜಿಮಾಡಿಕೊಳ್ಳಲು ಸಾಧ್ಯವಿಲ್ಲ. ಬದಲಾಗಿ ಕಾರ್ಮಿಕರನ್ನು ಹೆಚ್ಚು ಹೆಚ್ಚು ಹಿಂಡಿ, ಪ್ರೊಡಕ್ಷನ್ ತೆಗೆಸಿ ತಮ್ಮ ಉತ್ಪಾದನೆ ಹೆಚ್ಚಾಗುವಂತೆ ಮಾಡಿಕೊಂಡು ತಮ್ಮ ಲಾಭಾಂಶಕ್ಕೆ ಯಾವುದೇ ಧಕ್ಕೆ ಬರದಂತೆ ನೋಡಿಕೊಳ್ಳುತ್ತಿದ್ದಾರೆ. ಉದಾಹರಣೆಗೆ ಈ ದಿನ ಗಂಟೆಗೆ 120 ಪೀಸ್ ಮಾಡಿದರೆ, ಮಾರನೆಯ ದಿನ ಅದಕ್ಕಿಂತ 5 ಪೀಸ್ ಹೆಚ್ಚು ನಿಗದಿ ಪಡಿಸುತ್ತಾರೆ. ಅದನ್ನೂ ಮಾಡಿದರೆ ಮಾರನೆಯ ದಿನ ಇನ್ನೂ 5 ಪೀಸ್ ಪ್ರೊಡಕ್ಷನ್ ಹೆಚ್ಚಿಸುತ್ತಾರೆ. ಇದು ಏರುತ್ತಲೇ ಹೋಗುತ್ತದೆ. ಇದರ ಹಿಂದಿರುವುದು ಮನುಷ್ಯನ ಗರಿಷ್ಠ ಸಾಮರ್ಥ್ಯದ ದುರ್ಬಳಕೆ ಮಾಡಿಕೊಳ್ಳುವ ಹುನ್ನಾರ.

ಮಹಿಳಾ ಕಾರ್ಮಿಕರು ಬೆಂಗಳೂರಿನಲ್ಲಿ ಸಂಘಟನೆಯ ಪ್ರಕ್ರಿಯೆಯತ್ತ ಹೆಜ್ಜೆ ಹಾಕಿದ್ದು, 2002ರಿಂದ. ಮಹಿಳೆ ಸಾಮಾಜಿಕವಾಗಿಯೂ, ಕಾರ್ಖಾನೆಯಲ್ಲಿಯೂ ಸಂಘಟಿತವಾಗಿರಬೇಕು ಎಂಬ ಉದ್ದೇಶದಿಂದ 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ' ಹಾಗೂ 'ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್' ಕಳೆದ 7 ವರ್ಷಗಳಿಂದ ಕೆಲಸ ಮಾಡಿಕೊಂಡು ಬರುತ್ತಿವೆ.

ಈ ಕಾರ್ಮಿಕರೆಲ್ಲರೂ ಮೊದಲ ತಲೆಮಾರಿನ ಕಾರ್ಮಿಕರಾಗಿದ್ದು, ಯಾರಿಗೂ ಕಾರ್ಮಿಕ ಸಂಘಟನೆಗಳ ಹಿನ್ನೆಲೆಯಿಲ್ಲ. ಹಳ್ಳಿಯಿಂದ ನೇರವಾಗಿ ಕಾರ್ಖಾನೆಗೆ ಬಂದವರಾದ್ದರಿಂದ ಮಾಲೀಕ, ಕಾರ್ಮಿಕ ಸಂಬಂಧಗಳ ಬಗ್ಗೆ ಏನೇನೂ ಅರಿವಿರುವುದಿಲ್ಲ. ಬದಲಾಗಿ ಹಿಂದಿನಿಂದಲೂ ಸಮಾಜದಲ್ಲಿ ಬೇರೂರಿರುವ 'ಧಣಿ, ಸೇವಕ, ಋಣ' ಮುಂತಾದ ಭಾವನೆಗಳು ಕಾರ್ಮಿಕರಲ್ಲೂ ಇವೆ. ಇದನ್ನು ಹೋಗಲಾಡಿಸಿ, 'ಶ್ರಮಕ್ಕೆ ತಕ್ಕ ಪ್ರತಿಫಲ' ಎಂಬ ಭಾವನೆ ಮೂಡಿಸುವುದು ಸಂಘಟನೆಗೆ ಇರುವ ಮೊದಲನೇ ಸವಾಲು.

ಈ ನಿಟ್ಟಿನಲ್ಲಿ ಹಲವಾರು ಪ್ರಯತ್ನಗಳೂ ನಡೆದು, ಕಾರ್ಮಿಕರಿಗೆ ನ್ಯಾಯ ದೊರೆತು ಯಶಸ್ವಿಯಾದ ಉದಾಹರಣೆಗಳೂ ಇವೆ. ಮುಂದಿನ ಸಂಚಿಕೆಗಳಲ್ಲಿ ಅವನ್ನು ದಾಖಲಿಸಲು 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ' ಪ್ರಯತ್ನಿಸುತ್ತದೆ. ●

ಪುರುಷಾಹಂಕಾರದ ಚಲಾವಣೆ?



ತಮ್ಮ ಗಂಡಂದಿರ ಮಾತುಗಳನ್ನು ಅಧಿಕಾರಿಗಳು ಕೇಳಬೇಕೆಂದು ಪಟ್ಟು ಹಿಡಿದು 2011ರ ಜೂನ್ 27ರಂದು ಗುಲ್ಬರ್ಗ ಜಿಲ್ಲಾ ಪಂಚಾಯಿತಿಯಲ್ಲಿ ನಡೆದ ಸಾಮಾನ್ಯ ಸಭೆಯಿಂದ ಮಹಿಳಾ ಸದಸ್ಯೆಯರು ಸಭೆಯಿಂದ ಹೊರನಡೆದಂತಹ ವಿದ್ಯಮಾನ ನಡೆಯಿತು. ಈ ಸಂದರ್ಭದಲ್ಲಿ ಪಕ್ಷೇತರ ಸದಸ್ಯೆ ಶೋಭಾ ಪಾಣಿ ಅವರು ಮಾತ್ರ ಸಭೆಯಲ್ಲೇ ಉಳಿದು ತಮ್ಮ ಸ್ವತಂತ್ರ ಅಸ್ತಿತ್ವವನ್ನು ಪ್ರದರ್ಶಿಸಿದರು. ಆ ಮೂಲಕ ಎಲ್ಲಾ ಮಹಿಳೆಯರೂ ರಾಜಕೀಯ ಅಧಿಕಾರ ನಿರ್ವಹಣೆಯಲ್ಲಿ ಗಂಡಂದಿರ ಕೈಗೊಂಬೆಗಳಾಗಬೇಕಿಲ್ಲ ಎಂಬುದನ್ನೂ ಸಾಬೀತು ಪಡಿಸಿದ್ದಾರೆ.

ರಾಜಕೀಯದಲ್ಲಿ ಮಹಿಳಾ ಸಬಲೀಕರಣದ ಮಾತುಗಳ ಅರ್ಥವನ್ನೇ ಶೂನ್ಯವಾಗಿಸುವ ರೀತಿಯಲ್ಲಿ ಗುಲ್ಬರ್ಗ ಜಿಲ್ಲಾ ಪಂಚಾಯಿತಿ ಸದಸ್ಯೆಯರು ನಡೆದುಕೊಂಡಿರುವುದು ಏಕೆ? ಇದರ ಹಿಂದೆ ನಮ್ಮ ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿರುವ ಪುರುಷ ಪ್ರಾಧಾನ್ಯದ ರಾಜಕಾರಣವೇ ಕೆಲಸ ಮಾಡಿದೆ. ಮಹಿಳೆಯನ್ನು ನೆಪವಾಗಿಸಿಕೊಂಡು ತಾನೇ ಅಧಿಕಾರ ಅಥವಾ ಪುರುಷಾಹಂಕಾರ ಚಲಾಯಿಸುವ ಶತಶತಮಾನಗಳ ಮನೋಧರ್ಮಕ್ಕೆ ಇದು ಮತ್ತೊಂದು ನಿದರ್ಶನ ಅಷ್ಟೆ. ಈ ಮಹಿಳೆಯರು ಮುಗ್ಧರು, ರಾಜಕೀಯದ ಓನಾಮ ತಿಳಿಯದವರು. ಮಹಿಳೆಯರ ಹೆಸರಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿರುವ ಪುರುಷರ ಧಿಮಾಕುತನದ ಅಂಶವೇ ಈ ಪ್ರಸಂಗದಲ್ಲಿ ಎದ್ದು ಕಾಣುತ್ತದೆ. ಈ ಮಹಿಳೆಯರಿಗೆ ಸೂಕ್ತ ತರಬೇತಿ ನೀಡಬೇಕಾಗಿದ್ದ ಆಡಳಿತ ವ್ಯವಸ್ಥೆಯೂ ಇಲ್ಲಿ ನಿಷ್ಕ್ರಿಯವಾಗಿರುವುದು ಪುರುಷ ರಾಜಕಾರಣದ ಸಂಸ್ಕೃತಿಗೆ ಅನುಗುಣವಾಗಿಯೇ ಇದೆ ಎನಿಸುತ್ತದೆ. ಇದು ಒಂದು ಅತಿರೇಕವಾದರೆ, ಕಲಿಯಲು ಆಸಕ್ತಿ ಇರುವ, ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ಉತ್ಸುಕರಾಗಿರುವ ಮಹಿಳೆಯರಿಗೆ ಕೆಲಸ ಮಾಡಲು ಅವಕಾಶ ನೀಡದಂತಹ ಪರಿಸ್ಥಿತಿಗಳನ್ನು ನಿರ್ಮಾಣ ಮಾಡುವಲ್ಲೂ ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ ಪುರುಷ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಕಾರಣವಾಗಿರುವಂತಹ ಮತ್ತೊಂದು ಬಗೆಯ ಅತಿರೇಕಗಳೂ ಈ ಹಿಂದೆಲ್ಲಾ ಸಾಕಷ್ಟು ವರದಿಯಾಗಿವೆ. ಮಹಿಳೆಯರಿಗೆ ಕೆಲಸ ಮಾಡಲು ಅವಕಾಶ ನೀಡದಂತಹ, ಅವರ ಆತ್ಮವಿಶ್ವಾಸವನ್ನು ಕುಂದಿಸುವಂತಹ ನಡೆನುಡಿಗಳು ಅವು. ಒಟ್ಟಾರೆ ಮಹಿಳೆಗೆ ಅವಕಾಶಗಳನ್ನೇ ನೀಡದ ಅಥವಾ ನೀಡಿದರೂ ಸತತವಾಗಿ ಮಹಿಳೆಯ ಆತ್ಮವಿಶ್ವಾಸವನ್ನೇ ಕುಂದಿಸುವಂತಹ ನಡೆನುಡಿಗಳನ್ನು ಪ್ರದರ್ಶಿಸುವಂತಹ ಪುರುಷ ಪ್ರಧಾನ ಮನೋಧರ್ಮದ ರಾಜಕಾರಣದ ಒಳಸುಳಿಗಳನ್ನು ಅರ್ಥೈಸಿಕೊಳ್ಳುವುದು ಮುಖ್ಯ.



ಹೆಣ್ಣು
(ಸಾಧಾರ - ವಿಶ್ಲೇಷಣೆ)

'ಅನಾಮಿಕ'. ಅನು: **ಡಾ. ಬಿ.ಜಿ. ಕಲಾವತಿ**

ದೇವರು ಯಾವಾಗ ಹೆಣ್ಣನ್ನು ಸೃಷ್ಟಿ ಮಾಡುವ ಕಾರ್ಯವನ್ನು ಆರಂಭಿಸಿದನೋ ಅದು ವಾರದ ಆರನೇ ದಿನದವರೆಗೂ ನಡೆದಿತ್ತು. ಈ ಸಂದರ್ಭದಲ್ಲಿ ದೇವದೂತನು ಬಂದು ಕೇಳಿದನು.

'ಯಾಕೆ ತುಂಬಾ ಸಮಯವನ್ನು ಅದರ ಮೇಲೆ ಕಳೆಯುತ್ತಿದ್ದೀಯಾ?'

ಆಗ ದೇವರು ಉತ್ತರಿಸಿದನು:

'ಅವಳ ಆಕೃತಿಯ ವೈಶಿಷ್ಟ್ಯಗಳನ್ನು ನೀನು ನೋಡಿದ್ದೀಯಾ? ಇವಳು ಶುದ್ಧೀಕರಿಸಲ್ಪಟ್ಟಿದ್ದಾಳೆ. ಆದರೆ ಮೆತ್ತಗಾದ ಅಥವಾ ಮುದ್ದೆ ಆಗುವ ಆಕಾರದಿಂದ ಸೃಷ್ಟಿಯಾಗಿಲ್ಲ. ಸುಮಾರು 200ಕ್ಕಿಂತಲೂ ಹೆಚ್ಚು ಚಲನೆಯುಳ್ಳ, ಬದಲಾಯಿಸಬಲ್ಲ ಅಂಗಗಳನ್ನು ಹೊಂದಿದ್ದಾಳೆ. ಇವಳು ಎಲ್ಲಾ ತರಹದ ಆಹಾರವನ್ನು ತಯಾರಿಸುತ್ತಾಳೆ. ಅದೇ ಸಮಯದಲ್ಲಿ ಬೇರೆ ಬೇರೆ ಮಕ್ಕಳನ್ನು ಅಪ್ಪಿಕೊಳ್ಳುತ್ತಾಳೆ. ಅವಳು ತಬ್ಬಿಕೊಳ್ಳುವುದರಿಂದ ಜಜ್ಜಿಹೋದ ಮೊಣಕಾಲು ವಾಸಿಯಾಗುತ್ತದೆ. ಒಡೆದ ಹೃದಯ ಒಂದುಗೂಡುತ್ತದೆ. ಈ ಎಲ್ಲವನ್ನು ಅವಳು ಕೇವಲ ಎರಡೇ ಕೈಗಳಿಂದ ಮಾತ್ರ ಮಾಡುತ್ತಾಳೆ.'

ದೇವದೂತನು ಇದನ್ನು ಕೇಳಿ ತುಂಬಾ ಆಕರ್ಷಿತನಾದ!

'ಕೇವಲ ಎರಡು ಕೈಗಳಿಂದ ಸಾಧ್ಯಾನಾ? ಇದು ಆದರ್ಶ ಪ್ರತಿಮೆಯೆ? ಒಂದೇ ದಿನದಲ್ಲಿ ನಿಧಾನಿಸಿ ಯೋಚಿಸಿ ಆಮೇಲೆ ಪೂರ್ಣಗೊಳಿಸು.'

ದೇವರು ಹೇಳಿದ:

'ನನ್ನಿಂದ ಆಗದು. ನಾನು ಈ ಸೃಷ್ಟಿಕಾರ್ಯವನ್ನು ಮುಗಿಸಿ ಪೂರ್ಣಗೊಳಿಸಬೇಕು. ಇದು ನನ್ನ ಹೃದಯದ ಅಚ್ಚು ಮೆಚ್ಚಿನದು. ಇವಳಿಗೆ ಕಾಯಿಲೆ ಬಂದರೆ ತನ್ನಷ್ಟಕ್ಕೆ ತಾನೇ ವಾಸಿಮಾಡಿಕೊಳ್ಳುವಳು ಮತ್ತು ದಿನಕ್ಕೆ 18 ತಾಸು ಕೆಲಸವನ್ನು ಮಾಡುತ್ತಾಳೆ.'

ಈ ಎಲ್ಲಾ ಸಂಗತಿಗಳನ್ನು ಕೇಳಿದ ದೇವದೂತನು ಹೆಣ್ಣಿನ ಹತ್ತಿರ ಬಂದು ಅವಳನ್ನು ಮುಟ್ಟಿದನು.

'ದೇವರೇ, ಇವಳನ್ನು ತುಂಬಾ ಮೃದುವಾಗಿ ಸೃಷ್ಟಿಸಿದ್ದೀಯಲ್ಲ.' ಎಂದು ಕೇಳಿದನು. ಅದಕ್ಕೆ ದೇವರು ಹೇಳಿದನು:

'ಹೌದು ತುಂಬಾ ಮೃದು. ಆದರೆ ನಾನು ಇವಳನ್ನು ಗಟ್ಟಿಯಾಗಿಯೂ ಮಾಡಿದ್ದೇನೆ. ಇವಳ ಸಹನೆ, ತಾಳ್ಮೆ ಮತ್ತು ಜಯಿಸುವಿಕೆಯನ್ನು ನಿನಗೆ ಊಹಿಸಲು ಸಾಧ್ಯವಿಲ್ಲ.'

'ಇವಳು ಆಲೋಚಿಸುತ್ತಾಳೆಯೇ?'

ಎಂದು ದೇವದೂತನು ಕೇಳಿದನು. ದೇವರು ಉತ್ತರಿಸುತ್ತಾನೆ.

'ಇವಳು ಕೇವಲ ಆಲೋಚಿಸುವುದು ಒಂದೇ ಅಲ್ಲ. ಇವಳಿಗೆ ವಿವೇಚನೆ ಮತ್ತು ವ್ಯವಹರಿಸುವ ಶಕ್ತಿಯೂ ಇದೆ.'

ದೇವದೂತನು ಆ ಹೆಣ್ಣಿನ ಗಲ್ಲವನ್ನು ಮುಟ್ಟಿ

'ದೇವರೇ, ಇದು ಸೋರುವ ಹಾಗೆ ಕಾಣುತ್ತದೆಯಲ್ಲ! ನೀನು ಅವಳ ಮೇಲೆ ತುಂಬಾ ಒತ್ತಡವನ್ನು ಹಾಕಿದ್ದೀಯಾ?....'

'ಅದು ಅವಳ ಸೋರುವಿಕೆಯಲ್ಲ ಅದು ಕಣ್ಣೀರು'

ಎಂದು ಹೇಳಿ ದೇವದೂತನ ಮಾತನ್ನು ದೇವರು ಸರಿಪಡಿಸಿದ.

ಅದು ಏತಕ್ಕಾಗಿ?

ದೇವದೂತನು ಕೇಳಿದನು. ಅದಕ್ಕೆ ದೇವರು ಹೇಳಿದ

'ಅವಳ ದುಃಖ, ಅಳುಕು, ಪ್ರೀತಿ, ಒಂಟಿತನ, ಸ್ವಾಭಿಮಾನ, ನೋವು ಇವುಗಳನ್ನೆಲ್ಲ ಅಭಿವ್ಯಕ್ತಿಸುವ ಮಾರ್ಗವೇ ಕಣ್ಣೀರು.'

ಇದು ದೇವದೂತನ ಮೇಲೆ ತುಂಬಾ ಪ್ರಭಾವ ಬೀರಿತು.

'ದೇವರೇ ನೀನು ಅಸಾಧಾರಣ ಬುದ್ಧಿವಂತ. ನೀನು ಎಲ್ಲವನ್ನೂ ಆಲೋಚಿಸಿದ್ದೀಯಾ. ಹೆಣ್ಣು ನಿಜವಾಗಿಯೂ ಅದ್ಭುತ! ಹೆಣ್ಣು ಸತ್ಯ! ಹೆಣ್ಣಿನಶಕ್ತಿ ಪುರುಷನನ್ನು ಆಶ್ಚರ್ಯಪಡಿಸುತ್ತದೆ. ಇವಳು ತೊಂದರೆಗಳನ್ನು ಮತ್ತು ಹೆಚ್ಚಿನ ಒತ್ತಡವನ್ನು ನಿಭಾಯಿಸುತ್ತಾಳೆ. ಜೊತೆಗೆ ಇವಳಲ್ಲಿ ಸಂತೋಷ, ಪ್ರೀತಿಗಳಿವೆ. ಚೀರಾಡುವ ಸಮಯದಲ್ಲಿ ಸಹ ಇವಳು ನಗುತ್ತಾಳೆ. ಇವಳು ಅಳುವ ಸಂದರ್ಭದಲ್ಲಿಯೂ ಸಹ ಹಾಡುತ್ತಾಳೆ. ಇವಳು ಭಯ ಪಡುವ ಸಂದರ್ಭದಲ್ಲಿಯೂ ಸಹ ಸಂತೋಷಪಡುತ್ತಾಳೆ ಮತ್ತು ನಗುತ್ತಾಳೆ. ಇವಳು ಯಾವುದನ್ನು ನಂಬುತ್ತಾಳೆಯೋ ಅದರೊಡನೆ ಹೋರಾಡುತ್ತಾಳೆ. ಅನ್ಯಾಯದ ವಿರುದ್ಧ ಸಿಡಿದು ನಿಲ್ಲುತ್ತಾಳೆ. ಇವಳು ಒಳ್ಳೆಯ ಪರಿಹಾರವನ್ನು ಕಂಡುಕೊಂಡಾಗ ಯಾವುದೇ ಉತ್ತರಕ್ಕೆ 'ಇಲ್ಲ' ಎಂಬ ಶಬ್ದವನ್ನು ಹೇಳುವುದಿಲ್ಲ. ಇವಳು ತನಗೆ ಮತ್ತು ತನ್ನ ಕುಟುಂಬಕ್ಕೆ ಸಫಲತೆಯನ್ನು ಕಂಡುಕೊಳ್ಳುತ್ತಾಳೆ. ಇವಳ ಪ್ರೀತಿಗೆ ಮಿತಿಯೇ ಇಲ್ಲ. ತನ್ನ ಮಕ್ಕಳು ಜಯಶಾಲಿಗಳಾದಾಗ ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ. ತನ್ನ ಗೆಳೆಯರು ಒಳ್ಳೆಯದನ್ನು ಮಾಡಿದಾಗ ತುಂಬಾ ಸಂತೋಷ ಪಡುತ್ತಾಳೆ. ಇವಳು ಯಾವುದೇ ಹುಟ್ಟು ಅಥವಾ ಮದುವೆಯ ವಿಷಯವನ್ನು ಕೇಳಿದಾಗ ತುಂಬಾ ಆನಂದವನ್ನು ಪಡುತ್ತಾಳೆ. ಗೆಳೆಯರ, ಬಂಧು-ಬಳಗದವರ ಮರಣ ಇವಳ ಹೃದಯವನ್ನು ಛಿದ್ರಮಾಡುತ್ತದೆ. ಆದರೆ ಇವಳು ಜೀವನವನ್ನು ಪುನಃ ರೂಪಿಸಿಕೊಳ್ಳುವ ಶಕ್ತಿಯನ್ನು ಹುಡುಕುತ್ತಾಳೆ. ಒಡೆದ ಹೃದಯವನ್ನು ಗುಣಪಡಿಸುವ ಶಕ್ತಿ ಒಂದು ಚುಂಬನ ಮತ್ತು ಅಪ್ಪುಗೆಯಲ್ಲಿದೆ ಎಂದು ಇವಳಿಗೆ ಗೊತ್ತು. ಆದಾಗ್ಯೂ ಒಂದೇ ಒಂದು ತಪ್ಪು ಇವಳೊಂದಿಗೆ ಆಗುತ್ತಾ ಇದೆ. ಇವಳೇ ಮರೆತಿದ್ದಾಳೆ. ಇವಳ ಬೆಲೆಯನ್ನು, ಶ್ರೇಷ್ಠತೆಯನ್ನು, ಮಹತ್ವವನ್ನು.'



ಖಾಸಗಿ ಮತ್ತು ಸಾರ್ವಜನಿಕ ವಲಯಗಳೆರಡರ ಕಾರ್ಯಕ್ಷೇತ್ರಗಳನ್ನು ನಿಭಾಯಿಸುವಷ್ಟು ಸಾಮರ್ಥ್ಯ ಹೊಂದಿದ್ದಾಳೆ. ಇದಕ್ಕೆ ನಿದರ್ಶನವಾಗಿ ಲಂಕೇಶರ 'ಅವ್ವ'ನನ್ನು ಕಾಣಬಹುದು.

'ಪಲ್ಲ ಜೋಳವ ಎತ್ತಿ ಅಪ್ಪನ್ನ
ಮೆಚ್ಚಿಸಿ ತೋಳಬಂದಿಯ ಗೆದ್ದು
ಹೆಂಟೆಗೊಂದು ಮೊಗೆ ನೀರು ಹಿಗ್ಗಿ; ಮೆಣಸು, ಅವರೆ
ಜೋಳ, ತೊಗರಿಯ ಹೊಲವ ಕೈಯಲ್ಲಿ ಉತ್ತು,
ಹೂವಲ್ಲಿ ಹೂವಾಗಿ ಕಾಯಲ್ಲಿ ಕಾಯಾಗಿ
ಹೆಸರುಗದ್ದೆಯ ನೋಡಿಕೊಂಡು
ಯೌವನವ ಕಳೆದವಳು ಚಿಂದಿಯ ಸೀರೆ ಉಟ್ಟುಕೊಂಡು
ಬನದ ಕರಡಿಯ ಹಾಗೆ
ಚಿಕ್ಕಮಕ್ಕಳ ಹೊತ್ತು
ಗಂಡನ್ನ ಸಾಕಿದಳು ಕಾಸುಗಂಟಿಕ್ಕಿದಳು'


ಸಾಹಿತ್ಯ ಸಮಾಜದ ಕನ್ನಡಿ ಎನ್ನುತ್ತೇವೆ. ಹಾಗಾಗಿ ನಮ್ಮ ಸಮಾಜದಲ್ಲಿರುವ ಇಂತಹ ಎಷ್ಟೋ ಅವ್ವಂದಿರು ಸಾಹಿತ್ಯಕವಾಗಿ ಉಳಿಯುತ್ತಾರೆ. ಜೊತೆಗೆ ಪ್ರತಿವರ್ಗ, ಜಾತಿಯ ಹಿನ್ನೆಲೆಯಲ್ಲಿಯೂ ಹೆಣ್ಣಿನ ಬದುಕು ಭಿನ್ನವಾಗುತ್ತಾ ಹೋಗುತ್ತದೆ. ಅಂತಿಮವಾಗಿ ನಮ್ಮ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಅವಳಿಗಿರುವ ಶಕ್ತಿ, ಚೈತನ್ಯವನ್ನು ತನ್ನ ಸ್ವಂತ ಹಿತಾಸಕ್ತಿಗಳಿಗೆ ಬಳಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಗಂಡ, ಮಕ್ಕಳು ಕುಟುಂಬದ ಹಿತಾಸಕ್ತಿಗಳೇ ಅವಳಿಗೆ ಮುಖ್ಯವಾಗುತ್ತವೆ. ಇದಕ್ಕೆ ಪ್ರತಿಯಾಗಿ ಸ್ವಂತ ಹಿತಾಸಕ್ತಿಯನ್ನು ಪ್ರತಿಪಾದಿಸುವ ಹೆಣ್ಣು ಸಮಾಜದ ತಿರಸ್ಕಾರಕ್ಕೆ ಗುರಿಯಾಗುತ್ತಾಳೆ. ಹಾಗಾಗಿ ಅವಳದೇನಿದ್ದರೂ ತನಗಲ್ಲದ, ತನ್ನವರಿಗಾಗಿ ದುಡಿಯುವ ಬದುಕಾಗಿ ರೂಪಿತವಾಗುತ್ತದೆ. ಆದ್ದರಿಂದ ಅವಳಿಗೆಷ್ಟೇ ಶಕ್ತಿ ಸಾಮರ್ಥ್ಯ ಇದ್ದರೂ ಕೇವಲ ಖಾಸಗಿ ವಲಯದಲ್ಲಿ ಮಾತ್ರವಲ್ಲ; ಸಾರ್ವಜನಿಕ ವಲಯದಲ್ಲಿಯೂ ಅಗೋಚರವಾಗಿಯೇ ಉಳಿಯುತ್ತಾಳೆ. ಜೊತೆಗೆ ಹಾಗೆ ಇರಬೇಕೆಂದು ಸಹ ನಿರೀಕ್ಷಿಸಲಾಗುತ್ತದೆ. ಒಟ್ಟಾರೆ ಸಂಪ್ರದಾಯದ ಹೆಸರಿನಲ್ಲಿ, ಮೌಲ್ಯದ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಸಮಾಜದ ಅರ್ಧಭಾಗದಷ್ಟು ಬೆಳವಣಿಗೆಯನ್ನು ಹೊಸಕಿ ಹಾಕುವ ಮೂಲಕ – ಡಾ. ವಸು ಅವರ ಪರಿಭಾಷೆಯಲ್ಲಿ ಹೇಳುವುದಾದರೆ–ಸಾಂಸ್ಕೃತಿಕ ಭ್ರೂಣಹತ್ಯೆ ಆಗುತ್ತದೆ. ಆದಾಗ್ಯೂ ಈ ಎಲ್ಲವನ್ನೂ ಮೀರಿ, ಗರಿಕೆ ಹುಲ್ಲನ್ನು ಹೇಗೆ ಎಷ್ಟೇ ನಾಶ ಮಾಡಿದರೂ ಅದಕ್ಕೆ ಮತ್ತೆ ಚಿಗುರೊಡೆಯುವ ಚೈತನ್ಯವಿದೆಯೋ, ಅದೇ ರೀತಿ ಹೆಣ್ಣಿಗೆ ಅಗಾಧವಾದ ಚೈತನ್ಯವಿರುವುದು ನಿತ್ಯಸತ್ಯವಾಗಿದೆ.

(ಸೂಚನೆ : ಮೂಲಸಾಹಿತ್ಯ ಮಹಿಳಾದಿನಾಚರಣೆಯ ಅಂಗವಾಗಿ ಇ–ಮೇಲ್‌ನಲ್ಲಿ ಬಂದದ್ದಾಗಿದ್ದು, ಇದರ ಮೂಲಕರ್ತೃ ಅಥವಾ ವೆಬ್ ಮಾಹಿತಿ ದೊರೆತಿಲ್ಲದ ಕಾರಣ – 'ಅನಾಮಿಕ' ಎಂದು ಕೊಡಲಾಗಿದೆ).

ವಿಶ್ಲೇಷಣೆ

ಹೌದು ಈ ಮೇಲೆ ಹೇಳಿದಂತೆ ಇವಳೇ ಮರೆತಿದ್ದಾಳೆ. ಇವಳ ಬೆಲೆಯನ್ನು, ಶ್ರೇಷ್ಠತೆಯನ್ನು. ಯಾಕೆಂದರೆ ಪುರುಷ ಪ್ರಧಾನ ವ್ಯವಸ್ಥೆಯ ಸಾಮಾಜೀಕರಣ ಪ್ರಕ್ರಿಯೆ ಇವಳನ್ನು ಹಾಗೆ ಮಾಡಿಸಿದೆ. ಪ್ರಸಿದ್ಧ ಸ್ತ್ರೀವಾದಿ ಸಿಮೋನ್ ದ ಬೋವಾ ತನ್ನ 'ಸೆಕೆಂಡ್ ಸೆಕ್ಸ್' ಕೃತಿಯಲ್ಲಿ ಹೇಳಿದಂತೆ ಹುಟ್ಟುವ ಮಗು ಗಂಡೂ ಅಲ್ಲ, ಹೆಣ್ಣೂ ಅಲ್ಲ, ಆದರೆ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಹೆಣ್ಣು, ಗಂಡುಗಳಾಗಿ ರೂಪಿತವಾಗುತ್ತವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ದೇವರು ಸೃಷ್ಟಿಕಾರ್ಯದಲ್ಲಿ ಕಂಡುಕೊಂಡಂತೆ ಹೆಣ್ಣಿಗೆ ಅಗಾಧವಾದ ಶಕ್ತಿ, ಚೈತನ್ಯವಿದ್ದರೂ ಅವಳ ಪೂರ್ಣ ಪ್ರಮಾಣದ ಅಸ್ತಿತ್ವಕ್ಕೆ ಉಳಿಗಾಲವಿಲ್ಲ, ಯಾಕೆ? ಎನ್ನುವ ಪ್ರಶ್ನೆಗಳು ಎದುರಾಗುತ್ತವೆ. ಆ ಪ್ರಶ್ನೆಗಳೆಂದರೆ, ಅಪ್ರಾಪ್ತ ಬಾಲಕಿಯರ ಮೇಲಿನ ಅತ್ಯಾಚಾರ, ವರದಕ್ಷಿಣೆ ಸಾವು, ಹೆಣ್ಣುಮಕ್ಕಳ ಮಾರಾಟದಂತಹ ಸಂಗತಿಗಳು. ಅದರಲ್ಲೂ ಅಂಕಿ–ಅಂಶಗಳ ಪ್ರಕಾರ ಪ್ರತಿವರ್ಷ 50 ಲಕ್ಷ ಸ್ತ್ರೀ ಭ್ರೂಣಹತ್ಯೆಯಂತಹ ಘೋರ ಅಪರಾಧಗಳಾಗುತ್ತಿವೆ. ಇತ್ತೀಚಿನ 2011ರ ಲಿಂಗ ಅನುಪಾತ ನೋಡುವುದಾದರೆ ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಪ್ರತಿ ಸಾವಿರ ಪುರುಷರಿಗೆ 968 ಮಹಿಳೆಯರಿದ್ದಾರೆ. ಹಾಗಾದರೆ ಉಳಿದ 32 ಮಹಿಳೆಯರು ಎಲ್ಲಿ? ಎನ್ನುವ ಅನೇಕ ಪ್ರಶ್ನೆಗಳು ಎದುರಾಗುತ್ತವೆ. ಈ ಪ್ರಶ್ನೆಗಳಿಗೆ ತುಂಬಾ ಭಾವೋದ್ವೇಗದಿಂದ ಪ್ರತಿಕ್ರಿಯಿಸಿದರೆ ಎರಡು ಅಂಶಗಳು ಸ್ಪಷ್ಟಗೊಳ್ಳುತ್ತವೆ. ಅವುಗಳೆಂದರೆ ಈ ಎಲ್ಲಾ ಸಂಗತಿಗಳು ನಡೆಯುತ್ತಿರುವುದು ಅವಳ ಶಕ್ತಿ, ಚೈತನ್ಯಕ್ಕೆ ಕುಂದು ತರಲೋ, ಅಥವಾ ಅವಳಿಗೆ ಏನೇ ಆದರೂ ಸಹಿಸಿಕೊಳ್ಳುವ ತಾಳ್ಮೆಯ ಸಹನಾಮೂರ್ತಿಯಾಗಿದ್ದಾಳೆ ಎಂಬ ಕಾರಣಕ್ಕೊ? ಆದಾಗ್ಯೂ ಏನೇ ಆದರೂ ಈ ಮುಂಚೆ ಹೇಳಿದಂತೆ ದೇವರು ಸೃಷ್ಟಿಕಾರ್ಯದಲ್ಲಿ ಕಂಡುಕೊಂಡಂತೆ ಹೆಣ್ಣಿಗೆ ಅಗಾಧವಾದ ಶಕ್ತಿ, ಚೈತನ್ಯವಿರುವುದರಿಂದಲೇ



ಕಳೆದವರ್ಷ ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆ, ಅತ್ಯಾಚಾರ, ಲೈಂಗಿಕ ದೌರ್ಜನ್ಯ, ವರದಕ್ಷಿಣೆ, ಅಪಹರಣಕ್ಕೆ ಸಂಬಂಧಪಟ್ಟಂತೆ 2,00,000 ಪ್ರಕರಣಗಳು ದಾಖಲಾಗಿವೆ. ಹಿಂದಿನ ವರ್ಷಕ್ಕಿಂತ ಶೇ. 4 ಹೆಚ್ಚಾಗಿದೆ. 15 ವರ್ಷದಿಂದ 18 ವರ್ಷದ ಹೆಣ್ಣುಮಕ್ಕಳ ಮೇಲೆ ನಡೆದ ಹಿಂಸೆಯ ಪ್ರಮಾಣ ಹೆಚ್ಚಿರುವುದು ಆಘಾತಕಾರಿ ಅಂಶ. ಹಸುಳೆಗಳ ಮೇಲೆ ನಡೆದ ಅತ್ಯಾಚಾರದ 321 ಪ್ರಕರಣಗಳು ದಾಖಲಾಗಿದ್ದವು. ಮಹಾರಾಷ್ಟ್ರದ ಎಂ.ಎಲ್.ಎ. ಒಬ್ಬರ ಮೇಲೆ ದಾಖಲಾದ ಪ್ರಕರಣವೂ ಇಂಥದೇ. ಕೆಳಗಿನ ವರ್ಗದಿಂದ ಬರುವ ಹೆಣ್ಣುಮಕ್ಕಳು ಇಂತಹ ಅಮಾನುಷ ಹಿಂಸೆಗೆ ಹೆಚ್ಚು ಹೆಚ್ಚು ಬಲಿಪಶುಗಳಾಗುತ್ತಿದ್ದಾರೆ. 2383 ವರದಕ್ಷಿಣೆ ಸಾವುಗಳ ಪ್ರಕರಣಗಳು ದಾಖಲಾಗಿರುವುದು ಗಾಬರಿ ಹುಟ್ಟಿಸುವ ಸಂಗತಿ. ಗಮನಿಸಬೇಕಾಗಿರುವ ಅಂಶವೆಂದರೆ ಯುವತಿಯರು ಹಾಗೂ ಚಿಕ್ಕವಯಸ್ಸಿನ ಹೆಣ್ಣುಮಕ್ಕಳು ಬಲಿಯಾಗುತ್ತಿರುವುದು. ಆರುಷಿಯಂಥವರ ಸಾವಿನ ಪ್ರಕರಣಗಳು ಇನ್ನೂ ಬಗೆಹರಿಯದೆ ಸಮಸ್ಯೆಗಳಾಗಿ ನಮ್ಮ ಮುಂದಿರುವುದು ಸಮಾಜದ ಭ್ರಷ್ಟವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಮಹಿಳಾ ಕಥನ ಸಾಹಿತ್ಯ ಮತ್ತು ಎಡಪಂಥೀಯ ಆಶಯಗಳು

■ ಸಬಿತಾ ಬನ್ನಾಡಿ

ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರೇರಿಸಿದ ಸಂಗತಿಗಳು ಹಲವು. ಭಾರತವೆಂಬ ಹೊಸ ರಾಷ್ಟ್ರವನ್ನು ಕಟ್ಟುವ ಹುಮ್ಮಸ್ಸಿನೊಂದಿಗೇ ಆಧುನಿಕ ಕನ್ನಡ ಸಾಹಿತ್ಯದ ಹುಮ್ಮಸ್ಸೂ ಮೇಳವಿಸಿಕೊಂಡಿದೆ. ಹೀಗೆ ಹೊಸ 'ದೇಶ'ದ ಕಲ್ಪನೆಗೆ ರಕ್ತಮಾಂಸಗಳಾಗಿ ಒದಗಿಬಂದದ್ದು ಹತ್ತು ಹಲವು ಚಿಂತನೆಗಳು. ವಿವೇಕಾನಂದ, ಪರಮಹಂಸ, ರಾಜಾರಾಮ ಮೋಹನರಾಯ್, ಗಾಂಧಿ – ಹೀಗೆ ಮೊದಮೊದಲ ಸಾಹಿತ್ಯಗಳಲ್ಲಿ ಈ ವಿಚಾರಗಳು ಪ್ರೇರಣೆಯಾದದ್ದು ತಿಳಿದಿರುವ ಸಂಗತಿಯೇ ಆಗಿದೆ. ಅದರೊಂದಿಗೇ ವಿಜ್ಞಾನ, ಭಾರತೀಯ ಮತ್ತು ಪಾಶ್ಚಾತ್ಯ ತತ್ವಜ್ಞಾನಗಳೂ ಆಧುನಿಕ ಸಾಹಿತ್ಯವನ್ನು ಪ್ರಭಾವಿಸಿವೆ. ಮುಂದೆ ಈ ಚಿಂತನೆಗಳ ವಿಸ್ತಾರ ಇನ್ನಷ್ಟು ಹೆಚ್ಚಾಯಿತು. ಲೋಹಿಯಾ ಮತ್ತು ಅಂಬೇಡ್ಕರ್ ಚಿಂತನೆಗಳು, ಬುದ್ಧನ ಚಿಂತನೆಗಳು, ಕಾರ್ಲ್‌ಮಾರ್ಕ್ಸ್‌ನ ಚಿಂತನೆಗಳು ಕಾಲಾನಂತರದಲ್ಲಿ ಮುಂಚೂಣಿಗೆ ಬಂದದ್ದನ್ನು ಕಾಣುತ್ತೇವೆ. ವಸಾಹತು ಚಿಂತನೆ, ವಸಾಹತೋತ್ತರ ಚಿಂತನೆ, ನಿರಚನ ಸಿದ್ಧಾಂತ, ಸ್ತ್ರೀವಾದ, ಆಧುನಿಕೋತ್ತರ ಚಿಂತನೆಗಳು, ದೇಶೀವಾದ, ಸಬಾಲ್ಟ್ರನ್ ಚಿಂತನೆಗಳು ಹೀಗೆ ಹತ್ತು ಹಲವು ಆಯಾಮಗಳು ನಮ್ಮನ್ನು ಆವರಿಸಿಕೊಂಡಿವೆ.

ಕಳೆದ ಇಪ್ಪತ್ತೈದು ಮೂವತ್ತು ವರ್ಷಗಳಿಂದ ಕನ್ನಡ ಸಾಹಿತ್ಯದಲ್ಲಿ ತನ್ನ ಛಾಪನ್ನು ಒತ್ತಿದ ಸ್ತ್ರೀವಾದವು ಇಂದು ಕನ್ನಡಚಿಂತನೆಯ ರಕ್ತದಲ್ಲಿ ಬೆರೆತುಹೋಗಿದೆ. ಈ ಕಾಲಕ್ಕಿಂತ ಮುಂಚೆಯೂ ಈ ಹೆಸರಿಲ್ಲದೇ ಸ್ತ್ರೀ ನೋಟವು ಕಂಡುಬಂದಿತ್ತು. ಆದರೆ, ನಂತರದಲ್ಲಿ ಅದೊಂದು ಬದುಕನ್ನು ನೋಡುವ ದೃಷ್ಟಿಕೋನವಾಗಿ ಅಂಗೀಕೃತವಾಯಿತು. ಈ ನೋಟ ಕೇವಲ ಸ್ತ್ರೀಯರದಲ್ಲ, ಪುರುಷರೂ ಈ ನೋಟವನ್ನು ಮೈಗೂಡಿಸಿಕೊಳ್ಳಬೇಕೆಂಬ ಒತ್ತಾಯವನ್ನು ಸ್ತ್ರೀವಾದವು ಒಳಗೊಂಡಿದೆ. ಕನ್ನಡದ ಮಹಿಳೆಯರು ಬರೆದ ಸಣ್ಣಕತೆಗಳು ಗಮನಾರ್ಹ ಪ್ರಮಾಣದಲ್ಲಿ ಒಳಗೊಂಡಿರುವುದು ಸ್ತ್ರೀಕೇಂದ್ರಿತ ಸಮಸ್ಯೆಗಳು ಮತ್ತು ಚಿಂತನೆಗಳನ್ನೇ. ಈ ಮಾತನ್ನು ಇಲ್ಲಿ ಹೇಳುವುದಕ್ಕೆ ಮುಖ್ಯ ಕಾರಣ, ಮಹಿಳೆಯರು ಬರೆದ ಸಣ್ಣಕತೆಗಳಲ್ಲಿ ಎಡಪಂಥೀಯ ಆಶಯಗಳನ್ನು ಎಲ್ಲೂ ನೇರವಾಗಿ ಗುರುತಿಸಲು ಸಾಧ್ಯವಿಲ್ಲ ಎಂಬುದಕ್ಕಾಗಿ. ಎಡಪಂಥೀಯತೆ ಎಂಬುದು ಪ್ರಗತಿಪರತೆ, ಸಮಾನತೆಯೆಡೆಗಿನ ಹೋರಾಟ, ಶ್ರೇಣೀಕರಣದ ವಿರುದ್ಧದ ಧ್ವನಿ, ಬಂಡವಾಳಶಾಹಿಯ ವಿರೋಧ ಎಂಬ ಅಂಶಗಳನ್ನಷ್ಟೇ ತೆಗೆದುಕೊಂಡರೆ ಈ ಎಲ್ಲ ವಿಚಾರಗಳೂ ಒಂದಲ್ಲ ಒಂದು ರೀತಿಯಲ್ಲಿ ಅವರ ಕತೆಗಳಲ್ಲಿ ವ್ಯಕ್ತವಾಗುತ್ತವೆ. ಆದರೆ, ಎಡಪಂಥೀಯ ರಾಜಕೀಯ ಚಿಂತನೆಯ ಪ್ರಭಾವದಿಂದ ಅದನ್ನೇ ಪ್ರಸ್ತುತ ಪಡಿಸುವ ಏಕಮೇವ ಉದ್ದೇಶದಿಂದ ಯಾವುದೇ ಕತೆ ಹುಟ್ಟಿಕೊಂಡಿದ್ದು, ಒಂದು ವೇಳೆ ಹುಟ್ಟಿಕೊಂಡಿದ್ದರೂ ಯಶಸ್ವಿಯಾದದ್ದು ಗಮನಕ್ಕೆ ಬರುವುದಿಲ್ಲ. ಅಥವಾ ಎಡಪಂಥೀಯ ನಿಲುವಿನಿಂದ ಬರೆದ ಕತೆಗಳೂ ಅಷ್ಟಾಗಿ ಕಂಡುಬರುವುದಿಲ್ಲ. ಸಾಹಿತ್ಯ ಕೃತಿಗಳಿಂದ ಹೀಗೆ ಸಿದ್ಧಾಂತಗಳನ್ನು ಸೋಸಿ ತೆಗೆಯುವ ಅವಶ್ಯಕತೆಯೂ ಇಲ್ಲ. ಅಥವಾ ಸಾಹಿತ್ಯ ಕೃತಿಗಳು ಯಾವುದೇ ಚಿಂತನೆಯ ಮುಖವಾಣಿಯಾದರೆ ಆಗ ಅದು ಸಾಹಿತ್ಯ ಕೃತಿಯಾಗಿ ಉಳಿಯುವುದೂ ಇಲ್ಲ. ಈ ಎಲ್ಲಾ ಕಾರಣಗಳಿಗಾಗಿ "ಮಹಿಳಾ ಕಥನ ಸಾಹಿತ್ಯ ಮತ್ತು ಎಡಪಂಥೀಯ ಆಶಯಗಳು" ಎಂಬ ಈ ಶೀರ್ಷಿಕೆಗೆ ತನ್ನದೇ ಆದ ಮಿತಿಗಳು ಇವೆ ಎಂಬುದನ್ನು ಗಮನದಲ್ಲಿಟ್ಟುಕೊಂಡೇ ಈ ಕುರಿತು ಚಿಂತಿಸಲಾಗುವುದು. ಈ ಹಿನ್ನೆಲೆಯಲ್ಲಿ ಎಡಪಂಥೀಯ ಆಶಯಗಳು ಎಂಬುದನ್ನು ಪ್ರಗತಿಪರ ಆಶಯಗಳು ಎಂಬುದಕ್ಕೆ ಸಂವಾದಿಯಾಗಿ ಗ್ರಹಿಸಿಕೊಂಡು ಇನ್ನು ಮುಂದೆ ಚರ್ಚೆಯನ್ನು ಬೆಳೆಸಲಾಗುವುದು.

* * *

ಪ್ರಗತಿಪರ ದೃಷ್ಟಿಕೋನವು ಆರಂಭದ ಕತೆಗಾರ್ತಿಯರಿಂದಲೇ ಹಾಸುಹೊಕ್ಕಾಗಿರುವುದು ಕಂಡುಬರುತ್ತದೆ. ಸ್ತ್ರೀ ವಿದ್ಯಾಭ್ಯಾಸದ ಒತ್ತಾಯದಿಂದ ಹಿಡಿದು ಸ್ತ್ರೀಗೊಂದು, ಪುರುಷನಿಗೊಂದು ನಿಲುವು ತಳೆಯುವುದನ್ನು ಖಂಡಿಸುವ ತನಕ ಇದು ಬೇರೆ ಬೇರೆ ನೆಲೆಯಲ್ಲಿ ವ್ಯಕ್ತವಾಗಿದೆ. ಹೀಗೆ ವ್ಯಕ್ತವಾಗುವಾಗಲೂ ಕೆಲವೊಮ್ಮೆ ತಾತ್ವಿಕತೆಯ ಖಚಿತತೆಯ ಕೊರತೆಯೂ ಕಾಣಿಸಿಕೊಳ್ಳುತ್ತದೆ. ಕೊಡಗಿನ ಗೌರಮ್ಮರ ಕತೆಗಳಲ್ಲಿ ಈ ಸಮಸ್ಯೆ ಇಲ್ಲ. ಅವರಿಗೆ ಈ ಕುರಿತು ಸ್ಪಷ್ಟವಾದ ನಿಲುವುಗಳಿವೆ. ಅವರ 'ನಾಲ್ಕು ಪತ್ರಗಳು,' 'ಪುನರ್ವಿವಾಹ' ಮೊದಲಾದ ಕತೆಗಳಲ್ಲಿ ಇದನ್ನು ಗಮನಿಸಬಹುದು. 'ಪುನರ್ವಿವಾಹ' ಕತೆಯು ಅದು ಬರೆದ ಕಾಲದೃಷ್ಟಿಯಿಂದ ನೋಡಿದಾಗ ಕ್ರಾಂತಿಕಾರಕ ಎಂದೇ ಅನಿಸುತ್ತದೆ. ಬಾಲವಿಧವೆಯೊಬ್ಬಳು ವಿಧುರನೊಬ್ಬನ ಸಂಕುಚಿತ ಮನಸ್ಥಿತಿಗಳನ್ನು ಖಂಡಿಸುವ, ಧಿಕ್ಕರಿಸುವ ಮಾತುಗಳು ಗಮನಾರ್ಹ. ಇಲ್ಲಿ ಆಕೆಗೆ ತನ್ನ ಪುನರ್ವಿವಾಹವು ಹಕ್ಕಿನ ಪ್ರಶ್ನೆಯೇ ಹೊರತು ಅನುಕಂಪದ ಭಿಕ್ಷೆಯಲ್ಲ. ಈ ಧೋರಣೆಗಾಗಿ ಈ ಕತೆ ಬಹಳ ಮುಖ್ಯವೆನಿಸುತ್ತದೆ. ಹಾಗೆಯೇ ಗೌರಮ್ಮನವರ 'ಮುನ್ನಾದಿನ' ಎಂಬ ಕತೆಯೂ ಮುಖ್ಯವಾಗಿ ಗಮನಿಸಬೇಕಾದ ಕತೆ ಎನಿಸಿಕೊಳ್ಳುತ್ತದೆ. ಈ ಕತೆಯು ಜಾತಿಯ ಅಥವಾ ಧರ್ಮದ ಕುರಿತು ತಳೆಯುವ ನಿಲುವು ತುಂಬಾ ಉದಾರವಾದುದು. ಈ ಕತೆಯ ನಾಯಕ ತನ್ನ ಹೊಟ್ಟೆಪಾಡಿನ ಅವಶ್ಯಕತೆಗಾಗಿ ಕ್ರಿಶ್ಚಿಯನ್ ಆಗಬೇಕಾಗುತ್ತದೆ.


ಕಲ್ಯಾಣಮ್ಮ


ಸರಸ್ವತೀಬಾಯಿ ರಾಜವಾಡೆ

ಮುಂದೆ ತನ್ನ ಪ್ರೀತಿ ಮತ್ತು ಮದುವೆಯ ಅವಶ್ಯಕತೆಗಾಗಿ ಮುಸ್ಲಿಂ ಆಗಿ ಮತಾಂತರವಾಗಬೇಕಾಗುತ್ತದೆ. ಮನುಷ್ಯನ ಮೂಲಭೂತ ಅವಶ್ಯಕತೆಗಳ ಮುಂದೆ ಧರ್ಮ ಸೆಕೆಂಡರಿ ಎನಿಸುವುದು ಬಹಳ ಸಹಜ ಮತ್ತು ಅಲ್ಲಿ ಆತ ಯಾವ ಆತಂಕವನ್ನೂ ಅನುಭವಿಸುವುದಿಲ್ಲ ಎಂಬುದನ್ನೂ ಗಮನಿಸಬೇಕು. ಅತ್ಯಂತ ಸಹಜ ನಿರೂಪಣೆಯೊಂದಿಗೆ ಜನಸಾಮಾನ್ಯರು ಇಂತಹ ವಿಷಯಗಳನ್ನು ಹೇಗೆ ಸಹಜವಾಗಿ ಸ್ವೀಕರಿಸಿದ್ದರು ಎಂಬೆಡೆಗೆ ನಮ್ಮ ಚಿಂತನೆಯನ್ನು ಒಯ್ಯುವ ಕತೆ ಇದು.

ಇದೇ ಮಾತನ್ನು ಆ ಕಾಲದ ಎಲ್ಲ ಕತೆಗಾರ್ತಿಯರ ಕುರಿತು ಹೇಳಲಾಗುವುದಿಲ್ಲ. ವೇಶ್ಯೆಯರ ಸಮಸ್ಯೆಯ ಕುರಿತು ಅನೇಕ ಕತೆಗಳು ಅಂದಿನಿಂದಲೂ ಹುಟ್ಟಿಕೊಂಡಿವೆ. ಶ್ಯಾಮಲಾ ಬೆಳಗಾಂವಕರ ಅವರ 'ಕರುಳಿನ ಕತ್ತರಿ' ಕತೆಯನ್ನು ಈ ಹಿನ್ನೆಲೆಯಲ್ಲಿ ನೋಡಿದಾಗ, ಲೇಖಕಿ ವೇಶ್ಯೆಯೊಬ್ಬಳ ಬದುಕಿನ ದುರಂತವನ್ನು ಚಿತ್ರಿಸುತ್ತಿದ್ದರೂ, ಆ ಸಮಸ್ಯೆ ಮತ್ತು ಸಮಸ್ಯೆಯ ಪರಿಹಾರದ ಕುರಿತಾದ ಆಕೆಯ ಗ್ರಹಿಕೆಯು ಸಾಂಪ್ರದಾಯಿಕವಾಗಿರುವುದು ಕಂಡುಬರುತ್ತದೆ. ಇಲ್ಲಿನ ಜಮೀನ್ದಾರಿ ವ್ಯವಸ್ಥೆ ಕುರಿತು ಲೇಖಕಿಗೆ ಯಾವ ಆಕ್ಷೇಪ ಕಾಣುವುದಿಲ್ಲ. ಅಲ್ಲದೇ ವೇಶ್ಯೆ ಚಂದ್ರಿಯನ್ನು ಇಟ್ಟುಕೊಂಡಿರುವಾತನು ಆಕೆಯನ್ನು ತುಂಬಾ ಪ್ರೀತಿಸುತ್ತಿದ್ದ. ಆ ಪ್ರೀತಿ ಆಕೆಯ ಬದುಕಿಗೆ ನೆಮ್ಮದಿ ತಂದಿತ್ತು. ಆತನ ಪತ್ನಿ ಮಕ್ಕಳೂ ಚಂದ್ರಿಯನ್ನು ಆದರಿಸುತ್ತಿದ್ದರು. ಆದರೆ ಆಕೆಯ ತಂದೆ ತಾಯಿಯರು ಹಣದಾಸೆಗೆ ಅವಳನ್ನು ಬಲಿಕೊಟ್ಟರು ಎಂಬ ಚಿತ್ರಣ ಈ ಕತೆಯಲ್ಲಿದೆ. ಅಂದರೆ ಇಲ್ಲಿ ಆಕೆಯನ್ನು ಇಟ್ಟುಕೊಂಡಿರುವಾತನ ಪತ್ನಿಯ ಮಾನಸಿಕ ತೊಳಲಾಟವನ್ನು ನಿರ್ಲಕ್ಷಿಸಿರುವುದು, ಆತನನ್ನು ವೈಭವೀಕರಿಸಬೇಕೆಂಬ ಪ್ರಜ್ಞೆಗೆ ಒಳಗಾಗದೇ ಇರುವುದು ಮೊದಲಾದುವನ್ನು ಗಮನಿಸಿದಾಗ ಇಲ್ಲಿ ಲೇಖಕಿಗೆ ಬಂಡವಾಳಶಾಹಿ ವ್ಯವಸ್ಥೆಯ ಮೂಲ ದೋಷದ ಕುರಿತು ಅವಜ್ಞೆ ಇರುವುದು ಅಥವಾ ಆ ಕುರಿತು ಆಕ್ಷೇಪ ಇಲ್ಲದೇ ಇರುವುದನ್ನು ಕಾಣಬಹುದು.

ವೇಶ್ಯಾ ಸಮಸ್ಯೆಗೇ ಸಂಬಂಧಿಸಿದಂತೆ ಸರಸ್ವತೀ ಬಾಯಿ ರಾಜವಾಡೆಯವರ 'ಅವಳ ಉದ್ಧಾರ' ಕತೆಯನ್ನು ಪರಿಶೀಲಿಸಿದರೆ, ಅದು ವ್ಯವಸ್ಥೆಯು ಗೃಹಿಣಿಯೊಬ್ಬಳನ್ನು ಹೇಗೆ ವೇಶ್ಯೆಯಾಗಿಸುತ್ತದೆ ಎಂಬೆಡೆಗೆ ಗಮನ ಸೆಳೆಯಲು ಪ್ರಯತ್ನಿಸುತ್ತದೆ. ಬಡ ಬಾಲವಿಧವೆಯರಿಗಾಗಿ ಇರುವ ಆಶ್ರಮಗಳು ಈ ವಿಧವೆಯರನ್ನು ಶ್ರೀಮಂತರಿಗೆ ಮಾರಾಟಮಾಡುವ ಜಾಲವಾಗುವುದು, ಅದರ ಪರಿಣಾಮವಾಗಿ ಆ ವಿಧವೆಯರು ವೇಶ್ಯಾವೃತ್ತಿಗೆ ಬಲವಂತವಾಗಿ ಪದಾರ್ಪಣೆ ಮಾಡುವುದು ಮೊದಲಾದ್ದನ್ನು ವಿರೋಧಿಸುವುದು ಈ ಕತೆಯ ಮೂಲಆಶಯ. ಕತೆ ಈ ಕಡೆಗೆ ಗಮನ ಸೆಳೆಯುತ್ತದಾದರೂ ಒಟ್ಟು ವ್ಯವಸ್ಥೆಯು ಬದಲಾಗಬೇಕಾದ ರೀತಿಯ ಕಡೆಗೆ ಕತೆ ತಾನೇ ಯಾವ ನಿರ್ಣಯವನ್ನೂ ಕೈಗೊಳ್ಳದೆ ಓದುಗರಿಗೆ ಆ ಚಿಂತನೆಯನ್ನು ಬಿಟ್ಟುಬಿಡುತ್ತದೆ. ಆರ್. ಕಲ್ಯಾಣಮ್ಮನವರಿಂದ ಮೊದಲ್ಗೊಂಡು ಆರಂಭಕಾಲದ ಕತೆಗಾರ್ತಿಯರು ಹೀಗೆ ಸಾಮಾಜಿಕ ಅವ್ಯವಸ್ಥೆಯ ಕುರಿತಾಗಿ ಮತ್ತು ಅದರೊಳಗೆ ಸಿಲುಕಿ ಒದ್ದಾಡುವ ಹೆಣ್ಣುಮಕ್ಕಳ ವೇದನೆಯ ಕುರಿತಾಗಿ ಬರೆಯುವುದನ್ನು ಕಾಣಬಹುದು. ಅವುಗಳಲ್ಲಿ ಮುಖ್ಯವಾಗಿ ವಿಧವಾ ಸಮಸ್ಯೆ, ಸ್ತ್ರೀ ವಿದ್ಯಾಭ್ಯಾಸ, ವೇಶ್ಯಾ ಸಮಸ್ಯೆ, ಬಡತನ ಇತ್ಯಾದಿಗಳ ಕುರಿತು ಕತೆಗಳಿವೆ. ಈ ತಲೆಮಾರಿನ ಕತೆಗಾರ್ತಿಯರ ಮೇಲೆ ಇರುವುದು ಮುಖ್ಯವಾಗಿ ರಾಜಾರಾಮ ಮೋಹನರಾಯ್ ಮುಂತಾದವರ ಸುಧಾರಣಾ ವಾದ ಮತ್ತು ಗಾಂಧೀ ಚಿಂತನೆಗಳು. ವ್ಯಕ್ತಿಗತ ಮತ್ತು ಆದರ್ಶದ ದಾರಿಯಲ್ಲಿ ಇವರು ಪರಿಹಾರ ಅಪೇಕ್ಷಿಸುತ್ತಾರೆಯೇ ಹೊರತು, ವ್ಯವಸ್ಥೆಯ ಸಮಗ್ರ ಬದಲಾವಣೆಯೆಂಬ ಎಡಪಂಥೀಯ ದಾರಿ ಇವರದಲ್ಲ.

ಕಮ್ಯುನಿಸ್ಟ್ ಸಿದ್ಧಾಂತಗಳನ್ನು ನಂಬಿ ಬದುಕಿದವರು ಪ್ರಗತಿಶೀಲ ಲೇಖಕ ನಿರಂಜನರು. ಅನುಪಮಾ ಅವರು ನಿರಂಜನರ ಬಾಳಸಂಗಾತಿ ಆದಮೇಲೆ ನಿರಂಜನರ ಚಿಂತನೆಗಳಿಂದ ಪ್ರಭಾವಿತರಾದರೂ ತಮ್ಮದೇ ನಿಲುವುಗಳನ್ನು



ತ್ರಿವೇಣಿ



ಅನುಪಮಾ ನಿರಂಜನ

ಸ್ವತಂತ್ರವಾಗಿ ಹೊಂದಿದವರು. ಮೊದಮೊದಲು ಜನಪ್ರಿಯ ಮಾದರಿಯ ಬರಹದಲ್ಲಿ ತೊಡಗಿಕೊಂಡ ಅನುಪಮಾ ನಂತರದಲ್ಲಿ ತಮ್ಮ ಕೆಲವು ಕಾದಂಬರಿಗಳಲ್ಲಿ ಬಡತನ ಮತ್ತು ಹೆಣ್ಣನ್ನು ಖಾಸಗಿ ಸೊತ್ತಾಗಿ ನೋಡುವ ದೃಷ್ಟಿಕೋನಗಳನ್ನು ವಿಮರ್ಶೆಗೊಡ್ಡುವಂತೆ ಬರೆದುದನ್ನು ಕಾಣಬಹುದು. ಅವರ ಸಣ್ಣಕತೆ 'ಒಂದು ಘಟನೆ ಮತ್ತು ಅನಂತರ' ವಸ್ತುಸ್ಥಿತಿಯೊಂದನ್ನು ನೋಡಬೇಕಾದ ಭಿನ್ನ ನೋಟವನ್ನು ಒತ್ತಾಯಿಸುತ್ತದೆ. ಹೆಣ್ಣಿನ ದೇಹವನ್ನು ಗಂಡನ ಖಾಸಗಿ ಆಸ್ತಿಯೆಂಬಂತೆ ಭಾವಿಸುವುದರ ಜೊತೆಗೆ, ಹೆಣ್ಣಿಗಾದ ಅನ್ಯಾಯವನ್ನು ಪ್ರತಿಭಟಿಸದೆ ಪುನಃ ಅವಳಿಗೇ ಶಿಕ್ಷೆ ಕೊಡುವ ಮನೋಧರ್ಮವನ್ನು ಪ್ರಶ್ನಿಸುತ್ತದೆ. ಈ ಕತೆಯಲ್ಲಿ ನಾಯಕಿಯ ಮೇಲೆ ಅತ್ಯಾಚಾರವಾಗುತ್ತದೆ. ಆಗ ಅಲ್ಲೇ ಇದ್ದ ಪತಿ ಯಾವ ಪ್ರತಿಭಟನೆಯನ್ನೂ ಮಾಡದೆ ಪಲಾಯನ ಮಾಡುವುದಲ್ಲದೆ, ಹೆಂಡತಿ ಆತ್ಮಹತ್ಯೆ ಮಾಡಿಕೊಳ್ಳಲಿ ಎಂದು ಆಶಿಸುತ್ತಾನೆ. ಅದುವರೆಗೂ ಆಕೆ ಬಗ್ಗೆ ತನಗೆ ಅಪಾರ ಪ್ರೀತಿಯಿದೆ ಎಂದು ಹೇಳುತ್ತಿದ್ದವನು ಆ ನಂತರ ಸಂಪೂರ್ಣ ಬದಲಾಗುತ್ತಾನೆ. ನಾಯಕಿ ಇದನ್ನು ಮನದಲ್ಲೇ ಪ್ರತಿಭಟಿಸಿ ಮನೆ ತೊರೆಯುತ್ತಾಳೆ. ಹೆಣ್ಣಿನ ದೇಹದ ಕುರಿತಾದ ವ್ಯವಸ್ಥೆಯ ಸಾಂಪ್ರದಾಯಿಕ ನಿಲುವನ್ನು ನಿರಾಕರಿಸುವ ಕಾರಣಕ್ಕೆ ಈ ಕತೆ ಮುಖ್ಯವಾಗುತ್ತದೆ.

ತ್ರಿವೇಣಿಯವರು ಆಧುನಿಕ ಸೌಲಭ್ಯಗಳು ಹೆಣ್ಣಿಗೆ ವರ ಎಂದು ಭಾವಿಸಿದರೂ, ತಮ್ಮ ಕೆಲವು ಕಾದಂಬರಿಯಲ್ಲಿ ವಿದ್ಯೆ, ಉದ್ಯೋಗಗಳನ್ನು ವಿಧವೆ, ಅವಿವಾಹಿತೆಯರಿಗೆ ಪರ್ಯಾಯ ಎಂಬ ಸೀಮಿತ ನೆಲೆಯಲ್ಲಿ ಯೋಚಿಸಿದ್ದನ್ನು ಕಾಣಬಹುದು. ಹೀಗೆ ಒಂದು ಹೆಜ್ಜೆ ಮುಂದಿಟ್ಟ ಅವರು, ಹೆಣ್ಣು ಸ್ವತಂತ್ರವಾಗಿ ಮತ್ತು ಖಚಿತವಾಗಿ ನಿರ್ಧಾರ ತೆಗೆದುಕೊಳ್ಳುವುದನ್ನು ಕೂಡ ಬೆಂಬಲಿಸಿ ಕತೆ ಬರೆದಿದ್ದೂ ಇದೆ. ಅವರ 'ಕೊನೆಯ ನಿರ್ಧಾರ' ಕತೆಯನ್ನು ಈ ಹಿನ್ನೆಲೆಯಲ್ಲಿ ಪ್ರಾತಿನಿಧಿಕವಾಗಿ ಗಮನಿಸಬಹುದು. ತನ್ನನ್ನು ಅನುಮಾನಿಸುವುದನ್ನು ಧಿಕ್ಕರಿಸಿ ಮನೆ ತೊರೆದ ನಾಯಕಿ ಒಂಟಿಯಾಗಿ ಬದುಕುತ್ತಾಳೆ. ಯಾವ ಪಶ್ಚಾತ್ತಾಪವೂ ಆಕೆಗಿಲ್ಲ. ತನ್ನ ನಲವತ್ತೆರಡನೇ ವಯಸ್ಸಲ್ಲಿ ಪತಿ ಪುನಃ ಬಂದು ಕರೆದಾಗ, 'ನಾನು ನಿನ್ನನ್ನು ಕ್ಷಮಿಸಿದ್ದೇನೆ' ಎಂದಾಗ ಆ ಮಾತನ್ನೂ ಆಕೆ ನಿರಾಕರಿಸುತ್ತಾಳೆ. ಕೊನೆಗೆ ಆತನೇ 'ನನ್ನನ್ನು ಕ್ಷಮಿಸು' ಎಂದಾಗ ಕ್ಷಮಿಸುವ ಮನಸ್ಸು ಮಾಡುತ್ತಾಳಾದರೂ ಆತ ತನ್ನ ಎರಡನೆಯ ಹೆಂಡತಿ ಸತ್ತು, ಐದು ಮಕ್ಕಳನ್ನು

ನೋಡಿಕೊಳ್ಳುವ ಸಲುವಾಗಿಯೇ ಕರೆಯುತ್ತಿದ್ದಾನೆ ಮತ್ತು ಕರೆದ ತಕ್ಷಣ ತಾನು ಹೋಗಿಬಿಡುತ್ತಾಳೆ ಎಂದು ನಂಬಿದ್ದಾನೆ ಎಂಬುದು ಅರಿವಾಗುತ್ತಿದ್ದಂತೆಯೇ ಅವನ ಕರೆಯನ್ನು ತಿರಸ್ಕರಿಸುತ್ತಾಳೆ. ಹೆಣ್ಣಿನ ಸ್ವಾಭಿಮಾನವನ್ನು ಪುರಸ್ಕರಿಸುವ, ಹೆಣ್ಣಿನ ಸಾಮರ್ಥ್ಯದಲ್ಲಿ ನಂಬಿಕೆ ಇರಿಸುವ ಮತ್ತು ಗಂಡಿನ ಅಹಂಕಾರವನ್ನು ಭಂಜಿಸುವ ಸ್ಪಷ್ಟ ನಿಲುವು ಈ ಕತೆಗಿದೆ. ಗಂಡು – ಹೆಣ್ಣಿನ ಕುರಿತ ಸಾಂಪ್ರದಾಯಿಕ ಮನೋಧರ್ಮದ ಸಮಗ್ರ ಬದಲಾವಣೆಯನ್ನು ಈ ಕತೆ ನಿರೀಕ್ಷಿಸುತ್ತದೆ.


ಬಂಡವಾಳಶಾಹಿ, ಕಮ್ಯೂನಿಸಂ ಇತ್ಯಾದಿ ಪದಗಳು ಪ್ರವೇಶ ಪಡೆದ ಕತೆ ರಾಜಲಕ್ಷ್ಮಿ ಎನ್. ರಾವ್ ಅವರ 'ಇಲ್ಲ. ಇಲ್ಲ. . .' ಈ ಕತೆಯು ಕಾಂಗ್ರೆಸ್ ಕಾರ್ಯಕರ್ತನಾಗಿದ್ದು ಸ್ವಾತಂತ್ರ್ಯಾನಂತರ ಕಮ್ಯುನಿಸ್ಟ್ ಚಳವಳಿಗಾರನಾದ ಪ್ರಭಾಕರನ ಕುರಿತು ಅನುಕಂಪವನ್ನು ಹೊಂದಿದೆ. ಆತನ ಬಾಯಲ್ಲಿ ಕೆಲವು ಮಾತುಗಳನ್ನೂ ಆಡಿಸುತ್ತದೆ, "ಖಾದಿನೂಲಿನೆಳೆಯಿಂದ ಕ್ರೂರ ಬಂಡವಾಳಶಾಹಿಗಳ ಕುತ್ತಿಗೆಯನ್ನು ಕೊಯ್ಯಲಾಗದು. ಹರಿತವಾದ ಉಕ್ಕಿನ ತಂತಿ ಬೇಕೇ ಬೇಕು. ಚೂಪಾದ ಹಲ್ಲುಗಳಿರುವ ಉಕ್ಕಿನ ತಂತಿ. ಅದನ್ನು ಅವರ ಕುತ್ತಿಗೆಗಳ ಮೇಲಿಟ್ಟು ಈಕಡೆ ಒಬ್ಬರು ಆಕಡೆ ಒಬ್ಬರು ಹಿಡಿದು ನಿಧಾನವಾಗಿ ಕೊಯ್ಯಬೇಕು.. . . . . ಕೊಯ್ಯಿಸಿಕೊಳ್ಳುವವರ ಚೀತ್ಕಾರಕ್ಕೆ ನಡುಗಿ ಅವರು ಕಟ್ಟಿದ ಇಮಾರತಿಗಳೆಲ್ಲ ಒಂದೊಂದಾಗಿ ನೆಲಕ್ಕುರುಳಬೇಕು. ಆಮೇಲೆ ಸ್ವಚ್ಛವಾದ ನೆಲದಮೇಲೆ ಹೊಸ ಜನಾಂಗವೆಲ್ಲ ಸೇರಿ ಹೊಸದಾದ, ಸ್ವಚ್ಛವಾದ ಕಟ್ಟಡಗಳನ್ನು ಕಟ್ಟಬೇಕು. . . ." ಆದರೆ ಕತೆ ಈ ಕೆಲವು ಮಾತುಗಳಿಗಷ್ಟೇ ಸೀಮಿತವಾಗಿ ಅಲ್ಲಿಗೇ ನಿಲ್ಲುತ್ತದೆ. ಮೂಲತಃ ಈ ಕತೆ ಒಂದು ವಿಫಲಪ್ರೇಮ ಕತೆಯನ್ನು ಹೇಳುವೆಡೆಗೆ ಆಸಕ್ತವಾಗಿದೆ. ಈ ಕತೆಗೆ ಕಮ್ಯುನಿಸಂ ಕುರಿತು ಸಂಪೂರ್ಣ ನಂಬಿಕೆಯಾಗಲೀ, ತಿರಸ್ಕಾರವಾಗಲೀ ಕಾಣುವುದಿಲ್ಲ.


ಕನ್ನಡ ಕತೆಗಾರರಲ್ಲಿ ಅತಿ ಪ್ರಮುಖ ಹೆಸರು ವೀಣಾ ಶಾಂತೇಶ್ವರ. ಕನ್ನಡದಲ್ಲಿ ಅದುವರೆಗೂ ಮತ್ತು ಆ ನಂತರವೂ ಅವರು ಬರೆದ ರೀತಿಯ ಕತೆಗಳು ಕಾಣಿಸಿಕೊಳ್ಳುವುದಿಲ್ಲ. ಹೆಣ್ಣು–ಗಂಡಿನ ನಡುವಿನ ಸಂಬಂಧದ ಮಾನಸಿಕ ಮತ್ತು ದೈಹಿಕ ಸ್ವರೂಪಗಳನ್ನು ಅದುವರೆಗೂ ನೋಡಿದ್ದಕ್ಕಿಂತ ಭಿನ್ನವಾಗಿ ನೋಡುವ ಕ್ರಮವೊಂದು ಅವರ ಕತೆಗಳಲ್ಲಿವೆ. ಸಮಾನತೆಯ ಧ್ಯೇಯವನ್ನು ಈ ಎರಡೂ ನೆಲೆಯಲ್ಲಿ ಸಾಧಿಸಬೇಕೆಂಬ ಕಡೆಗೆ ಒತ್ತು ಅವರ ಕತೆಗಳಲ್ಲಿದೆ. ಅವರ ಕತೆಗಳಲ್ಲಿ ಸಾಮಾಜಿಕತೆಯ ಕಡೆ ಅಷ್ಟು ಗಮನ ಕಾಣಿಸುವುದಿಲ್ಲ. ಆದರೆ, ಒಟ್ಟಾರೆಯಾಗಿ ಸಾಂಪ್ರದಾಯಿಕ ವ್ಯವಸ್ಥೆಯು ನಿರ್ಮಿಸಿರುವ ಉಸಿರುಕಟ್ಟುವ ವಾತಾವರಣವನ್ನು ನಿರಾಕರಿಸುವ ದಿಟ್ಟಪ್ರಯತ್ನ ಕಾಣಿಸುತ್ತದೆ. ಅವರ 'ಬಿಡುಗಡೆ,' 'ಹೊರಟುಹೋದವನು,' 'ಕೊನೆಯ ದಾರಿ,' 'ಅವಳ ಸ್ವಾತಂತ್ರ್ಯ,' 'ತಿರುಗಿ ಹೋದಳು' ಮೊದಲಾದ ಕತೆಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. 'ಬಿಡುಗಡೆ' ಕತೆಯಂತೂ ಸಂಬಂದಗಳ ಹುಸಿತನವನ್ನು ಬತ್ತಲುಗೊಳಿಸುವ ಕತೆ. ಮತ್ತು ಗಂಡು ಹೆಣ್ಣಿನ ನಡುವಿನ ಸಂಬಂಧ ಇರಬೇಕಾದ ಬಗೆಯನ್ನು ಸೂಚಿಸುವ ಕತೆ. ಈ ರೀತಿಯ ಕತೆಗಳಲ್ಲಿ ಅತ್ಯಂತ ಪ್ರಗತಿಪರ ನಿಲುವು ತಳೆವ ವೀಣಾ ಇದರಾಚೆಗೆ ಸಾಮಾಜಿಕ ವಿಷಯಕ್ಕೆ ಹೊರಟಾಗ ಅಷ್ಟು ಯಶಸ್ಸನ್ನು ಸಾಧಿಸುವುದಿಲ್ಲ. ಅವರ ದ.ಬ್ರಾ.ಕ್ರಿಷ್ಣಪ್ಪ ಮೊದಲಾದ ಕತೆಗಳನ್ನು ಉದಾಹರಿಸಬಹುದು.


ವೈದೇಹಿಯವರ ಕತೆಗಳೂ ಹೆಣ್ಣಿನ ಬದುಕಿನ ವಿವಿಧ ಆಯಾಮಗಳನ್ನು ನಿರ್ವಚಿಸುತ್ತವೆ. ಹೆಣ್ಣಿನ ಮೇಲಿನ ಶೋಷಣೆಯ ಸೂಕ್ಷ್ಮ ನೆಲೆಗಳೊಂದಿಗೆ, ಹೆಣ್ಣಿನ ಧಾರಣ ಶಕ್ತಿಯ ಕುರಿತಾದ ನಂಬಿಕೆಯ ಅನಾವರಣವೂ ಇವರ ಕತೆಗಳ ಮುಖ್ಯ ಭಿತ್ತಿಯಾಗಿದೆ. ಕುಟುಂಬ ಮತ್ತು ಲೈಂಗಿಕ ಬದುಕಿನ ವ್ಯವಸ್ಥೆಗಳಲ್ಲಿ ಹುದುಗಿರುವ ಅಸಮಾನ ನೆಲೆಗಳನ್ನು ಪ್ರಶ್ನಿಸುವ ಇವರ ಕತೆಗಳು ಯಾವುದೇ ರಾಜಕೀಯ ಸಿದ್ಧಾಂತದಿಂದ ಪ್ರೇರಣೆ ಪಡೆದಿರುವುದು ಮೇಲ್ನೋಟಕ್ಕೆ ಕಾಣಿಸುವುದಿಲ್ಲ. ಇವರ 'ಒಂದು ಕಳ್ಳ ವೃತ್ತಾಂತ' ಕಥೆಯು ಆರ್ಥಿಕ ಅಸಮಾನತೆಯ ಕಾರಣದಿಂದ ಹುಟ್ಟಿಕೊಳ್ಳುವ ಅವಮಾನದ ನೋವನ್ನು ತೆರೆದಿಡುವುದರೊಂದಿಗೆ, ಕಳ್ಳತನವನ್ನೂ ಅಧಿಕೃತಗೊಳಿಸುವ ಸಾಮಾಜಿಕ ವ್ಯವಸ್ಥೆಯ ವ್ಯಂಗ್ಯವನ್ನು ತೆರೆದು ತೋರಬಯಸುತ್ತದೆ. 'ಅವಲಂಬಿತರು' ಕತೆ ಮನೆ ಕೆಲಸದ ಹುಡುಗಿಯ ಬವಣೆಯ ಕುರಿತಾಗಿದೆ.


ಗೀತಾ ನಾಗಭೂಷಣರು ಉತ್ತರ ಕರ್ನಾಟಕದ ಬಿಸಿಲು ಪ್ರದೇಶದ ಬಡವರ ಬವಣೆಯನ್ನು ತಮ್ಮ ಕತೆಗಳಲ್ಲಿ ಚಿತ್ರಿಸಿ ಆರ್ಥಿಕ, ಸಾಮಾಜಿಕ ಮತ್ತು ಲಿಂಗ ಅಸಮಾನತೆಗಳನ್ನು ಪ್ರತಿಭಟಿಸುವ ಧೋರಣೆಯನ್ನು ಅಭಿವ್ಯಕ್ತಿಸಿದವರು. ಎಡಪಂಥೀಯ ಆಶಯಗಳನ್ನು ಇವರೂ ನೇರವಾಗಿ ಬಿಂಬಿಸ ಹೊರಟವರಲ್ಲವಾದರೂ ಇವರ ಕತೆಗಳು ಎಡಪಂಥೀಯ ಆಶಯಗಳಿಗೆ ಹತ್ತಿರದಲ್ಲಿರುತ್ತವೆ. ಅವರ 'ಚಿತ್ತಿ ಮತ್ತು ರಿಕ್ಷಾ' ಕತೆಯನ್ನು ಈ ಹಿನ್ನೆಲೆಯಲ್ಲಿ ಪ್ರಾತಿನಿಧಿಕವಾಗಿ ಗಮನಿಸಬಹುದು. ಬಡಹುಡುಗಿ ಚಿತ್ತಿಯು ಹೊಟ್ಟೆಪಾಡಿಗಾಗಿ ಪಡುವ ಬವಣೆಗು, ತನ್ನ ಬದುಕಿನ ಕನಸನ್ನು ಅರಳಿಸಬಲ್ಲ ಸಂಗಾತಿ ದೊರೆತಾನೆಂಬ ಹಂತದಲ್ಲಿ ಅದೂ ಮಣ್ಣುಪಾಲಾಗುವ ದುರಂತಗಳನ್ನು ಚಿತ್ರಿಸುವ ಈ ಕತೆ ವರ್ಗ ತಾರತಮ್ಯದ ದಾರುಣತೆಯನ್ನು ಪ್ರತಿಬಿಂಬಿಸುತ್ತದೆ. ಒಟ್ಟಾರೆಯಾಗಿ, ಆರ್ಥಿಕ ಅಸಮಾನತೆ ಮತ್ತು ಆ ಮೂಲದ ಅವಮಾನ, ಬವಣೆಗಳಿಂದ ಬಿಡುಗಡೆ ಬಯಸುವ ಮೂಲ ಆಶಯವು ಇವರ ಕತೆಗಳದಾಗಿದೆ.

ಬಿ.ಟಿ. ಲಲಿತಾ ನಾಯಕರ ಕತೆಗಳಲ್ಲೂ ಇಂತಹ ಆಶಯಗಳನ್ನು ಗುರುತಿಸಬಹುದು. ಲಂಬಾಣಿ ಮಹಿಳೆಯರು ಸ್ವತಂತ್ರರು ಎಂಬ ಲೋಕರೂಢಿಯ ಮಾತು ಎಷ್ಟು ಮಿಥ್ಯೆ ಎಂಬುದನ್ನು ಇವರ ಕತೆಗಳು ತೆರೆದು ತೋರುತ್ತವೆ. ಇವರ ಹಬ್ಬ ಮತ್ತು ಬಲಿ ಸಂಕಲನದ ಕತೆಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಲು ಅವಕಾಶವಿದೆ. ಬಡತನದ ಬೇಗುದಿಗಳ ಜೊತೆಗೆ ಪಿತೃಪ್ರಧಾನತೆ ಬಿಳಲುಗಳು ಹೆಂಗಸರನ್ನು ಸುತ್ತಿಕೊಳ್ಳುತ್ತವೆ. 'ಸಾಕೀಬಾಯಿ' ಕತೆಯ ಸಾಕೀಬಾಯಿ


ವೀಣಾ ಶಾಂತೇಶ್ವರ


ಗೀತಾ ನಾಗಭೂಷಣ


ಬಿ.ಟಿ.ಲಲಿತಾ ನಾಯಕ


ವೈದೇಹಿ

ತನ್ನ ಗಂಡು ಮಕ್ಕಳಿಂದಲೇ ಹಿಂಸೆಗೆ ಈಡಾಗುತ್ತಾಳೆ. ಹೆಂಗಸರ ಮತ್ತು ಬಡವರ ಮೇಲಿನ ನಿರಂತರವಾಗಿ ನಡೆಯುವ ನಾನಾ ಸ್ವರೂಪದ ಹಿಂಸೆಗಳನ್ನು ಬಯಲು ಮಾಡುವುದು ಇವರ ಕತೆಗಳ ಮೂಲ ಆಶಯವಾಗಿ ಕಾಣುತ್ತದೆ.

ಸುಮಾರು ಎಂಬತ್ತರ ದಶಕದ ನಂತರ ಬೇರೆ ಬೇರೆ ವಲಯದ ಕತೆಗಾರರು ಕಂಡುಬರುತ್ತಾರೆ. ಆದರೆ, ಆಗಲೂ ಮುಖ್ಯಗಮನ ಸ್ತ್ರೀ ಶೋಷಣೆಯನ್ನು ಅನಾವರಣ ಮಾಡುವುದರ ಕಡೆಗೇ ಇರುವುದು ಲಿಂಗ ಅಸಮಾನತೆಯ ವ್ಯಾಪಕತೆಯನ್ನೇ ಹೇಳುತ್ತದೆ. ಈ ಹಂತದಲ್ಲಿ ಬಂದ ಕತೆಗಾರ್ತಿಯರಾದ ಸಾರಾ ಅಬೂಬಕರ್ ಮತ್ತು ಬಾನು ಮುಷ್ತಾಕ್ ಕನ್ನಡ ಕಥನ ಪ್ರಪಂಚಕ್ಕೆ ಹೊಸ ಲೋಕವನ್ನು ಪರಿಚಯಿಸಿದವರು. ಬಾನುಮುಷ್ತಾಕ್‌ರ 'ಹೆಜ್ಜೆ ಮೂಡಿದ ಹಾದಿ,' 'ಎದೆಯ ಹಣತೆ' ಮುಂತಾದ ಸಂಕಲನಗಳಲ್ಲಿ ಮುಸ್ಲಿಂ ಹೆಣ್ಣುಮಕ್ಕಳ ಮದುವೆ, ವಿಚ್ಛೇದನ, ಒತ್ತಡಗಳ ಕುರಿತ ವಿವರಗಳು ಬರುವುದರೊಂದಿಗೆ ಅವುಗಳ ಸೂಕ್ಷ್ಮ ವಿಶ್ಲೇಷಣೆಗಳೂ ಇರುತ್ತವೆ. ಅವರ 'ಲವ್‌ಬರ್ಡ್ಸ್' ಕತೆ ತಾಯಿಯಾಗುವ ನಿರ್ಧಾರ ಕೈಗೊಳ್ಳಲೂ ಆಗದ ಹೆಣ್ಣಿನ ಅಸಹಾಯಕತೆಗೆ ಪ್ರೀತಿಯ ಹೆಸರಿನಲ್ಲೇ ಒಳಗಾಗುವಂತೆ ಮಾಡುವ ಪರೋಕ್ಷ ಹಿಂಸೆಯನ್ನು ತೆರೆದಿಡುತ್ತದೆ. ಇದು ಮುಸ್ಲಿಂ ಮಹಿಳೆಗೆ ಸೀಮಿತ ಕತೆಯಲ್ಲ. ತಾಯ್ತನಕ್ಕೆ ಸಂಬಂಧಿಸಿದ ಎಲ್ಲ ದೈಹಿಕ ಭಾರಗಳನ್ನು ನಿಭಾಯಿಸುವ ಹೆಣ್ಣಿಗೆ ಮಗುವಿನ ಮೇಲೆ ಮಾತ್ರ ಹಕ್ಕಿಲ್ಲದ ಸ್ಥಿತಿಯನ್ನು ಈ ಕತೆ ಪ್ರಶ್ನಿಸುತ್ತದೆ.


ಸಾರಾ ಕತೆಗಳು ಕೂಡ ಮುಸ್ಲಿಂ ಹೆಣ್ಣುಮಕ್ಕಳ ಬಡತನ, ಅವಮಾನ, ಅಸಹಾಯಕತೆಗಳನ್ನು ಲೋಕಕ್ಕೆ ಪ್ರಚುರ ಪಡಿಸುತ್ತಾ ಒಟ್ಟು ವ್ಯವಸ್ಥೆಯನ್ನು ಪ್ರಶ್ನಿಸುವ ದಿಟ್ಟ ಪ್ರಯತ್ನ ಮಾಡುತ್ತದೆ. ಧರ್ಮದ ಹೆಸರಿನಲ್ಲಿ ಹೆಣ್ಣನ್ನು ನಿರ್ಬಂಧಿಸುವ ಪುರುಷ ದೃಷ್ಟಿಕೋನಗಳನ್ನು ಪ್ರತಿಭಟಿಸುವ ಸಾರಾ, ಧರ್ಮವನ್ನು ಹೇಗೆ ಅಪವ್ಯಾಖ್ಯಾನ ಮಾಡಲಾಗಿದೆ ಎಂಬೆಡೆಗೆ ಗಮನ ಸೆಳೆಯುತ್ತಾರೆ. ಅವರ 'ಪಯಣ ಮತ್ತು ಇತರ ಕತೆಗಳು' ಸಂಕಲನದಲ್ಲಿ, ಅವರ 'ಚಪ್ಪಲಿಗಳು' ಕತೆಯಲ್ಲಿ ಈ ಅನೇಕ ನೆಲೆಗಳನ್ನು ಕಾಣಬಹುದು. ಇಡೀ ವ್ಯವಸ್ಥೆಯಲ್ಲೇ ಆಗಬೇಕಾಗಿರುವ ಬದಲಾವಣೆಯ ಕಡೆಗೆ ಅವರ ಒತ್ತಾಯದ ಕಾರಣಕ್ಕೆ, ಸಾರಾ ತಮ್ಮ ಪ್ರಗತಿಪರ ನಿಲುವುಗಳನ್ನು ದಿಟ್ಟವಾಗಿ ಮಂಡಿಸುವ ಕಾರಣಕ್ಕೆ ಅವರ ಕತೆಗಳು ಚಾರಿತ್ರಿಕ ಮಹತ್ವ ಪಡೆದುಕೊಳ್ಳುತ್ತವೆ.

ನೇಮಿಚಂದ್ರರ ಕತೆಗಳು ಗಂಡು-ಹೆಣ್ಣಿನ ಪ್ರೇಮ ಸಂಬಂಧದ ಕುರಿತೇ ಹೆಚ್ಚಾಗಿವೆ. ಅವರ 'ಹೊಸ ಹುಟ್ಟು' ಕತೆ ಹೆಣ್ಣನ್ನು ತಾಯ್ತನದ ಸಾಂಪ್ರದಾಯಿಕ ಸಂಕೋಲೆಗಳೊಳಗೆ ಬಂಧಿಸಿ ಅವಳ ಸೃಜನಶೀಲ ಪ್ರತಿಭೆಯನ್ನು ಹತ್ತಿಕ್ಕುವ ಮನೋಭಾವವನ್ನು ವಿರೋಧಿಸುತ್ತದೆ. ತಾಯ್ತನದ ಭಿನ್ನ ಅರ್ಥೈಸುವಿಕೆಯನ್ನು ಬಯಸುತ್ತದೆ. ಈ ಕುರಿತಂತೆ ಸಮಾಜಕ್ಕೂ ಮತ್ತು ಸ್ವತಃ ಹೆಣ್ಣಿಗೂ ಇರುವ ಪೂರ್ವಾಗ್ರಹಗಳನ್ನು ನಿವಾರಿಸಿಕೊಳ್ಳಲು ಈ ಕತೆ ಒತ್ತಾಯಿಸುತ್ತದೆ. ಹಾಗೆಯೇ 'ಕಪ್ಪುಮೋಡ ಬೆಳ್ಳಿಯಂಚು' ಎಂಬ ಕತೆ ಗಂಡನಿಂದ ಪರಿತ್ಯಕ್ತಳಾದರೂ ಕುಗ್ಗದೆ ತನ್ನದೇ ಬದುಕು ಕಟ್ಟಿಕೊಂಡು ಯಶಸ್ಸು ಗಳಿಸುವ, ತನ್ನ ಮಗುವಿಗೆ ಮತ್ತು ತನಗಾಗಿ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಹೆಣ್ಣಿಗೆ ಸಾಧ್ಯ ಎಂಬುದನ್ನು ನಿರೂಪಿಸುತ್ತದೆ.


ಮಿತ್ರಾ ವೆಂಕಟ್ರಾಜರ 'ಹಕ್ಕಿ ಮತ್ತು ಅವಳು' ಸಂಕಲನವು ಹೆಣ್ಣಿನ ಮನೋನೆಲೆಯ ಮೂಲಕ ಮಾತಾಡುವ ಕತೆಗಳನ್ನು ಒಳಗೊಂಡಿದೆ. ಬಾಹ್ಯ ಪರಿಸರದ ದಮನವನ್ನು ಕಣ್ಣಿಗೆ ಕಾಣುವಂತೆ ವ್ಯಾಖ್ಯಾನಿಸಬಹುದು. ಆದರೆ ಕಣ್ಣಿಗೆ ಕಾಣದ ಹಿಂಸೆಯಿಂದ ಹೆಣ್ಣು ಪಾರಾಗುವುದು ಎಂತು ಎಂಬ ಚಿಂತನೆಯನ್ನೂ, ಆ ನೆಲೆಯಲ್ಲಿ ಸಮಾಜವನ್ನು ಧಿಕ್ಕರಿಸಿದರೂ ಸಮಾಜ ಬಲೆಹೆಣೆಯುವುದನ್ನೂ ಅವರ 'ಒಂದು ಒಸಗೆ ಒಯ್ಯುವುದಿತ್ತು' ಕತೆಯಲ್ಲಿ ಗಮನಿಸಬಹುದು.

ಎಂ.ಎಸ್.ವೇದಾ ಗ್ರಾಮೀಣ ಪ್ರದೇಶದ ಶೋಷಣೆಯ ಹಲವು ಮುಖಗಳನ್ನು, ಅದರ ಸೂಕ್ಷ್ಮತೆಯನ್ನು ಕತೆಯಾಗಿಸುತ್ತಾರೆ. ಇವರ ಕತೆಗಳೂ ಬಡತನದ ಅವಮಾನ, ಬವಣೆಗಳನ್ನು, ಲಿಂಗ ಅಸಮಾನತೆಗಳನ್ನು ವಿರೋಧಿಸುವ ನೆಲೆಯನ್ನು ಹೊಂದಿವೆ.

ಇತ್ತೀಚಿನ ಕತೆಗಾರ್ತಿಯರಲ್ಲಿ ಬಹಳ ಭಿನ್ನ ಲೋಕಗ್ರಹಿಕೆಯಿಂದ ಹೊರಡುವ ಕತೆಗಳನ್ನು ಕಟ್ಟಿ ಕೊಟ್ಟವರು ಎಚ್.ನಾಗವೇಣಿ. ಒಟ್ಟಾರೆ ಸಾಂಸ್ಕೃತಿಕ ಆವರಣವೊಂದರಲ್ಲಿ ರೂಪು ತಳೆಯುವ ಇವರ ಕತೆಗಳು, ಸಮುದಾಯದೊಳಗಣ ಒಳಜೀವನದ ಸೂತ್ರಗಳನ್ನು ತುಂಡರಿಸುವ ಸಮಾಜವಿರೋಧಿ ಚಿಂತನೆಯನ್ನು ಬಯಲುಗೊಳಿಸುವ, ಖಂಡಿಸುವ ಮನೋಭಾವವನ್ನು ಹೊಂದಿವೆ. 'ಮೀಯುವ ಆಟ' ಸಂಕಲನ ಈ ಕಾರಣಕ್ಕೆ ವಿಶಿಷ್ಟ. ಇಲ್ಲಿ ಬರುವ ಮುಸ್ಲಿಮರು, ದಲಿತರು, ಶೂದ್ರರು, ಮಹಿಳೆಯರನ್ನು ಪ್ರಗತಿಪರ ಚಿಂತನೆಯ ಘೋಷಣೆಯ ಎಳೆಗಳಾಗಿಸದೆಯೂ, ಕಪ್ಪು - ಬಿಳುಪು ಮಾದರಿಯಲ್ಲಿ ವರ್ಗೀಕರಿಸದೆಯೂ ಅವರಿಗಾಗುತ್ತಿರುವ ಅನ್ಯಾಯಗಳೆಡೆಗೆ ಬೆರಳು ತೋರುವ ಕೆಲಸವನ್ನು ಅವರು ಮಾಡುತ್ತಾರೆ. ಸ್ವಾತಂತ್ರ್ಯ ಚಳವಳಿಯಂತಹ ದೊಡ್ಡ ಚಳವಳಿಯ ಪ್ರವಾಹದೊಳಗೆ ಹೆಣ್ಣೊಬ್ಬಳಿಗೆ ತನ್ನ ಒಡವೆಯನ್ನು ಗಾಂಧಿಗೆ ತಾನೇ ಕೊಡುತ್ತೇನೆ ಅಥವಾ ಕೊಡುವುದಿಲ್ಲ ಎಂದು ಹೇಳುವ ನಿರ್ಧಾರ


ಎಲ್.ಸಿ. ಸುಮಿತ್ರಾ


ಸಾರಾ ಅಬೂಬಕರ್


ಬಾನುಮುಷ್ತಾಕ್


ನೇಮಿಚಂದ್ರ


ಎಂ.ಎಸ್. ವೇದಾ


ಎಚ್. ನಾಗವೇಣಿ

ಕೈಗೊಳ್ಳುವ ಸ್ವಾತಂತ್ರ್ಯವನ್ನೂ ನಿರಾಕರಿಸಲಾಗುವುದನ್ನು ಹೇಳುವ ಇವರ 'ಒಡವೆ' ಕತೆ ಅವರ ಭಿನ್ನ ಗ್ರಹಿಕೆಗೊಂದು ಉದಾಹರಣೆಯೆನ್ನಬಹುದು. ಅವರ ದಾನ, ತಾಯ್ತನ ಮುಂತಾದ ಕತೆಗಳನ್ನೂ ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಎಲ್.ಸಿ.ಸುಮಿತ್ರಾರ 'ಗುಬ್ಬಿ ಹಳ್ಳದ ಸಾಕ್ಷಿಯಲ್ಲಿ' ಸಂಕಲನದ ಇದೇ ಹೆಸರಿನ ಕತೆ ಮಲೆನಾಡನ್ನು ಪ್ರವೇಶಿಸಿರುವ ನಕ್ಸಲೈಟ್ ಸಮಸ್ಯೆಯನ್ನು ಚರ್ಚಿಸುತ್ತದೆ. ವಿವೇಚನೆ ಇಲ್ಲದ ಅಭಿವೃದ್ಧಿ ಕುರಿತು ಪ್ರಶ್ನೆಗಳು ಇವರ ಕತೆಗಳಲ್ಲಿವೆ. ಡಾ.ವಿನಯಾರ 'ಊರ ಒಳಗಣ ಬಯಲು' ಸಂಕಲನದಲ್ಲಿ ಮನುಷ್ಯ ಸಂಬಂಧದ ಭಿನ್ನ ಆಯಾಮಗಳೊಂದಿಗೆ ಕೋಮುವಾದದ ಸಮಸ್ಯೆಯ ಕುರಿತಾಗಿಯೂ ಕತೆಗಳಿವೆ. ಸಬೀಹಾ ಭೂಮಿಗೌಡರ 'ಕಡಲ ತಡಿಯ ಮನೆ' ಸಂಕಲನವೂ ಕೋಮುವಾದ ಮತ್ತು ಮುರಿದು ಹೋಗುತ್ತಿರುವ ಮಾನವೀಯ ಸಂಬಂಧದ ಕುರಿತಾದ ಚಿಂತನೆಗಳ ಸೂಕ್ಷ್ಮ ಅವಲೋಕನ ಮಾಡುತ್ತದೆ. ಸುಮಂಗಲಾ ತಮ್ಮ 'ಜುಮುರು ಮಳೆ' ಮತ್ತು 'ಕಾಲಿಟ್ಟಲ್ಲಿ ಕಾಲುದಾರಿ' ಸಂಕಲನಗಳಲ್ಲಿ ಮನುಷ್ಯ ಸಂಬಂಧದ ವಿವಿಧ ಆಯಾಮಗಳ ಅತಿ ಸೂಕ್ಷ್ಮ ನಿರೂಪಣೆಗಳನ್ನು, ಅವಲೋಕನಗಳನ್ನು ಮಾಡುತ್ತಾರೆ. ಬಿ.ಟಿ.ಜಾಹ್ನವಿ ಗಂಡು ಹೆಣ್ಣಿನ ಸಂಬಂಧದ ಮಜಲುಗಳನ್ನು ದಿಟ್ಟವಾಗಿ ತೆರೆದಿಟ್ಟವರು. ಸುನಂದಾ ಕಡಮೆಯವರ ಕತೆಗಳಲ್ಲಿ ಸಂಘರ್ಷ ಕಡಿಮೆ. ಬದುಕಿನ ಚಿಕ್ಕ ಪುಟ್ಟ ವಿವರಗಳ ನವಿರು ನಿರೂಪಣೆಯ ಕಡೆಗೆ ಅವರ ಗಮನ. ಮೇಲೆ ಉಲ್ಲೇಖಿಸಿದ ಎಲ್ಲರೂ ಬದುಕನ್ನು ಪ್ರಗತಿಪರ ದೃಷ್ಟಿಕೋನದಲ್ಲೇ ನೋಡುತ್ತಾರೆ. ಆದರೆ, ಎಡಪಂಥೀಯ ಆಶಯದ ಹಿನ್ನೆಲೆಯಲ್ಲಿ ಇವರ ಕತೆಗಳನ್ನು ಅವಲೋಕಿಸುವುದಕ್ಕೆ ಅವಕಾಶ ಇಲ್ಲ.

ಇತ್ತೀಚೆಗೆ ಕತೆ ಬರೆಯುತ್ತಿರುವ ಕೆ.ನೀಲಾ ಮೂಲತಃ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತೆ, ಹೋರಾಟಗಾರ್ತಿ. ಇವರ 'ಜ್ಯೋತಿಯೊಳಗಣ ಕಾಂತಿ' ಕಥಾ ಸಂಕಲನದಲ್ಲಿ ದಮನಿತರ ಹಲವು ಪರಿಯ ಬದುಕಿನ ಲಯಗಳನ್ನು ಕತೆಯಾಗಿಸಿದ್ದಾರೆ. ಗಮನಿಸಬೇಕಾದ ಅಂಶವೆಂದರೆ, ಕತೆಯ ಚೌಕಟ್ಟಿನಲ್ಲಿ ತಾನು ನಂಬಿದ ಸಿದ್ಧಾಂತವನ್ನು ವಾಚ್ಯವಾಗಿ ತರಬಾರದು ಎಂಬ ಎಚ್ಚರ ಇವರಿಗಿದೆ. ಇವರ ಕತೆಗಳಲ್ಲಿ ಚಳವಳಿ, ಹೋರಾಟಗಳು, ಅದರ ಅವಶ್ಯಕತೆ ಇತ್ಯಾದಿಗಳ ಬಗ್ಗೆ ನಂಬಿಕೆಗಳಿದ್ದೂ, ಅವುಗಳ ಉಲ್ಲೇಖ ಇದ್ದೂ ಅದನ್ನೇ ಮುಂಚೂಣಿಗೆ ತರುವುದಿಲ್ಲ. ಬದಲಿಗೆ ಅನ್ಯಾಯದ ವಿರುದ್ಧದ ಆಕ್ರೋಶವನ್ನು ಒಡಲಲ್ಲಿಟ್ಟುಕೊಂಡು, ಆ ಅನ್ಯಾಯಗಳೆಡೆಗೆ ಓದುಗರ ಗಮನವನ್ನು ಸೆಳೆಯುವುದರ ಕಡೆ ಅವರು ಚಿತ್ತ ಹರಿಸುತ್ತಾರೆ. ತಮ್ಮ 'ಕಿಚ್ಚಿಲ್ಲದ ಬೇಗೆ' ಕತೆಯಲ್ಲಿ ಮನೆಗಾಗಿ ಜೀವನವಿಡೀ ಮೌನವಾಗಿ ದುಡಿದ ಮತ್ತು ಆ ದುಡಿಮೆಯ ಬಗೆಗೆ ಅರಿವೇ ಇಲ್ಲದ ಕಥಾ ನಾಯಕಿಯು ಮಗಳು ಗಂಡನ ಮನೆಗೆ ಹೋಗುವುದಿಲ್ಲ ಎಂದಾಗ ಮೊದಲು ಅಂಜಿದರೂ ನಂತರ–ಈ ಮನೆಯಲ್ಲಿ ತನಗೂ, ತನ್ನ ದುಡಿಮೆಗೂ ಹಕ್ಕಿದೆ. ಈ ಹಕ್ಕನ್ನು ಚಲಾಯಿಸಿ


ಬಿ.ಟಿ. ಜಾಹ್ನವಿ


ಕೆ. ನೀಲಾ


ವಿನಯಾ ಒಕ್ಕುಂದ


ಗಂಡ, ಗಂಡುಮಕ್ಕಳ ಮಾತು ಮೀರಿ ತನ್ನ ಮಗಳನ್ನು ತನ್ನ ಮನೆಯಲ್ಲೇ ಇರಿಸಿಕೊಳ್ಳುವ ನಿರ್ಧಾರ ಮಾಡುವ ಧೈರ್ಯ ಬೆಳೆಸಿಕೊಳ್ಳುತ್ತಾಳೆ. ಹೀಗೆ ಅರಿವಿನ ಎಚ್ಚರ ಬಯಸುವ ಕತೆಗಳು ಈ ಸಂಕಲನದಲ್ಲಿವೆ.

ಇದುವರೆಗೂ ಮಾಡಲಾಗಿರುವ ವಿಶ್ಲೇಷಣೆಯು ಎಡಪಂಥೀಯ ಆಶಯದ ಹಿನ್ನೆಲೆಯಲ್ಲಿ ಮಾಡಿರುವ ಮಹಿಳಾ ಕಥನ ಸಾಹಿತ್ಯದ ಸಮೀಕ್ಷೆಯೂ ಅಲ್ಲ ಅಥವಾ ಇಲ್ಲಿ ಉಲ್ಲೇಖಿತವಾದ ಕತೆಗಳು ಈ ಹಿನ್ನೆಲೆಯ ಪ್ರಾತಿನಿಧಿಕ ಕತೆಗಳೂ ಅಲ್ಲ. ಎಡಪಂಥೀಯ ಆಶಯಗಳಲ್ಲಿ ಅತ್ಯಂತ ಮುಖ್ಯವಾದ ಆಶಯವೆಂದರೆ ಸಮಾನತೆ. ಅದು ಆರ್ಥಿಕ ಸಮಾನತೆಯೂ ಹೌದು, ಲಿಂಗ ಸಮಾನತೆಯೂ ಹೌದು. ನಮ್ಮ ಕತೆಗಾರ್ತಿಯರ ಗಮನ ಹೆಚ್ಚಾಗಿ ಹರಿದಿರುವುದು ಲಿಂಗ ಸಮಾನತೆಯ ಕಡೆಗೆ. ಯಾಕೆಂದರೆ, ಕೇವಲ ಆರ್ಥಿಕ ಸಮಾನತೆಯೊಂದರಿಂದಲೇ ಲಿಂಗ ಸಮಾನತೆ ಸಾಧ್ಯವಿಲ್ಲ ಎಂಬ ಅರಿವು ಅವರಿಗಿದೆ. ಆರ್ಥಿಕ ಅಸಮಾನತೆಯು ಒಡ್ಡುವ ಅವಮಾನ, ಅನ್ಯಾಯಗಳನ್ನು ಲಿಂಗ ಅಸಮಾನತೆಯೂ ಒಡ್ಡುತ್ತದೆ ಎಂಬೆಡೆಗೆ ಗಮನ ಸೆಳೆಯುವ ಪ್ರಯತ್ನವನ್ನು ಅವರು ನಿರಂತರವಾಗಿ ಮಾಡಿಕೊಂಡು ಬಂದಿದ್ದಾರೆ.

ಈಗಾಗಲೇ ಹೇಳಿದಂತೆ ನಮ್ಮ ಕತೆಗಾರ್ತಿಯರು ಎಡಪಂಥೀಯ ಆಶಯವನ್ನು ಅಭಿವ್ಯಕ್ತಿ ಪಡಿಸುವ ಮೂಲ ಉದ್ದೇಶವನ್ನು ಇಟ್ಟುಕೊಂಡಿಲ್ಲ. ಸ್ತ್ರೀವಾದವೇ ಅವರನ್ನು ಹೆಚ್ಚು ಪ್ರಭಾವಿಸಿರುವುದು. 'ಸ್ತ್ರೀವಾದ' ಎಂಬುದು ಒಂದೇ ಅಲ್ಲ, ಸ್ತ್ರೀವಾದದಲ್ಲೂ ಮತ್ತೆ ಭಿನ್ನ ಭಿನ್ನ ಚಿಂತನಾಧಾರೆಗಳಿವೆ. ಮಾರ್ಕ್ಸ್ ವಾದವನ್ನು ಒಪ್ಪುವ ಸ್ತ್ರೀವಾದವೂ ಇದೆ. ಹಾಗೆಯೇ ಯಾವುದೇ ಸಿದ್ಧಾಂತಕ್ಕೆ ತಳುಕು ಹಾಕಿಕೊಳ್ಳಲು ಬಯಸದ ಸ್ತ್ರೀವಾದವೂ ಇದೆ. ಇದುವರೆಗಿನ ಎಲ್ಲಾ ಸಿದ್ಧಾಂತಗಳು ಪುರುಷ ನೆಲೆಯಿಂದ ಹೊರಟಿರುವ ಕಾರಣ ಈ ಎಲ್ಲಾ ಸಿದ್ಧಾಂತಗಳನ್ನು ಅನುಮಾನದಿಂದ ನೋಡಬೇಕೆಂದು ಸ್ತ್ರೀವಾದಿಗಳು ಹೇಳುತ್ತಾರೆ. ಕನ್ನಡದ ಕತೆಗಾರ್ತಿಯರು ಈ ಯಾವುದೇ ಸ್ತ್ರೀವಾದವನ್ನು ತಮ್ಮ ಕತೆಗಳಲ್ಲಿ ನೇರವಾಗಿ ಅನ್ವಯಿಸಲು ಹೊರಟವರಲ್ಲ. ಅವರಲ್ಲಿರುವುದು ಎಚ್ಚೆತ್ತ ಸ್ತ್ರೀಪ್ರಜ್ಞೆ, ತಮ್ಮ ಜೀವನಾನುಭವಗಳ ಮೂಲಕ ಸಮಗ್ರ ಮಾನವ ಪ್ರಜ್ಞೆಯನ್ನು ಮಂಡಿಸುವುದೇ ಅವರ ಮೊದಲ ಆದ್ಯತೆಯಾಗಿರುವುದನ್ನು ಅವರ ಕತೆಗಳು ದಾಖಲಿಸುತ್ತವೆ.

(ಬಿಜಾಪುರ ಮಹಿಳಾ ವಿ.ವಿ ಯ 'ಮಹಿಳಾ ಸಾಹಿತ್ಯ ಚರಿತ್ರೆ' ಯೋಜನೆಯ ಅಂಗವಾಗಿ ಬರೆದ ಲೇಖನ)

ಈ ಬಾರಿಯ ಜನಗಣತಿ ಮಹಿಳೆಯರಿಗೆ ಸಂಬಂಧಪಟ್ಟಂತೆ ಹಲವಾರು ಅಂಶಗಳನ್ನು ಬೆಳಕಿಗೆ ತಂದಿದೆ. ಲಿಂಗಾನುಪಾತದಲ್ಲಿ ಉಡುಪಿಯಲ್ಲಿ 1000 ಪುರುಷರಿಗೆ 1093 ಸ್ತ್ರೀಯರಿದ್ದಾರೆ. ಆದರೆ ಬೆಂಗಳೂರಿನಲ್ಲಿ ಒಂದು 1000 ಪುರುಷರಿಗೆ 908 ಸ್ತ್ರೀಯರಿದ್ದಾರೆ. ಜನಗಣತಿಯ ಫಾರಂನಲ್ಲಿ ಸ್ತ್ರೀ–ಪುರುಷ ಲಿಂಗವಲ್ಲದೆ, ಇತರರು ಕಾಲಂನಲ್ಲಿ ಲೈಂಗಿಕ ಕಾರ್ಯಕರ್ತೆಯರು ಎಂದು ಹೊಸದಾಗಿ ಸೇರಿಸಿರುವುದು ಸ್ವಾಗತಾರ್ಹವಾದ ಅಂಶ. ಲೈಂಗಿಕ ಕಾರ್ಯಕರ್ತೆಯರ ಸಂಘಟಿತ ಹೋರಾಟದ ಫಲವಾಗಿ ಸಮಾಜದಲ್ಲಿ ಅವರಿಗೆ ಈ ಮನ್ನಣೆ ದೊರೆತಿದೆ.



ಬೆಟ್ಟಿ ಮೆಹಮುದಿ ಮೂಲತಃ ಅಮೆರಿಕಾದ ಮಹಿಳೆ. 1984 ಆಸುಪಾಸಿನ ವಿಶ್ವವಿದ್ಯಮಾನಗಳಲ್ಲಿ ಪ್ರಮುಖ ವಾದದ್ದು – ಇಸ್ಲಾಮಿಕ್ ದೇಶಗಳ ನಡುವಣ ಸಮರ. ಒಂದೆಡೆ ಅಮೆರಿಕಾದ ಬೆಂಬಲಿತ ದೇಶ ಒಂದು, ಇನ್ನೊಂದು ಅಮೆರಿಕಾ ಸಾಮ್ರಾಜ್ಯಶಾಹಿಯ ವಿರುದ್ ಹೋರಾಟಕ್ಕಿಳಿದ ದೇಶ. ಎರಡೂ ದೇಶಗಳೂ ಇಸ್ಲಾಮಿಕ್ ಧರ್ಮೀಯ ದೇಶಗಳೇ. ಇಂತಹ ಸೂಕ್ಷ್ಮ ಸನ್ನಿವೇಶದಲ್ಲಿ 'ಬೆಟ್ಟಿ' ಇರಾನ್‌ಗೆ ಬರುತ್ತಾಳೆ. ಅಲ್ಲಿಂದ ಮುಂದೆ ನಡೆಯುವುದೇ, ಬೆಟ್ಟಿ ಮೆಹಮದಿಯ ಕಾದಂಬರಿ 'ನಾಟ್ ವಿಥೌಟ್ ಮೈ ಡಾಟರ್'ನ ಕೇಂದ್ರವಸ್ತು. ತನ್ನ ನಿಜ ಬದುಕಿನ ಘಟನಾವಳಿಗಳೇ ಕಾದಂಬರಿಯ ಹೂರಣ.

ಈ ಕಾದಂಬರಿಯ ಬರವಣಿಗೆಯ ಪ್ರಕ್ರಿಯೆಯಲ್ಲಿ 'ವಿಲಿಯಂ ಹಾಪರ್' ಎಂಬ ಲೇಖಕರು ಬೆಟ್ಟಿಗೆ ಸಹಾಯ ನೀಡಿದ್ದಾರೆ. ಮೂಲ ಲೇಖಕಿ 'ಬೆಟ್ಟಿ'ಯಾದರೂ, ಸಹ ಲೇಖಕರಾಗಿ 'ವಿಲಿಯಂ ಹಾಫರ್' ಕೂಡ ಉಲ್ಲೇಖಾರ್ಹರು.

ಪ್ರಕಟಿತಗೊಂಡು ಎರಡು ದಶಕಗಳೇ ಕಳೆದಿವೆ. ಆದರೆ, ಇತ್ತೀಚೆಗೆ ಬೆಟ್ಟಿ ಮೆಹಮುದಿಯ ಈ ಪುಸ್ತಕ ಸಾಕಷ್ಟು ಚರ್ಚೆಯನ್ನು ಹುಟ್ಟುಹಾಕಿದೆ.

ಬೆಟ್ಟಿ ಮೆಹಮುದಿ ಪ್ರಸ್ತುತದಲ್ಲಿ ಅಮೆರಿಕಾದ ಮಿಚಿಗನ್‌ನಲ್ಲಿ, ಮೊದಲ ಮದುವೆಯಿಂದ ಪಡೆದ ಇಬ್ಬರು ಗಂಡುಮಕ್ಕಳು ಹಾಗೂ ಎರಡನೆಯ ವಿವಾಹ ಸಂಬಂಧದಲ್ಲಿ ಪಡೆದ ಒಂದು ಹೆಣ್ಣು ಮಗುವಿನೊಂದಿಗೆ ಜೀವಿಸುತ್ತಿದ್ದಾರೆ.

ನನ್ನ ಮಗಳಿಲ್ಲದೆ...

■ ಸೇತುಮಾಧವ ಎಂ.ವಿ.

ಅಮೇರಿಕಾದ ಡೆಟ್ರಾಯಿಟ್‌ನಲ್ಲಿ ಖಾಸಗಿ ಉದ್ಯೋಗಿ ಬೆಟ್ಟಿ, ಎರಡು ಮಕ್ಕಳ ತಾಯಿ. ವೈವಾಹಿಕ ಸಂಬಂಧದಲ್ಲಿ ಬಿರುಕು ಬಿಟ್ಟಿದ್ದರಿಂದ ವಿಚ್ಛೇದನ ಅನಿವಾರ್ಯ ವಾಯಿತು. ಬೆಟ್ಟಿಯ ತಂದೆ, ತಾಯಿ ಕ್ರೈಸ್ತ ಪಂಥೀಯರು. ಡೆಟ್ರಾಯಿಟ್‌ನಲ್ಲಿ ಸಯ್ಯದ್ ಬೋಜೋರ್ಗ್ ಮೆಹಮುದಿ ಎಂಬ ಇರಾನಿ ಮೂಲದ ವೈದ್ಯ ಅಲ್ಲಿಯೇ ನೆಲೆಸಿ ವೈದ್ಯ ವೃತ್ತಿಯನ್ನು ಗಂಭೀರವಾಗಿ ಪರಿಗಣಿಸಿದ್ದಾನೆ. ಸರಿ ಸುಮಾರು 1984–85ರ ಕಾಲ. ಇರಾನ್ ಮತ್ತು ಇರಾಕ್ ನಡುವೆ ನಿಲ್ಲದ ಭಯಂಕರ ಯುದ್ಧ. ಇರಾಕ್‌ಗೆ ಅಮೇರಿಕಾ ಬೆಂಬಲ.. ಇರಾನ್‌ನಲ್ಲಿ ಆಯತುಲ್ಲ ಖೊಮೇನಿಯ ನೇತೃತ್ವದಲ್ಲಿ ಮೂಲಭೂತವಾದಿಗಳು ಕರೆ ನೀಡಿ, ಯಾವುದೇ ಅಪರಿಚಿತರು ಕಾಣಿಸಿದರೂ, ಅವರು ಮೂಲಭೂತವಾದಿಗಳ ಕೋಪಕ್ಕೆ ಬಲಿಯಾಗಲೇ ಬೇಕಿತ್ತು. ಇರಾನಿನ ಆಗಿನ ಪರಿಸ್ಥಿತಿ ತುರ್ತುಪರಿಸ್ಥಿತಿಗಿಂತಲೂ ಹೇಯ. ಯಾರೂ ಎಲ್ಲೂ ನಂಬಿಕೆಯಿಂದ ನಡೆದಾಡುವುದು ಸಾಧ್ಯವೇ ಇರಲಿಲ್ಲ. ಮೊದಲೇ ಧಾರ್ಮಿಕ ಬಿಗಿ ಚೌಕಟ್ಟಿನೊಳಗಿನ ಬದುಕು, ಮಹಿಳೆ ಮನೆಯಿಂದ ಅಥವಾ ಕಿಟಕಿಯಿಂದ ಹೊರ ಇಣುಕಿದರೂ 'ಬುರುಖಾ' ಇರಲೇಬೇಕು. ರಸ್ತೆಯ ತುಂಬಾ ಸರ್ಪ ಕಣ್ಗಾವಲು. ಇದರೊಂದಿಗೆ ಖೊಮೇನಿಯ ರಹಸ್ಯ ಕಾವಲು ಪಡೆ 'ಪಸ್ದಾರ್' ಎಂದು. ಇವರ ಮುಖ್ಯ ಕೆಲಸವೇ ಎಲ್ಲರನ್ನೂ, ಎಲ್ಲವನ್ನೂ ತಪಾಸಣೆ ನಡೆಸುವುದು. ತಮ್ಮ 'ಶಿಯೇಟ್' ಇಸ್ಲಾಂನ ವಿರುದ್ಧ ಕರಪತ್ರಗಳಿವೆಯೇ ಅಥವಾ ಕ್ರಾಂತಿ ವಿರೋಧಿ ಸಾಹಿತ್ಯ, ಮಾದಕ ವಸ್ತುಗಳು ಸಿಗಬಹುದೇ? ಯಾವ ತಾರತಮ್ಯವಿಲ್ಲದೆ ಕಳ್ಳರಿಗೆ ಅಧಿಕಾರ ನೀಡಿದಂತಾಗಿ, ಅವರ ಕ್ರೌರ್ಯದ (ಪಸ್ದಾರ್) ಬಗ್ಗೆ ಸಾಕಷ್ಟು ಕತೆಗಳು ಜನಜನಿತವಾಗಿದ್ದವು. ನಿತ್ಯ ಜೀವನಕ್ಕೆ ಅವಶ್ಯವಿರುವ ಸಾಮಾನು, ಸರಂಜಾಮುಗಳನ್ನು ಕೊಂಡು ಕೊಳ್ಳುವುದು ಕಷ್ಟಕರ. ಜಗತ್ತಿನೆಲ್ಲೆಡೆ ವಿದ್ಯಾಭ್ಯಾಸಕ್ಕೆಂದೋ ಉದ್ಯೋಗಕ್ಕೆಂದೋ ಹೊರ ಹೋಗಿದ್ದ ಇರಾನಿ ಯುವಕರಿಗೆ 'ಖೊಮೀನಿ' ಹಿಂಬರುವಂತೆ, ದೇಶಕ್ಕಾಗಿ ಸರ್ವತ್ಯಾಗ ಮಾಡುವಂತೆ ಆದೇಶವಿತ್ತಿದ್ದ. ಇದರಿಂದಾಗಿ ಬಹಳಷ್ಟು ಯುವಕರು ತಮ್ಮ ದೇಶವನ್ನು ಸಂರಕ್ಷಿಸಲು ಹಿಂದಿರುಗಿದ್ದರು. ತಾವಿದ್ದ ಸ್ಥಳದಲ್ಲಿಯೇ ಅಮೆರಿಕಾ ಸಾಮ್ರಾಜ್ಯಶಾಹಿಯ ವಿರುದ್ಧ ದನಿಯೆತ್ತಿದ್ದರು. ಇದು ಬೆಂಗಳೂರಿನಲ್ಲಿಯೂ ನಡೆದಿದ್ದು ಬಹಳಷ್ಟು ಮಂದಿಗೆ ನೆನಪಿರಬಹುದು.

ಇಂತಹ ಸನ್ನಿವೇಶದಲ್ಲಿ ಡೆಟ್ರಾಯಿಟ್‌ನ ಬೆಟ್ಟಿ ಹಾಗೂ ಇರಾನಿ ಮೂಲದ ಮೆಹಮುದಿಯ ನಡುವೆ ಪ್ರೇಮಾಂಕುರವಾಗುತ್ತದೆ. ಅಮೆರಿಕೆಯ ಬೆಟ್ಟಿಗೆ, ಇರಾನಿಯ ವೈದ್ಯ ಮೆಹಮುದಿಯ ಸಾತ್ತ್ವಿಕ ನಡವಳಿಕೆ, ವಿಚಾರಶೀಲತೆ ಮೆಚ್ಚುಗೆಯಾಗುತ್ತದೆ. ಡೇಟಿಂಗ್‌ನಿಂದ ಶುರುವಾಗುವ ದೈಹಿಕಸಂಬಂಧ 'ಮೆಹತಾಬ್' ಎಂಬ ಹೆಣ್ಣುಮಗುವಿಗೆ ಜನ್ಮ ನೀಡುವಲ್ಲಿ ಫಲಪ್ರದವಾಗುತ್ತದೆ. ಡೆಟ್ರಾಯಿಟ್‌ನ ಮುಕ್ತ ಹಾಗೂ ಶಾಂತ ಬದುಕಿಗೆ ಒಗ್ಗಿ ಹೋಗಿರುವ ಅವರುಗಳು 'ಮೆಹತಾಬ್'ಳನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಾರೆ.

ಈ ಮಧ್ಯೆ 'ಮೆಹಮುದಿ'ಗೆ ತನ್ನ ದೇಶದಲ್ಲಾಗುತ್ತಿರುವ ರಣರಂಗದ ಪ್ರತಿಯೊಂದು ಮಾಹಿತಿಯೂ ದೊರೆಯುತ್ತಿರುತ್ತದೆ. ಆದರೆ, ಆ ವೈದ್ಯ ತನ್ನ ದೇಶನಿಷ್ಠೆಯ ಬಗ್ಗೆ ಎಲ್ಲೂ ಚಕಾರವೆತ್ತುವುದಿಲ್ಲ. ತನ್ನ ಧಾರ್ಮಿಕ ಬದುಕನ್ನು ಎಲ್ಲೂ ಗುಲ್ಲು ಮಾಡುವುದಿಲ್ಲ.

1984 ಆಗಸ್ಟ್ 3 ಬೆಟ್ಟಿಯ ಬದುಕಿನಲ್ಲಿ ಮರೆಯಲಾಗದ ದಿನ. ಯಾಕೆಂದರೆ, ತಾನು ಪ್ರೀತಿಸಿದ ಪ್ರಿಯಕರ, ತನ್ನ ಮಗಳೊಂದಿಗೆ ಕೇವಲ ಹದಿನೈದು ದಿನದ ರಜೆಯ ಮೇಲೆ ತನ್ನ ದೇಶಕ್ಕೆ ಕರೆದುಕೊಂಡು ಹೋಗುತ್ತಿದ್ದಾನೆ. ಆದರೂ ಏನೋ ದುಗುಡ, ಕಾತರ, ತಳಮಳ ಇರಾನಿನ ನೆಲ ಸ್ಪರ್ಶವಾಗುವ ಸಮಯ ಹತ್ತಿರ ಬಂದಾಗ, ಮೆಹಮುದಿ ತನ್ನ ಪ್ರಿಯತಮೆಯಿಂದ "ಈ ದೇಶದಲ್ಲಿ ನಿನ್ನ ಪಾಸ್‌ಪೋರ್ಟ್

ನನ್ನ ಬಳಿ ಇರುವುದು ಕ್ಷೇಮವೆಂಬ ನೆಪವೊಡ್ಡಿ ಅನುಮಾನ ಬಾರದಂತೆ ಅದನ್ನು ಇಸಿದುಕೊಂಡು ತನ್ನ ಪ್ಯಾಂಟಿನ ಕಿಸೆಗಿಡುತ್ತಾನೆ. ವಿಮಾನ ಇರಾನಿನ ನೆಲ ಸ್ಪರ್ಶಿಸುತ್ತದೆ. ಅತ್ಯಂತ ಯಾತನಾಮಯ 'ಚೆಕ್ಕಿಂಗ್' ನಂತರ ಹೊರಬರುತ್ತಾರೆ. ಈ ವೇಳೆಗೆ ನಾಲ್ಕು ವರ್ಷದ ಪೋರಿ 'ಮೆಹತಾಬ್' ಸುಸ್ತಾಗಿಬಿಟ್ಟಿರುತ್ತಾಳೆ. ವಿಮಾನ ನಿಲ್ದಾಣದಿಂದ 'ಮೆಹಮುದಿ' ಅತ್ತೆಯ ಮನೆಗೆ ಹೋಗುತ್ತಾರೆ. ಸಂಪೂರ್ಣ ಹೊಸ ಜಗತ್ತೇ ತೆರೆದುಕೊಳ್ಳುತ್ತದೆ, ಬೆಟ್ಟಿಗೆ. ಮನೆಯನ್ನಿಟ್ಟುಕೊಂಡಿರುವ ರೀತಿ, ಮನೆಯವರು ನಡೆದುಕೊಳ್ಳುವ ರೀತಿ ಎಲ್ಲವೂ ಅಚ್ಚರಿ, ಹೊಸದು. ಎಲ್ಲವೂ 15 ದಿವಸದ ಮಟ್ಟಿಗೆ ತಾನೇ ಎಂದು ತಾನೇ ಸಮಜಾಯಿಷಿ ಮಾಡಿಕೊಂಡು, ಮಗಳ ಆರೈಕೆಯಲ್ಲಿ ತೊಡಗುತ್ತಾಳೆ. ಹೊಸ ವಾತಾವರಣದಲ್ಲಿ ಎಲ್ಲವೂ ಹೊಸತು ಎಂಬ ಕುತೂಹಲ ಒಂದೆಡೆಯಾದರೆ, ತನ್ನದಲ್ಲದ ಸಂಸ್ಕೃತಿಯನ್ನು ಹೇರಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿಗೆ ಸಿಲುಕುತ್ತಾಳೆ. ಆ ಬಿಸಿಲ ಬೇಗೆಯಲ್ಲಿ ಎಲ್ಲಾದರೂ ಹೊರ ಹೋಗಬೇಕೆಂದರೂ 'ಬುರ್ಖಾ' ಇರಲೇಬೇಕು. ಇವಳಿಗೂ ಅಲ್ಲಿಯ ಭಾಷೆ ಗೊತ್ತಿಲ್ಲ. ಇವಳ ನಡೆ, ನುಡಿ ಅನುಮಾನಕ್ಕೆ ದಾರಿಯೆಂಬುದು ಗಂಡನ ಅಭಿಪ್ರಾಯ.


ದಿನಗಳೆದಂತೆ ಅವಳಿಗೆ ತನ್ನ ಗಂಡನ ಸಂಪ್ರದಾಯವಾದಿ ಮುಖ ಪದರು ಪದರಾಗಿ ತೆರೆದುಕೊಳ್ಳುತ್ತದೆ.

ಸಯ್ಯದ್ ಬೋಜೋರ್ಗ್ ಮೆಹಮುದಿ ತನ್ನ ಅತ್ತೆಯ ಮನೆಯಲ್ಲಿ ವಾಸ್ತವ್ಯ ಹೂಡುತ್ತಾನೆ. ಸಾಂಪ್ರದಾಯಿಕವಾಗಿ ಎಲ್ಲರೂ ಒಟ್ಟಿಗೇ ಕೂತು ಪಾತ್ರೆಗೇ ಕೈ ಹಾಕಿ ತಿನ್ನುವುದು 'ಬೆಟ್ಟಿ'ಗೆ ಇರುಸು ಮುರುಸಾಗುತ್ತದೆ. ಅಲ್ಲಿಯ ವಾತಾವರಣಕ್ಕೆ ದಿನಕ್ಕೆರಡು ಬಾರಿಯಾದರೂ ಸ್ನಾನ ಮಾಡಬೇಕು. ಮುಕ್ತ ಬದುಕನ್ನು ಅನುಭವಿಸಿರುವ 'ಬೆಟ್ಟಿ' ಶಾಪಿಂಗ್ ಮಾತಿರಲಿ, ಹೊರಗೆ ಕಾಲಿಡುವುದೂ ಕಷ್ಟ. ವಿದೇಶಿ ನೆಲದಿಂದ ತಮ್ಮ ಸಂಬಂಧಿ ಹಿಂದಿರುಗಿ ಬಂದಿರುವುದರಿಂದ, ದೂರ ಹತ್ತಿರ ಸಂಬಂಧದವರು ಬಂದು ಮೇಜುವಾನಿಯೂ ನಡೆಯುತ್ತದೆ. ಎಲ್ಲವೂ ನೀರಿನ ಮೇಲಿನ ಗುಳ್ಳೆಯೆಂಬುದು ಬೆಟ್ಟಿಗೆ ನುಂಗಲಾರದ ತುತ್ತಾಗುತ್ತದೆ. ಎರಡುಬಾರಿ ಸ್ನಾನ ಮಾಡುವುದೇ ಎಂಬ ಕುಹಕ, ಏನಾದರೂ ಕೆಲಸ ಹುಡುಕಿ ಮಾಡಿದರೂ ಕಟಕಿ. ಏತನ್ಮಧ್ಯೆ ಮೆಹತಾಬ್ ಆರೋಗ್ಯ ತಪ್ಪುತ್ತಾಳೆ. ಕೆಲವೇ ದಿನವಲ್ಲವೇ? ಎಂದು ಎಷ್ಟು ಸಂಭಾಳಿಸಿ ಕೊಂಡರೂ, ಪ್ರತಿಕ್ಷಣದ ಬದುಕು ಬಿಗಡಾಯಿಸುತ್ತಲೇ ಹೋಗುತ್ತದೆ. ಕೇವಲ ಹದಿನೈದು ದಿನವೆಂಬುದು ಮರೀಚಿಕೆಯಾಗುತ್ತದೆ. ದಿನಗಳು ಓಡುತ್ತಿವೆ. ಆದರೆ, ಗಂಡನಿಂದ ತನ್ನ ಸ್ವದೇಶಕ್ಕೆ ಹಿಂದಿರುಗುವ ಮಾತೇ ಇಲ್ಲ. ಉರಿವ ಒಡಲಾಗ್ನಿಗೆ ತುಪ್ಪ ಸುರಿದಂತೆ ಮಗಳನ್ನು (ಮೆಹತಾಬ್) ಅಲ್ಲಿಯೇ ಶಾಲೆಗೆ ಸೇರಿಸಲಾಗುತ್ತದೆ. ಮೆಹತಾಬ್ ಅಲ್ಲಿನ ವಾತಾವರಣದಿಂದ ಅಸ್ವಸ್ಥಳಾಗುತ್ತಾಳೆ. ಕ್ರಮೇಣ ಗಂಡನ ಸಂಚು ಅರಿವಾಗುತ್ತಾ ಹೋಗುತ್ತದೆ. 'ಬೆಟ್ಟಿ'ಗೆ ಅನ್ಯಮಾರ್ಗವೇ ಇಲ್ಲ. ಹೇಗಾದರೂ ಮಾಡಿ, ತಪ್ಪಿಸಿಕೊಂಡು ಸ್ವದೇಶಕ್ಕೆ ಮರಳುವ ಪ್ರಯತ್ನಗಳು ನಡೆಯುತ್ತವೆ. ಈ ಮಧ್ಯೆ ಮೆಹಮುದಿ ಅತ್ತೆಯ ಮನೆಯಿಂದ ಸಂಬಂಧಿಕರ ಮನೆಗೆ ಸ್ಥಳಾಂತರಿಸುತ್ತಾನೆ. ಅದು ಬೆಟ್ಟಿಯ ಗೃಹಬಂಧನ. ಎಲ್ಲಿಯವರೆಗೆ ಅಂದರೆ, ಬೆಟ್ಟಿಯನ್ನು ಮನೆಯಲ್ಲಿ ಕೂಡಿಹಾಕಿ, ಬೀಗದ ಕೈಯನ್ನು ತನ್ನಲ್ಲಿರಿಸಿಕೊಳ್ಳುತ್ತಾನೆ. ಹೀಗೆ, ಪುಸ್ತಕ ಓದುತ್ತಾ ಹೋದಂತೆ ಧರ್ಮದ ಹೆಸರಿನಲ್ಲಿ ಗಂಡಸಿನ ಅಮಾನುಷ ಕ್ರೌರ್ಯ ಬಯಲಾಗುತ್ತಾ ಹೋಗುತ್ತದೆ. ಬೆಟ್ಟಿ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಾಳೆ. ಗಂಡನಿಗೆ ತನ್ನ ದುಗುಡ ಅರ್ಥಮಾಡಿಸಲೆಂದು ಲೈಂಗಿಕ ಕ್ರಿಯೆಗೂ ಪ್ರೇರಿಸುತ್ತಾಳೆ. ಆದರೆ, ಮೆಹಮುದಿಯ ಧರ್ಮಾಂಧತೆ ಎಲ್ಲವನ್ನೂ ಮರೆಮಾಚಿ ಬಿಡುತ್ತದೆ. ಅಲ್ಲಿಯ ಟಿ.ವಿ.ಗಳು ಕೇವಲ ಒಂದು ಗಂಟೆ ಮಾತ್ರ ಜಾಗತಿಕ ಸುದ್ದಿಯನ್ನು ಬಿತ್ತರಿಸುತ್ತವೆ. ಅದರಲ್ಲಿ ಹೆಚ್ಚಾಗಿ ಅಮೆರಿಕನ್ನರ ಅತಿಕ್ರಮಣ ಹಾಗೂ ಅಮೆರಿಕಾ ಯೋಧರ ಹತ್ಯೆಯೇ ಮುಖ್ಯ ವಸ್ತುವಾಗಿರುತ್ತದೆ. ಹೀಗಾಗಿ ಸ್ವದೇಶದಲ್ಲಿರುವ ತನ್ನ ತಂದೆ, ತಾಯಿಗೆ, ಮಕ್ಕಳಿಗೆ ಯಾವ ರೀತಿಯಲ್ಲೂ ಸಂಪರ್ಕವೇ ಸಾಧ್ಯ ವಾಗುವುದಿಲ್ಲ. ಜೊತೆಗೆ ದೂರವಾಣಿ ಸಂಪರ್ಕವೂ ಕಡಿತ. ಇಂತಹ ಉಸಿರುಗಟ್ಟಿಸುವ ವಾತಾವರಣದಿಂದ ಮುಕ್ತಳಾಗಲೇ ಬೇಕೆನ್ನುವ ಬೆಟ್ಟಿಯು ತವಕ ಅಧಿಕಗೊಂಡು ಮಗಳೊಂದಿಗೆ ಸುರಕ್ಷಿತವಾಗಿ ತನ್ನ ನೆಲಕ್ಕೆ ಹೋಗಬೇಕೆಂದು ತೀರ್ಮಾನಿಸಿ, ಮಗಳು ಮುಗ್ಧ ಮಾತುಗಳಲ್ಲಿ "ಅಮ್ಮಾ, ಯಾವಾಗ?" ಎಂಬುದು ಮನದಾಳದಲ್ಲಿ ಪ್ರತಿಧ್ವನಿಸಿ, 'ಬೆಟ್ಟಿ' ಟರ್ಕಿಯ ಮೂಲಕ ಸ್ವದೇಶಕ್ಕೆ ಮರಳುವ ತೀರ್ಮಾನ ಕೈಗೊಳ್ಳುತ್ತಾಳೆ. ಈ ಪ್ರಯಾಣದ ಉದ್ದಕ್ಕೂ ಒಬ್ಬ ತಾಯಿ, ತಾನು ತನ್ನ ಮಗಳನ್ನು ಪ್ರಯಾಣದ ಕಠಿಣತೆಯನ್ನು ಎದುರಿಸಿ ಕಾಪಾಡಿ ಕೊಂಡುದನ್ನು ಮನೋಜ್ಞವಾಗಿ ಚಿತ್ರಿಸುತ್ತಾಳೆ. ಅಂತಿಮವಾಗಿ, ತನ್ನ ಸ್ವದೇಶಕ್ಕೆ ಮಗಳೊಂದಿಗೆ ಬಂದು, ಮರಣ ಶಯ್ಯೆಯಲ್ಲಿರುವ ಅಪ್ಪ, ಮಗಳ ಯೋಚನೆಯಲ್ಲೇ ಇರುವ ತಾಯಿ, ತಮ್ಮ ತಾಯಿಯನ್ನು ಕಾಣಲು ಕಾತರಿಸಿರುವ ತನ್ನ ಮಕ್ಕಳೊಂದಿಗೆ ಕೂಡುತ್ತಾಳೆ. ಇಲ್ಲಿ ಮುಖ್ಯವಾಗಿರುವುದು ಧರ್ಮ, ಅದರ ಹಿಂದಿನ ಕ್ರೌರ್ಯ, ಪುರುಷತೆಯ ಕರಾಳ ಮುಖಗಳು ಹಾಗೂ ಸ್ವಾತಂತ್ರ್ಯಕ್ಕಾಗಿ ಹಂಬಲಿಸುವ ಮನಸ್ಸು. ಇವು ಎಂತಹವರನ್ನೂ ಕಲಕಿಬಿಡುತ್ತವೆ. ಒಬ್ಬ ವ್ಯಕ್ತಿಯ ದಿಟ್ಟ, ಪ್ರಾಮಾಣಿಕ ಹೋರಾಟದ ವಸ್ತುವಾದರೂ, ತನ್ಮೂಲಕ ಅನಾವರಣ ಗೊಳ್ಳುವ ಸಮಾಜದ ವಿಭಿನ್ನ ಮುಖಗಳನ್ನು ಪ್ರಭಾವಶಾಲಿ ನಿರೂಪಣೆಯಿಂದ ಸಾದೃಶಗೊಳಿಸುವ 'ಬೆಟ್ಟಿ'ಗೆ ಧನ್ಯವಾದಗಳು ಹಾಗೂ ಶುಭಹಾರೈಕೆಗಳು.

ಮಾನಸ ವೇದಿಕೆಯ ಆಹ್ವಾನ

ಚರ್ಚೆ, ವಿಚಾರ ವಿನಿಮಯ, ಆತ್ಮೀಯರ ಭೇಟಿ ಮಾನಸ ಪತ್ರಿಕೆಯ ಬಗ್ಗೆ ಸಲಹೆ ಸೂಚನೆ, ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಯೋಜನೆ, ಕೊಂಚ ಹರಟೆ, ಕೊಂಚ ಕ್ಯಾಂಟೀನ್‌ಕಾಫಿಗಾಗಿ ಪ್ರತಿ ತಿಂಗಳೂ ಎರಡನೇ ಬುಧವಾರ ಸಂಜೆ 5.30 ಗಂಟೆಗೆ ಆಸಕ್ತರೆಲ್ಲರೂ ಸೇರೋಣ. ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದ ಮೆಟ್ಟಿಲುಗಳಿಗೂ ಮಾನಸ ವೇದಿಕೆಗೂ ಒಂದು ಅವಿನಾಭಾವ ಸಂಬಂಧವಿದೆ. ಮಹಿಳಾ ಧ್ವನಿಗಾಗಿ ಸಾರ್ವಜನಿಕ ಸ್ಥಳವನ್ನು ಉಪಯೋಗಿಸುವುದರ ಹಿಂದೆ ಸ್ತ್ರೀವಾದದ ಪರಿಕಲ್ಪನೆಯೂ ಇದೆ. ಈ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ಜುಲೈ 13, ಬುಧವಾರ ಸಂಜೆ ನೀವೂ ಬನ್ನಿ. ನಿಮ್ಮ ಗೆಳತಿಯರನ್ನೂ ಕರೆತನ್ನಿ.


–ಮಾನಸ ವೇದಿಕೆ



ಬಿದಿರಿನ ಬುಟ್ಟಿ

■ ಊರ್ಮಿಳಾ ಪವಾರ್

ಅನು: ಮಂಗ್ಳೂರ ವಿಜಯ



(ಹಿಂದಿನ ಸಂಚಿಕೆಯಿಂದ)

ರತ್ನಾಗಿರಿಗೆ ಬಂದು ಮನೆ ಒಳಗೆ ಕಾಲಿಡುತ್ತಿದ್ದಂತೆ 'ನಾವು ಅಂದುಕೊಂಡ ಹಾಗೇ ಆಗಿದೆ, ಅಮ್ಮ. ನಾನು ಹೋದಾಗ ಇವಳು ಪಾತ್ರೆ ತೊಳೆಯುತ್ತಿದ್ದಳು' ಎಂದು ಶಾಹು ದೂರು ಹೇಳಿದ. ಅಮ್ಮ ಹಾರಿ ಬಿದ್ದಳು. 'ಬೇಡ ಬೇಡವೆಂದರೂ ಅವನನ್ನೇ ಗಂಡ ಎಂದು ಹಟ ಹಿಡಿದೆಯಲ್ಲ, ಅನುಭವಿಸು' ಎಂದು ತಿವಿದಳು. 'ನನಗೆ ಆ ಮನೆಯಲ್ಲಿ ಏನೇನೂ ತೊಂದರೆಯಿಲ್ಲ; ಗಂಡ, ಅತ್ತೆ-ಮಾವ, ಅಕ್ಕಂದಿರು, ಭಾವಂದಿರು, ಮೈದುನರು ಎಲ್ಲರೂ ಚೆನ್ನಾಗಿದ್ದಾರೆ' ಎಂದು ನಾನು ಎಷ್ಟೇ ಹೇಳಿದರೂ, ಅಮ್ಮ-ಅಕ್ಕ-ಅಣ್ಣ ನಂಬಲಿಲ್ಲ.

ಒಂದೆರಡು ದಿನಗಳ ಬಳಿಕ, ರತ್ನಾಗಿರಿಯ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರು ನೋಂದಾಯಿಸಿದೆ. ಹರಿಶ್ಚಂದ್ರನಿಗೆ ವಿಷಯ ತಿಳಿಸಿದೆ. ಹಿಂದೆ ರತ್ನಾಗಿರಿಯಲ್ಲಿದ್ದಾಗ ಅವನು ಹಿಡಿದಿದ್ದ ರೂಂ ಇನ್ನೂ ಖಾಲಿಯಿತ್ತು. ಅದನ್ನೇ ಮತ್ತೆ ಬಾಡಿಗೆಗೆ ಪಡೆದೆವು. ಹರಿಶ್ಚಂದ್ರ ಬಂದು, ಅವಶ್ಯವಿದ್ದ ಪಾತ್ರೆ ಸಾಮಾನುಗಳನ್ನು ಖರೀದಿಸಿ ಕೊಟ್ಟ. ಅಲ್ಲಿಂದ ದಿನ ನಿತ್ಯ ಕೆಲಸಕ್ಕೆ ಚಿಪಳೂಣಗೆ ಹೋಗಿ ಬರಲಾರಂಭಿಸಿದ.

ಆ ಮನೆಯ ಕುಣಬಿ ಜಾತಿಯ ಹೆಂಗಸೊಬ್ಬಳದು. ಅವರೂ ಪಕ್ಕದಲ್ಲೇ ವಾಸಿಸುತ್ತಿದ್ದರು. ಅವರಿವರ ಮನೆಗೆಲಸ ಮಾಡಿ ಕಷ್ಟಪಟ್ಟು ಮಕ್ಕಳನ್ನು ಬೆಳೆಸುತ್ತಿದ್ದರು. ಹಾಗಾಗಿ, ಆ ಹೆಂಗಸಿನ ಬಗ್ಗೆ ನನಗೆ ವಿಶೇಷ ಅಭಿಮಾನ.

ಹರಿಶ್ಚಂದ್ರ ಆಫೀಸಿಗೆ ಹೋದ ನಂತರ ಮನೆ ಮಾಲಿಕರ ಹಿರಿ ಮಗಳು ನನ್ನ ಬಳಿ ಬರುತ್ತಿದ್ದಳು. ಅದು-ಇದು ಹರಟೆ ಹೊಡೆಯುತ್ತಿದ್ದಳು. 'ಏನು ಓದಿದ್ದೀಯಾ'? ಎಂದಾಗ, ಐದನೇ ತರಗತಿಗೆ ನಿಲ್ಲಿಸಿದರು ಎಂದಳು. 'ಮನೆಯಲ್ಲೇ ಹೇಳಿಕೊಡುತ್ತೇನೆ ಕಲಿ' ಎಂದಾಗಲೂ ಅವಳಿಗೆ ಆಸಕ್ತಿ ಬರಲಿಲ್ಲ.

ಹೀಗೇ ಒಂದು ದಿನ ಆ ಹುಡುಗಿ ಎಂದಿನಂತೆ ಬಂದಳು. 'ತಿಂಡಿ ತಿಂದೆಯಾ?' ಎಂದು ಕೇಳಿದರೆ ಬೇಸರದಿಂದ 'ಇಲ್ಲ' ಎಂದಳು. ತಾಯಿ-ಮಗಳು ಜಗಳವಾಡಿರಬೇಕು ಎಂದು ತಿಳಿದೆ. ಇದು ಸಾಧಾರಣವಾಗಿ ಆಗಾಗ ನಡೆಯುತ್ತಿತ್ತು. ತಟ್ಟೆಯಲ್ಲಿ ತಿಂಡಿ ನೀಡಿ, 'ತಿನ್ನು, ತಾಯಿ ಏನೇ ಹೇಳಿದರೂ ಒಳ್ಳೆಯದಕ್ಕೇ' ಎಂದು ಬುದ್ಧಿ ಹೇಳಿದೆ. ಹರಿಶ್ಚಂದ್ರ ಬೇಡ ಎಂದಿದ್ದರಿಂದ ಅಂದು ಚಹಾ ಮಾಡಿರಲಿಲ್ಲ. ಅವಳು ತಿಂಡಿ ಮುಗಿಸುವಷ್ಟರಲ್ಲಿ ನನಗೂ ಚಹಾ ಕುಡಿಯ ಬೇಕೆನಿಸಿದ್ದರಿಂದ ನೀರು ಕಾಯಿಸಲು ಇಟ್ಟೆ.

'ಇವೊತ್ತು ಮಧ್ಯಾಹ್ನ ಸಂಬಂಧಿಕರ ಮನೆಯಲ್ಲಿ ಮದುವೆ ಇದೆ; ನಾವೆಲ್ಲ ಹೋಗ್ತಾ ಇದ್ದೀವಿ, ನನಗೊಂದು ಒಳ್ಳೇ ಸೀರೆ ಕೊಡಿ ಅತ್ತಿಗೆ, ಉಟ್ಕೊಂಡು ಹೋಗ್ತೀನಿ' ಎಂದ ಹುಡುಗಿಗೆ ನನ್ನ ನಾಲ್ಕಾರು ಸೀರೆಗಳನ್ನು ತೋರಿಸಿದೆ. ಒಂದನ್ನು ಆರಿಸಿಕೊಂಡಳು. 'ಕೊಳೆ ಮಾಡಬೇಡ; ಸಂಜೆಯೇ ತಂದು ಕೊಡು' ಎಂದು ಹೇಳಿದ್ದಕ್ಕೆ ಹೂಂ ಎಂದಳು. ನನ್ನ ಬಿಳಿ ಸೀರೆಯನ್ನು ನೋಡಿ 'ಇದೆಂಥ ಸೀರೆ ಅತ್ತಿಗೆ, ಬಿಳಿ ಸೀರೆಯನ್ನು ಮದುವೆ ಬಟ್ಟೆ ಜೊತೆ ಇಟ್ಟಿದ್ದೀರಾ?' ಎಂದು ಆಶ್ಚರ್ಯದಿಂದ ಕೇಳಿದಳು. ನಾನು ಹಿಂದೆ ಮುಂದೆ ನೋಡದೆ 'ಅದೂ ನನ್ನ ಮದುವೆ ಸೀರೆ, ನಮ್ಮಲ್ಲಿ ಮದುವೆ ದಿನ ಬಿಳಿ ಸೀರೆಯನ್ನೇ ಉಡೋದು' ಎಂದುಬಿಟ್ಟೆ.

ಅವಳ ಮುಖ ತಕ್ಷಣ ಬಿಳಿಚಿಕೊಂಡಿತು. ಒಂದಾದರೂ ಮಾತಾಡಲಿಲ್ಲ. ಈಗ ಈ ಸೀರೆ ಬೇಡ ಎಂದು ಕೈಯಲ್ಲಿನ ಸೀರೆಯನ್ನು ಕೆಳಗೆ ಹಾಕಿ, ಎದ್ದು ನಿಂತಳು. ನಾನು ಇನ್ನೇನಾದರೂ ಮಾತನಾಡುವ ಮುಂಚೆ ಹೊರಗೆ ಹಾರಿದಳು. 'ಏಯ್ ಶಕೂ, ಏನಾಯ್ತೆ? ಚಹಾ ಕುಡಿದು ಹೋಗು' ಎಂದಿದ್ದೂ ಕೇಳಿಸದಷ್ಟು ದೂರ ಹೋಗಿದ್ದಳು.

ಅವಳ ವರ್ತನೆ ಚೂರೂ ಅರ್ಥವಾಗಲಿಲ್ಲ. ಸಂಜೆ ಆ ಕುಣಬಿ ಹೆಂಗಸು ತನ್ನ ಮನೆಯ ಮುಂದೆಯೇ ನಿಂತು, 'ನೀವು ಮನೆ ಬಿಡಿರಿ; ನಮಗೆ ಆಗಿರುವ ಮೈಲಿಗೆ ಸಾಕು. ಬಾಡಿಗೆಗೆ ಬರುವಾಗ ಜಾತಿ ಹೇಳೋದಿಕ್ಕೇನು ರೋಗ?' ಎಂದು ಏನೇನೋ ಹೇಳಿದಳು.

ಆಕೆ ಹೇಳುತ್ತಿರುವುದು ನನಗೇ ಎಂದು ನಾಲ್ಕಾರು ಕ್ಷಣಗಳ ನಂತರ ಗೊತ್ತಾಯಿತು. ಹೀಗೆ ಬೀದಿಯಲ್ಲಿ ನಮ್ಮ ಜಾತಿ ಹೆಸರು ಹೇಳಿ ಅವಮಾನ ಮಾಡಿದ ಪ್ರಸಂಗ ನನಗೆ ಜೀವನದಲ್ಲಿ ಮೊದಲನೆಯದಾಗಿತ್ತು. ಮನಸ್ಸು ವಿಪರೀತ ಕುಗ್ಗಿ ಹೋಯಿತು. ಮನೆ ಒಳಗೆ ಬಂದು ದುಃಖದಿಂದ ಹಾಸಿಗೆಯಲ್ಲಿ ಬಿದ್ದುಕೊಂಡೆ.

ಸ್ವಲ್ಪ ಹೊತ್ತಿನಲ್ಲಿ ಹರಿಶ್ಚಂದ್ರ ಬಂದ. ಕಣ್ಣೀರು ತುಂಬಿಕೊಂಡು ಅವನ ಎದೆಯಲ್ಲಿ ಮುಖವಿಟ್ಟು ನಿಟ್ಟುಸಿರು ಬಿಟ್ಟೆ. ಒಂದೂ ತಿಳಿಯದ ಗಂಡ ಗಾಬರಿಯಾದ. 'ಏನಾಯ್ತು ಏನಾಯ್ತು?' ಎಂದು ಕೇಳಿದ. ದುಃಖ ಕಡಿಮೆಯಾದ ಬಳಿಕ ವಿಷಯ ತಿಳಿಸಿದೆ.

ಹರಿಶ್ಚಂದ್ರ ಹಗುರ ನಗು ಬೀರಿದ. 'ಇದೆಲ್ಲ ಸಾಮಾನ್ಯ. ಬಾಡಿಗೆ ಕೊಡುವಾಗ ಅವರೂ ಕೇಳಲಿಲ್ಲ. ಇರಲಿ ಬಿಡು. ಇದಕ್ಕೆಲ್ಲಾ ದುಃಖಪಡಬಾರದು. ಈ ಸಮಾಜದಲ್ಲಿ ಇದೆಲ್ಲಾ ನಡಿತಾನೇ ಬಂದಿದೆ. ಮುಂದೆಯೂ ನಡೆಯುವುದೇ ಇದು' ಎಂದು ಸಮಾಧಾನ ಹೇಳಿದ. ಆ ರಾತ್ರಿಯಿಡೀ ನನಗೆ ನಿದ್ರೆ ಬರಲಿಲ್ಲ, ನಮ್ಮ ಊರು, ಸಂಬಂಧಿಕರು, ಕಾಲೊನಿ ಹೊರತಾಗಿ ನನಗೆ ಹೊರಗಿನ ಪ್ರಪಂಚದ ಪರಿಚಯವೇ ಇರಲಿಲ್ಲ. ಹಾಗಾಗಿ ಆ ಪ್ರಸಂಗ ನನಗೆ ತೀವ್ರ ವೇದನೆಯನ್ನು ಉಂಟು ಮಾಡಿತ್ತು.

* * *

ನನ್ನ ಒತ್ತಾಯದಿಂದಾಗಿ ಹರಿಶ್ಚಂದ್ರ ಬೇರೆ ಕಡೆ ಮನೆ ಹುಡುಕಿದ. ನಗರ ಸಭೆಯ ಸದಸ್ಯೆಯಾಗಿದ್ದವರೊಬ್ಬರ ಮನೆ ಬಾಡಿಗೆಗೆ ಸಿಕ್ಕಿತು. ಅವರು ಒಪ್ಪಿದ ಬಳಿಕ ನಾನೇ 'ನಮ್ಮ ಜಾತಿ ಹೇಳಿಬಿಡಿ' ಎಂದು ಹರಿಶ್ಚಂದ್ರನನ್ನು ಒತ್ತಾಯಿಸಿದೆ. 'ಅವರು ಕೇಳಿದಾಗ ಹೇಳೋಣ; ಜಾತಿ ಮುಚ್ಚಿಡಲು ನಾನೂ ಇಷ್ಟಪಡುವುದಿಲ್ಲ; ಜಾತಿ ಹೇಳಿದರೆ ಮನೆ ಸಿಗೋ ಚಾನ್ಸ್ ಕಮ್ಮಿಯಾಗುತ್ತೆ' ಎಂದ ಹರಿಶ್ಚಂದ್ರ. ಆದರೂ ನನಗೆ ಒಳಗೊಳಗೇ ಅಳುಕು. ಹಾಗಾಗಿ, ಮನೆ ಯಜಮಾನಿಯ ಎದುರಿಗೆ ಸುಳಿಯಲೂ ಇಷ್ಟಪಡಲಿಲ್ಲ. ನಗರ ಸಭೆ ಸದಸ್ಯೆಯಾಗಿ ಆಕೆಯ ಅನುಭವ ತಿಳಿಯಲು ನನಗೆ ಆಸಕ್ತಿಯಿತ್ತು. ಕೆಲಸ ಸಿಗುವವರೆಗೆ ಯಾವುದಾದರೂ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗುವ ಮನಸ್ಸು ಇತ್ತು. ಆದರೆ, ಯಾರಾದರೂ ಜಾತಿ ಕೇಳಿಬಿಡುವ ಭಯದಿಂದಾಗಿ, ನಾನು ಮೂರೂಹೊತ್ತು ಮನೆಯೊಳಗೇ ಉಳಿದೆ.

ಆದರೂ ಜಾತಿ ಭೂತ ನಮ್ಮನ್ನು ಬಿಡಲಿಲ್ಲ. ಊರಿಂದ ಬಂದ ನೆಂಟರೊಬ್ಬರು ನೆಪವಾಗಿ ಮನೆ ಮಾಲೀಕರಿಗೆ ನಮ್ಮ ಜಾತಿ ಗೊತ್ತಾಗಿ ಹೋಯಿತು. ಆ ಮನೆಗೆ ಹೋಗಿ ಆರು ತಿಂಗಳೂ ಕಳೆದಿರಲಿಲ್ಲ. ನೆಂಟರು ಹಿಂತಿರುಗಿದ ಮರುದಿನ ನಗರ ಸಭಾ ಸದಸ್ಯೆ ನನಗೆ ಹೇಳಿ ಕಳಿಸಿದಳು. ಆಕೆಯ ಮನೆಗೆಲಸದಾಕೆ ಬಂದು ಕರೆದಾಗ ಹೃದಯ ಹೊಡೆದುಕೊಂಡಿತು. ಜಾತಿಯ ಗುಟ್ಟು ರಟ್ಟಾಗುತ್ತದೆ ಎಂದು ಮನಸ್ಸು ಹೆದರಿಸಿದರೆ, ಆಕೆ ಬೇರಾವುದೋ ವಿಚಾರದಲ್ಲೂ ಹೇಳಿ ಕಳಿಸಿರಬಹುದು ಎಂದು ಇನ್ನೊಂದು ಮನಸ್ಸು ಸಮಾಧಾನ ಹೇಳುತ್ತಿತ್ತು.

ಅಳುಕಿನಿಂದಲೇ ಹೋದೆ. ಪಕ್ಕದ ಮನೆಯಾಗಿದ್ದರೂ ಒಳ್ಳೇ ಸೀರೆ ಉಟ್ಟು, ಚೆನ್ನಾಗಿ ತಲೆ ಬಾಚಿಕೊಂಡು, ಕನ್ನಡಿಯಲ್ಲಿ ಮುಖ ನೋಡಿಕೊಂಡು ಹೋಗಿದ್ದೆ. ಮನೆಗೆಲಸದವಳಾಗಲಿ, ಮನೆಯೊಡತಿಯಾಗಲಿ ಕಾಣಲಿಲ್ಲವಾದ್ದರಿಂದ ನಾನು ಅವರ ಮನೆ ಒಳಗೆ ಕಾಲಿಡಬೇಕೋ ಬೇಡವೋ ಎಂಬುದೇ ತೋಚದಾಯಿತು. ಹೊರಗೆ ಒಂದೆರಡು ನಿಮಿಷ ನಿಂತೆ.

ಅಷ್ಟರಲ್ಲಿ ಒಳಗಿನಿಂದ ಬಂದ ಮನೆಯೊಡತಿ, ಬಾಗಿಲ ಬಳಿ ಹಾಕಿದ್ದ ಮುರುಕು ಸ್ಟೂಲ್ ತೋರಿಸಿ ಕುಳಿತುಕೊಳ್ಳಲು ತಿಳಿಸಿದಳು. 'ನಾವೆಲ್ಲಾ ತುಂಬಾ ನೀಟ್ ಜನ. ಗಲೀಜು, ಕಸ, ಕೊಳೆ ಅಂದ್ರೆ ನಮ್ ಯಜಮಾನ್ರಿಗೆ ಆಗಲ್ಲ; ನಿಮಗೆ ಇಲ್ಲಿ ಇರೋದಿಕ್ಕಾಗಲ್ಲ. ಮನೆ ಖಾಲಿ ಮಾಡ್ರಿ' ಎಂದವಳೇ ಒಳ ನಡೆದಳು.

ನನ್ನಿಂದ ಆಕೆ ಏನನ್ನೂ ಕೇಳಲಿಲ್ಲ. ನಾನು ಅಲ್ಲೇ ಕುಳಿತಿರಬೇಕೋ, ಎದ್ದು ಹೋಗಬೇಕೋ ತಿಳಿಯಲಿಲ್ಲ. ಆಕೆ ಆಡಿದ ಮಾತು ನನ್ನಲ್ಲಿ ಛಲವನ್ನು ಮೂಡಿಸಿದ್ದವು. ನಾನು ಅಲ್ಲೇ ಕುಳಿತಿದ್ದೆ. ಎಷ್ಟೋ ಹೊತ್ತು. ಹತ್ತಿಪ್ಪತ್ತು ನಿಮಿಷಗಳ ಬಳಿಕ ಆಕೆ ಮತ್ತೆ ಏತಕ್ಕೋ ಹೊರ ಬಂದಾಗ ನನ್ನನ್ನು ಕಂಡಳು. ಮೊದಲಿನಂತೆ ಮತ್ತೆ ಆಕೆಯ ಮುಖ ಗಂಟಿಕ್ಕಿಕೊಂಡಿತು. ಏನು? ಎಂಬಂತೆ ನೋಡಿದಳು.

'ನೋಡಿ, ನಾವು ಏಕೆ ಮನೆ ಖಾಲಿ ಮಾಡಬೇಕು ಅಂತ ಸರಿಯಾಗಿ ಬಿಡಿಸಿ ಹೇಳ್ರಿ; ಸ್ವಚ್ಛತೆ ವಿಚಾರದಲ್ಲಿ ನಾವು ಯಾರಿಗೂ ಕಮ್ಮಿ ಇಲ್ಲ. ನಮ್ಮಿಂದ ಏನಾದ್ರೂ ಗಲೀಜಾದ್ರೆ ತೋರಿಸ್ರಿ; ನಮ್ಮ ಮನೆ ಒಳಗೆ ನಿಮ್ಮಲ್ಲಿಗಿಂತ ಸ್ವಚ್ಛತೆ ಇದೆ' ಎಂದು ಗಟ್ಟಿಯಾಗಿ ಹೇಳಿದೆ. ನನ್ನ ಗಡಸುದನಿ ನನಗೇ ಆಶ್ಚರ್ಯವನ್ನು ತಂದಿತ್ತು. ಆಕೆ ಜಾಸ್ತಿ ಮಾತಾಡಲಿಲ್ಲ. ನಾನೇ ಮುಂದುವರೆಸಿದೆ. 'ನಗರ ಸಭೆಯ ಸದಸ್ಯೆ ಆಗಿದ್ದೀರಿ; ಜಾತೀಯತೆ ಮಾಡ್ತೀರಿ; ಅಲ್ಲಿ ಏನೇನೊ ಭಾಷಣ ಮಾಡ್ತೀರಿ' ಎಂದು ಕಟುವಾಗಿ ಹೇಳಿ ಹಿಂತಿರುಗಿದೆ.

* * *

ಸಂಜೆ ಹರಿಶ್ಚಂದ್ರನ ಮುಂದೆ ಮತ್ತೆ ನನ್ನ ವರದಿ. ಆತ ನಿರ್ಲಿಪ್ತನಂತಿದ್ದ. 'ಕಡೆಗೆ ಆಕೆ ಮನೆ ಬಿಡಿ ಅಂತ ಹೇಳಲಿಲ್ಲ ತಾನೆ? ಸದ್ಯಕ್ಕೆ ಸುಮ್ನಿರು' ಅಂದ. ನನ್ನ ಮನಸ್ಸು ತಡೆಯಲಿಲ್ಲ. 'ಅದನ್ನು ಆಕೆ ಇಂದಲ್ಲ ನಾಳೆ ಹೇಳೇ ಹೇಳ್ತಾಳೆ. ನೀವು ಬೇರೆ ಮನೆ ಹುಡುಕ್ರಿ' ಎಂದಾಗ ಹರಿಶ್ಚಂದ್ರ ರೇಗಿದ. ಅಸಹಾಯಕತೆ ಹೆಚ್ಚಿತ್ತು. 'ಎಲ್ಲಿ ಅಂತ ನೋಡಲಿ? ರತ್ನಾಗಿರಿ, ಚಿಪಳೂಣ, ಕೊಲ್ಹಾಪುರ ಅಷ್ಟೇ ಏಕೆ ಮುಂಬಯಿಯಂಥ ಮಹಾನಗರಕ್ಕೆ ಹೋದರೂ ಈ ಸಮಸ್ಯೆ ಎದುರಾಗುತ್ತೆ. ತೀರಾ ಕಷ್ಟ ಬಂದಾಗ ನೋಡೋಣ, ಸುಮ್ನಿರು' ಎಂದ. ಹಿಂದೆ ನಾವು ಬಾಡಿಗೆಗೆ ಇದ್ದ ಮನೆಯ ಒಡತಿ ಅನಕ್ಷರಸ್ಥೆ; ಹಿಂದುಳಿದ ಕುಣಬಿ ಜಾತಿಯಾಕೆ; ಅವರಿವರ ಮನೆಗೆಲಸ ಮಾಡುವಾಕೆ. ಈಗ ನಾವಿರುವ ಮನೆಯ ಒಡತಿ ಗ್ರಾಜ್ಯುಯೇಟ್; ಮರಾಠಾ ಜಾತಿಯಾಕೆ; ನಗರ ಸಭಾ ಸದಸ್ಯೆ; ಸಮಾಜ ಸುಧಾರಕಿ. ಆದರೆ ಜಾತೀಯತೆ ಮಾಡುವುದರಲ್ಲಿ ಮಾತ್ರ ಇಬ್ಬರೂ ಸರಿಸಮ. ಹೀಗಿದ್ದರೂ ಮೊದಲಿನ ಮನೆಯ ಒಡತಿಯ ತಪ್ಪು ಕ್ಷಮಾರ್ಹ ಎಂದೆನಿಸಿತ್ತು.

ಇದೇ ಕಾಲದಲ್ಲಿ ಹರಿಶ್ಚಂದ್ರನ ಸಹೋದ್ಯೋಗಿ ಮೋಹನ್ ಮತ್ತು ಆತನ ಪತ್ನಿ ನೀಲಾ ಪರಿಚಯವಾದರು. ಒಂದು ದಿನ ಬೆಳಿಗ್ಗೆ ಆಫೀಸಿಗೆ ಹೊರಡುವಾಗ, ಹರಿಶ್ಚಂದ್ರ 'ಸಂಜೆ ಸ್ವಲ್ಪ ಬೇಗ ಬರ್ತೀನಿ; ರೆಡಿಯಿರು. ನನ್ನ ಸಹೋದ್ಯೋಗಿ ಮನೆಗೆ ಹೋಗೋಣ; ರಾತ್ರಿ ಅಲ್ಲೇ ಊಟ ಮಾಡಿ ಬರೋಣ' ಎಂದಾಗ ಹೂಂಗುಟ್ಟಲಿಲ್ಲ. ಗಂಡ 'ಯಾಕೆ? ಮಾತಾಡ್ತಿಲ್ಲ?' ಎಂದು ಒತ್ತಾಯಿಸಿದಾಗ, 'ನಾನು ಬರೋದಿಲ್ಲ; ನೀವು ಹೋಗಿ ಬನ್ನಿ' ಎಂದೆ. 'ಹುಷಾರಿಲ್ವೆ?' ಎಂಬ ಪ್ರಶ್ನೆ ಬಂದಾಗ, 'ಚೆನ್ನಾಗಿದ್ದೀನಿ; ಅದರೆ ನಾನು ಬರೋದಿಲ್ಲ; ಅಲ್ಲೂ ಜಾತಿ ಕೇಳೋದು, ಅವಮಾನ ಆಗೋದು ನನಗೆ ಬೇಕಿಲ್ಲ' ಎಂದೆ ಹಟದಿಂದ. ಆಗ ಗಂಡ ಸಮಾಧಾನ ಹೇಳಿ 'ಮೋಹನ್-ನೀಲಾ ಅಂಥವರಲ್ಲ; ಅವರು ಜಾತೀಯತೆ ಮಾಡುವವರಲ್ಲ; ನನಗೆ ಚೆನ್ನಾಗಿ ಗೊತ್ತು; ಸಂಜೆ ರೆಡಿಯಿರು' ಎಂದು ಭರವಸೆ ನೀಡಿದರೂ, ಮನಸ್ಸಿನಲ್ಲಿ ಅಳುಕು ಇತ್ತು.

* * *


ಹರಿಶ್ಚಂದ್ರನ ಒತ್ತಾಯಕ್ಕೆ ಒಪ್ಪಿ, ಸಂಜೆ ರೆಡಿಯಾದೆ. ಗಂಡ ಬರುತ್ತಲೇ 'ಚಹಾ ಮಾಡಲೇ?' ಎಂದು ಕೇಳಿದಾಗ, 'ಬೇಡ; ಚಹನೂ ಅಲ್ಲೇ ಸಿಗುತ್ತೆ ಬಾ' ಎಂದು ಅರ್ಜೆಂಟಾಗಿ ಆಟೋರಿಕ್ಷಾದಲ್ಲಿ ಕರೆದೊಯ್ದ.

ಅದು ಎರಡನೇ ಮಹಡಿ ಮನೆ. ಮೆಟ್ಟಿಲು ಹತ್ತುವಾಗಲೂ ನನಗೆ ಭಯವಿತ್ತು. ಮತ್ತೆ ಜಾತಿ ವಿಚಾರ ಬಂದು ಅವಮಾನವಾಗುವ ನಿರೀಕ್ಷೆಯನ್ನು ನೆನೆದು, ಮನಸ್ಸು ಬೆಚ್ಚಿ ನಿಲ್ಲುತ್ತಿತ್ತು. ಹೆಜ್ಜೆಯ ಸದ್ದು ಕೇಳುತ್ತಲೇ ಗಂಡ-ಹೆಂಡತಿ ಇಬ್ಬರೂ ಬಾಗಿಲಿಗೆ ಬಂದು ನಮ್ಮನ್ನು ಸ್ವಾಗತಿಸಿದರು. ನೀಲಾ ನನ್ನನ್ನು ಕೈ ಹಿಡಿದು ಒಳಗೆ ಕರೆದೊಯ್ದಳು, ನೇರವಾಗಿ ಅಡುಗೆ ಮನೆಗೆ. ನನ್ನ ಮನಸ್ಸು ತುಸು ತುಸು ನಿರಾಳವಾಗುತ್ತಿತ್ತು. ಅತ್ತ ಹಾಲ್‌ನಲ್ಲಿ ಗಂಡಸರು ಮುಕ್ತವಾಗಿ, ವಿನೋದವಾಗಿ ಹರಟೆ ಹೊಡೆಯುತ್ತಿದ್ದರೆ, ಇತ್ತ ಅಡುಗೆ ಮನೆಯಲ್ಲಿ ನಾವಿಬ್ಬರೂ ಹೆಂಗಸರು ಹಲವಾರು ವಿಷಯಗಳನ್ನು ಮಾತಾಡುತ್ತಿದ್ದೆವು.

ಚಹಾ-ಉಪಾಹಾರ-ಊಟದ ತಯಾರಿ ಏನೂ ಆದಂತಿರಲಿಲ್ಲ. ಮನೆಯಲ್ಲಿ ಗಂಡನಿಗೆ ನಾನು ಚಹಾ ಕೂಡ ಕೊಟ್ಟಿರಲಿಲ್ಲ. ನನ್ನ ಚಿಂತೆ ನೀಲಾಳಿಗೆ ತಿಳಿಯಿತೇನೊ ಎಂಬಂತೆ, ಫ್ಲಾಸ್ಕ್ ಒಂದರಿಂದ ನಾಲ್ಕು ಕಪ್‌ಗಳಿಗೆ ಆಕೆ ಚಹಾ ಬಗ್ಗಿಸಿದಳು. ಚಹಾ ಮಾಡಿಟ್ಟಿರುವುದು ಆಗಲೇ ನನಗೆ ಗೊತ್ತಾಗಿದ್ದು. ಹೀಗೆಯೇ ಆಕೆ ಊಟವನ್ನೂ ಸಿದ್ಧಪಡಿಸಿಟ್ಟಿದ್ದಳು. ಅಡುಗೆ ಮನೆ ಅತಿ ಶುಚಿಯಾಗಿತ್ತು; ಇಡೀ ಮನೆ ಒಪ್ಪವಾಗಿತ್ತು. ಅಲ್ಲಿನ ಓರಣ ಮನಸ್ಸಿಗೆ ಹಿತ ನೀಡುತ್ತಿತ್ತು.

ಎಷ್ಟೋ ಹೊತ್ತು ಮಾತಾಡಿದೆವು. ನಂತರ ತುಸು ದೂರ ವಾಕಿಂಗ್ ಹೋದೆವು. ಎಂಟೂವರೆ ಹೊತ್ತಿಗೆ ಮರಳಿದೆವು. ನನ್ನ ಸಹೋದರಿಯಲ್ಲೂ ಕಾಣದ ಉದಾರ ಗುಣ ನನಗೆ ನೀಲಾಳಲ್ಲಿ ಕಂಡಿತು. ದಾರಿಯಲ್ಲಿ ಏಕೋ ಮನಸ್ಸಿನಲ್ಲಿ ಮೂಡಿದ ಪ್ರಶ್ನೆಯೊಂದನ್ನು ತಟಕ್ಕನೆ ಅಡಿಬಿಟ್ಟೆ 'ಮೋಹನ್-ನೀಲಾ ಯಾವ ಜಾತಿ?' ಹರಿಶ್ಚಂದ್ರ ಅವಾಕ್ಕಾದ. ಅವನ ಮುಖ ನೋಡಿ ನನಗೂ ಆಶ್ಚರ್ಯವಾಯಿತು. ನನ್ನಿಂದ ಇಂಥ ಪ್ರಶ್ನೆ ಬಂದದ್ದನ್ನು ಕಂಡು ಅವನಿಗೆ ದುಃಖ ಮತ್ತು ನಗು ಏಕಕಾಲಕ್ಕೆ ಉಂಟಾಗಿದ್ದವು. ನನಗೆ ನಾಚಿಕೆಯಾಗಿತ್ತು. ಅಣ್ಣ-ಅತ್ತಿಗೆಗಿಂತ ಹೆಚ್ಚಾಗಿ ನಮ್ಮನ್ನು ನೋಡಿಕೊಂಡವರ ಜಾತಿಯನ್ನು ಕೇಳಬಾರದಿತ್ತು ಎಂಬ ಅರಿವಾಯಿತು.

ಹರಿಶ್ಚಂದ್ರ 'ಇಬ್ಬರೂ ಮರಾಠಾ; ಶುಭ್ರ ಮನಸ್ಸು-ಹೃದಯದವರು' ಎಂದಾಗ, ನಾನು ಇನ್ನೂ ದಿಗ್ಭ್ರಮೆಗೊಂಡೆ.



* * *

(ಮುಂದುವರಿಯುವುದು)

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2010-12

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ
ಚಾಮರಾಜಪೇಟೆ
ಬೆಂಗಳೂರು - 560 018